MYSORE LEGISLATIVE ASSEMBLY

EIGHTEENTH DAY.

Saturday, 21st March 1959.

The House met in the Assembly Hall, Vidhana Soudha, Bangalore, at Eight of the Clock.

MR. SPEAKER (SRI S. R. KANTHI, B.A., LL.B.) in the Chair.

BUDGET FOR 1959-60—DEMANDS FOR GRANTS.

Demand No. 20—Education

37 Education.

(Debate continued)

*ಶ್ರೀ ಅಣ್ಣಾರಾವ್ ಗಣಮುಖಿ (ವಿದ್ಯಾಶಾಖೆಯ ಮಂತ್ರಿಗಳು).—Mr. Speaker, Sir, ಈ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಮಾನ್ಯ ಸದಸ್ಯರು ಎಷ್ಟೋ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿ ಪ್ರೀ-ಪ್ರೈಮರಿ, ನರ್ಸರಿ, ಸೆಕೆಂಡರಿ ಮತ್ತು ಕೊಲಿಜಿಯೇಟ್ ಶಿಕ್ಷಣದ ಬಗ್ಗೆ ಚರ್ಚೆ ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಏಕೆ ಕಡ್ಡಾಯ ಮಾಡಿಲ್ಲ ಎಂಬ ವಿಷಯದ ಮೇಲೆ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ನಮ್ಮ ದೇಶದ ಘಟನೆಯ ಪ್ರಕಾರ ಹತ್ತು ವರ್ಷಗಳಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಬೇಕಾಗಿತ್ತು, ಆದರೆ ಸರ್ಕಾರ ಏಕೆ ಮಾಡಲಿಲ್ಲವೆಂದು ವಾದಿಸಿದ್ದಾರೆ. ಇತರ ಎಲ್ಲ ರಾಜ್ಯ ಸರ್ಕಾರಗಳೂ ಕೂಡ ಹಣದ ಕೊರತೆಯಿಂದ ಇದನ್ನು ಮಾಡುವುದು ಸಾಧ್ಯವಾಗಿಲ್ಲ. ಅದಕ್ಕೋಸ್ಕರ ನಮ್ಮಲ್ಲಿಯಾದರೂ ಕೂಡ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡುವುದು ಕಷ್ಟ.

ಈಗ ಮೊದಲನೆಯದಾಗಿ ಮೈಸೂರು ಸರ್ಕಾರದವರು ಒಂದು ನಿರ್ಣಯ ಏನು ತೆಗೆದುಕೊಂಡಿದ್ದಾರೆಂದರೆ, ಒಂದು ಮೈಲಿಯೊಳಗೆ ಒಂದು ಪ್ರಾಥಮಿಕ ಶಾಲೆ ಸ್ಥಾಪನೆ ಮಾಡಬೇಕು ಎಂದು ನಿನ್ನೆಯದಿನ ಶ್ರೀಮಾನ್ ಕೆಂಚಪ್ಪನವರು ಒಂದು ಮೈಲಿ ದೂರ ಎಂದರೆ ಯಾವ ಪ್ರಕಾರ ಹಿಡಿದಿದ್ದೀರಿ, ಏನೇನು ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿದ್ದೀರಿ ಎಂದು ಕೇಳಿದರು. ಮೊದಲು ತನ್ನ ಮನೆಯಿಂದ ಸ್ಕೂಲಿಗೆ ಹೋಗಬೇಕಾದರೆ ಒಂದು ಮೈಲಿಗಿಂತ ಹೆಚ್ಚು ದೂರವಿರಬಾರದು ಎನ್ನುವ ಉದ್ದೇಶ. ಸಣ್ಣಮಕ್ಕಳಿಗೆ ಮನೆಯ ಹತ್ತಿರ ಶಾಲೆ ಇರಬೇಕೇ ಹೊರತು ಶಾಲೆ ಇದ್ದಲ್ಲಿ ಮಕ್ಕಳು ಬರಬಾರದು ಎನ್ನುವ ಉದ್ದೇಶ. ಶಾಲೆ ಇದ್ದಲ್ಲಿಗೆ ಹೋಗಬೇಕೆಂದರೆ, ಆರೇಳು ವರ್ಷ ವಯಸ್ಸಿನ ಮಕ್ಕಳಿಗೆ ಬಹಳ ಕಷ್ಟವಾಗುತ್ತದೆ. 300 ಜನಸಂಖ್ಯೆ ಇರುವ ಹಳ್ಳಿ ಇದ್ದರೆ ಅಲ್ಲಿ ಒಂದು ಶಾಲೆ ಸ್ಥಾಪನೆಯಾಗಬೇಕು. ಆ ಪ್ರಕಾರ ಮಾಡಬೇಕಾದರೆ 2,222 ಶಾಲೆಗಳು ಬೇಕು. ಇದರ ಪೈಕಿ ಈ ವರ್ಷ ಒಂದು ಸಾವಿರ ಮತ್ತು ಮುಂದಿನ ವರ್ಷ 1960-61 ರಲ್ಲಿ 1,222 ಶಾಲೆಗಳನ್ನು ಕೊಟ್ಟರೆ ಎಲ್ಲ ಕಡೆಗೂ ಶಾಲೆಗಳು ಸ್ಥಾಪನೆಯಾಗುತ್ತವೆನ್ನುವುದನ್ನು ನಾವು ತಿಳಿದುಕೊಳ್ಳಬೇಕು. ಪ್ರಾಥಮಿಕ ವಿದ್ಯಾಭ್ಯಾಸವು ಬಹಳ ಅವಶ್ಯವಾಗಬೇಕು ಮತ್ತು ದೇಶದಲ್ಲಿ ಅದರ ಹೊಣೆ ಸರ್ಕಾರದಮೇಲೆ ಇದೆ; ಸೆಕೆಂಡರಿ ವಿದ್ಯಾಭ್ಯಾಸದ ಹೊಣೆ ಸರ್ಕಾರದ ಮೇಲೆ ಅಷ್ಟಿಲ್ಲ, ವಿಶ್ವವಿದ್ಯಾನಿಲಯ ಶಿಕ್ಷಣಕ್ಕೂ ಕೂಡ ಪ್ರಾಥಮಿಕ ಶಿಕ್ಷಣದಷ್ಟು ಮಹತ್ವ ಕೊಡಲಿಕ್ಕೆ ಬರುವುದಿಲ್ಲ. ಅದಕ್ಕಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ಈ ಎರಡು ವರ್ಷಗಳಲ್ಲಿ 300 ಜನಸಂಖ್ಯೆ ಇರತಕ್ಕ ಎಲ್ಲ ಹಳ್ಳಿಗಳಲ್ಲಿಯೂ ಮತ್ತು ಒಂದು ಮೈಲಿಯಲ್ಲಿರತಕ್ಕ ಕೆಲವು ಹಳ್ಳಿಗಳಲ್ಲಿಯೂ ಎಂದರೆ, 300 ಜನಸಂಖ್ಯೆ ಎರಡು ಹಳ್ಳಿಗಳಲ್ಲಿದ್ದರೆ ಅವೆರಡು ಹಳ್ಳಿಗಳ ಮಧ್ಯದಲ್ಲಿ ಒಂದು ಶಾಲೆಯನ್ನು ತೆರೆಯಬೇಕೆಂದು ಒಂದು phased programme ಹಾಕಿದ್ದೇವೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಒಂದು ಮೈಲಿಯೊಳಗೆ ಒಂದು ಸ್ಕೂಲು ಇರಬೇಕು, ಎಲ್ಲ ಕಡೆಯೂ ಶಾಲೆಗಳಿರಬೇಕು ಎಂದು ಹೇಳಿದವರು ಈಗ ಕೆಲವು ಹಳ್ಳಿಗಳಲ್ಲಿ ಎಂದು ಹೇಳುತ್ತಿದ್ದೀರಿ. ಮನೆಯಿಂದ ಒಂದು ಮೈಲಿಯೊಳಗೆ ಶಾಲೆ ಇರಬೇಕು ಎಂದು ಹೇಳಿದ್ದೀರಿ. ಮೈಸೂರು ದೇಶದ ವಿಸ್ತೀರ್ಣವನ್ನು ತೆಗೆದುಕೊಂಡು ಲೆಕ್ಕಹಾಕಿದ್ದೀರೋ ಅಥವಾ ಯಾವ ಹಳ್ಳಿ ಎಲ್ಲೇ ಇರಲಿ, ಒಂದು ಮೈಲಿಯೊಳಗೆ ಒಂದು ಶಾಲೆಯನ್ನು ಕೊಡುತ್ತೀರೋ ಎಂದು ಕೇಳುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಕಂಪಾಸ್ ತೆಗೆದುಕೊಂಡು ಹೋಗಿ ದೂರವನ್ನು ಅಳತೆ ಮಾಡಿಲ್ಲ. ಅಂದಾಜಿನ ಮೇಲೆ ಸರ್ವೆ ಮಾಡಿದ್ದಾರೆ. ಆ ರಿಪೋರ್ಟ್ ಪ್ರಕಾರ ಹೀಗೆ ಆಗುತ್ತದೆ. ಕೆಲವು ಕಡೆ ಈ ರೀತಿ ಮಾಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ಬಹಳ dispersed population ಇದ್ದಂಥ ಕಡೆಗಳಲ್ಲಿ ಸಾಧ್ಯವಾಗಲಿಕ್ಕಿಲ್ಲ. ಅಂಥ ಕೆಲವು ಸಂದರ್ಭಗಳು ಬರಬಹುದು. ಆದರೂ ಕೂಡ ನಮ್ಮ ಧೋರಣೆ ಏನೆಂದರೆ, ಒಂದು ಮೈಲಿಯ ಅಂತರದಲ್ಲಿ ಒಂದು ಶಾಲೆ, ಮಕ್ಕಳು ಎಲ್ಲಿರುತ್ತಾರೆಯೋ ಅಲ್ಲಿಗೆ ಶಾಲೆ ಒಯ್ಯಬೇಕು ಎನ್ನುವುದೇ ಉದ್ದೇಶ.

ಇನ್ನು ಕಡ್ಡಾಯ ಶಿಕ್ಷಣದ ವಿಷಯದಲ್ಲಿ ಕೇಂದ್ರ ಸರ್ಕಾರದ ಧೋರಣೆ ಏನಿದೆ ಎಂದರೆ ಮೂರನೆಯ ಯೋಜನೆಯ ಅವಧಿಯಲ್ಲಿ ಎಲ್ಲಕಡೆಯೂ ಕಡ್ಡಾಯ ಶಿಕ್ಷಣವನ್ನು 6 ರಿಂದ 11 ವಯಸ್ಸಿನವರೆಗೆ ಮಾತ್ರ

*Asterisk indicates that the remarks or speeches have not been revised by the member concerned-

(ಶ್ರೀ ಅಣ್ಣಾರಾವ್ ಗಣಮುಖಿ.)

ಒದಗಿಸಬೇಕು, ಅದಕ್ಕಿಂತಲೂ ಹೆಚ್ಚಿಗೆ ಇಲ್ಲ ಎಂದು ನಿರ್ಣಯವನ್ನು ಅವರು ಮಾಡಿದ್ದಾರೆ. ಕಡ್ಡಾಯ ಶಿಕ್ಷಣವನ್ನು ಕೂಡಲೇ ಏಕೆ ಮಾಡಲಿಲ್ಲ ವೆನ್ನುವುದು ಬಹಳ ಸರಳವಾದ ಪ್ರಶ್ನೆ. ಆದರೆ ನಾವು ಕೇಂದ್ರದ ಸಹಾಯವಿಲ್ಲದೆ ಒತ್ತಾಯ ಶಿಕ್ಷಣವನ್ನು ಜಾರಿಗೆ ತರುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರದವರು ಹಾಕಿಕೊಂಡಿರುವಂತೆ ಮೂರ ನೆಯ ಯೋಜನೆಯ ಅವಧಿಯಲ್ಲಿ ಆರರಿಂದ ಹನ್ನೊಂದು ವರ್ಷ ವಯಸ್ಸಿನವರಿಗೆ ಮಾತ್ರ ನಾವು ಪ್ರಾರಂಭ ಮಾಡಬಹುದು. ಹಾಗೆ ಮಾಡಬೇಕಾದರೆ ಅಧ್ಯಾಪಕರ ತರಬೇತಿಯೂ ಕೂಡ ಬಹಳ ಆವಶ್ಯಕವಾಗುತ್ತದೆ. ಒತ್ತಾಯ ಶಿಕ್ಷಣವನ್ನು ತಂದನಂತರ midday meals ಏರ್ಪಾಡು ಮಾಡಬೇಕು, attendance scholarships ಬಡ ಮಕ್ಕಳಿಗೆ ಕೊಡಬೇಕು. ಬಡವರಾದವರು ತಮ್ಮ ಮಕ್ಕಳನ್ನು ಭೂಮಿ ಉಳುವು ದಕ್ಕೆ, ದನಕರುಗಳನ್ನು ಕಾಯುವುದಕ್ಕೆ, ಕೆಲಸಕ್ಕೆ ಕಳುಹಿಸುತ್ತಿರುತ್ತಾರೆ. ಇವರಿಗೆಲ್ಲ ಕಡ್ಡಾಯ ಶಿಕ್ಷಣ ವನ್ನು ಕೊಡಬೇಕಾದರೆ ಬಡಮಕ್ಕಳಿಗೆ midday meals ಮತ್ತು attendance scholarships ಕೊಡಬೇಕು. ಇಲಾಖೆಯಲ್ಲಿ ಲೆಕ್ಕ ಹಾಕಿರುವಂತೆ ಇದಕ್ಕೆ ಐದು ವರ್ಷಗಳ ಯೋಜನೆಯಲ್ಲಿ ಹತ್ತು ಕೋಟಿ ರೂಪಾಯಿ ಬೇಕಾಗುತ್ತದೆ. ಇದರಲ್ಲಿ ಕೇಂದ್ರದಿಂದ ಐದುಕೋಟಿ ಮಾತ್ರ ಬರುತ್ತದೆ. ಕೆಲವು ಸಂದರ್ಭ ಗಳಲ್ಲಿ attendance scholarship ಬಗ್ಗೆ ಶೇಕಡ 75 ನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಈ ಪ್ರಕಾರ ಕೇಂದ್ರದಿಂದ ಎಷ್ಟು ಹಣ ಸಹಾಯವು ಬರು ತ್ತದೆಯೋ ಅದನ್ನು ಒದಗಿಸಿಕೊಂಡು ಮುಂದಿನ ಮೂರನೆಯ ಯೋಜನೆಯಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕೆಂದು ನಿರ್ಧರಿಸಿದ್ದೇವೆ.

ಶ್ರೀ ಎಫ್. ಎಚ್. ಮೊಹಸಿನ್ (ಹುಬ್ಬಳ್ಳಿ ನಗರ).--Attendance scholarship ಮುಂಬೈ ಭಾಗಕ್ಕೂ ಅನ್ವಯಿಸುತ್ತದೆಯೋ?

ಶ್ರೀ ಅಣ್ಣಾರಾವ್ ಗಣಮುಖಿ.–ಅದು break up ನಲ್ಲಿ ಬರುತ್ತದೆ. ಇಡೀ ಸಂಸ್ಥಾನಕ್ಕೋಸ್ಕರ 4·74 ಲಕ್ಷ ರೂಪಾಯಿ ಇದೆ. ಕೆಲವು ಸದಸ್ಯರಿಗೆ ಏನು ಸಂಶಯವಿದೆ ಎಂದರೆ ex-Mysore ಗೆ ಮಾತ್ರ ಕೊಡ ಬಹುದು ಎಂದು. ಆದರೆ ಇಡೀ ರಾಜ್ಯವನ್ನು ಗಣನೆಗೆ ತೆಗೆದುಕೊಂಡು ಎಲ್ಲ ಕಡೆಗೂ ಕೊಡಬೇಕೆಂದಿದ್ದೇವೆ.

ನಾನು ಕೆಲವು ಕಡೆ ಹೋದಾಗ ನನ್ನ ಕಡೆಯಿಂದ ಬಡಮಕ್ಕಳಿಗೆ ಬಟ್ಟೆ, ಅಂಗಿ, ಹೆಣ್ಣು ಹುಡುಗಿಯರಿಗೆ ಲಂಗ ವಗೈರೆ ಕೊಟ್ಟಿದ್ದಾಯಿತು. ಹೆಣ್ಣುಮಕ್ಕಳಿಗೆ attendance scholarship ಕೊಡುವುದಕ್ಕೆ ಹತ್ತಿ ದ್ದೇವೆ. ಅದರಲ್ಲಿ ಶೇಕಡಾ 75 ನಮಗೆ ಬರುತ್ತದೆ.

ಶ್ರೀಮಾನ್ ಘೋರ್ಪಡೆಯವರು 60-65 per cent wastage ಇದೆ ಎಂದು ಹೇಳಿದರು. ನಮ್ಮ ಸರ್ವೆ ರಿಪೋರ್ಟ್ ಪ್ರಕಾರ ex-Mysore ನಲ್ಲಿ ಒಂದರಿಂದ ನಾಲ್ಕನೆಯ ತರಗತಿಗಳಲ್ಲಿ 68 per cent wastage ಇದೆ ಎಂದು ಲೆಕ್ಕ ಸಿಕ್ಕುತ್ತದೆ, ಎಂದರೆ, ಮೊದಲನೆ ತರಗತಿಯಿಂದ ಎರಡನೆಯ ತರಗತಿಗೆ ಹೋಗುವುದರೊ ಳಗಾಗಿ ವಿದ್ಯಾರ್ಥಿಗಳ ಸಂಖ್ಯೆ ಕೆಲವು percentage drop ಆಗುತ್ತದೆ. ಅಲ್ಲಿಂದ ಮುಂದೆ ಕೆಲವು ಪರ್ಸೆಂ ಟೇಜ್ ಡ್ರಾಪ್ ಆಗುತ್ತದೆ. ನಾಲ್ಕನೆಯ ತರಗತಿಯಲ್ಲಿ ಮುಂದುವರಿಯಬೇಕಾದರೆ ಶೇಕಡಾ 32 ಹುಡುಗರಿರು ತ್ತಾರೆ. ಆದುದರಿಂದ 68 per cent wastage ಇದೆ. ಕಾರಣವೇನೆಂದರೆ ಬಡತನ ಮತ್ತು ಹುಡುಗರಿಗೆ ಆಹಾರ ಸಿಕ್ಕುವುದಿಲ್ಲ. ಹುಡುಗರನ್ನು ಕೆಲಸಗಳಿಗೆ ಕಳುಹಿಸುತ್ತಾರೆ. ಅದಕ್ಕಾಗಿ attendance scholarship ಹೆಚ್ಚಿಗೆ ಮಾಡಬೇಕು ಮತ್ತು midday meals ಗೋಸ್ಕರ ಸಹಾಯಬೇಕು ಎಂದು ಹೊಸದಾಗಿ ಒಂದು ಯೋಜನೆಯನ್ನು ತಯಾರು ಮಾಡಿ ಕೇಂದ್ರದಿಂದ ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಳ್ಳ ಬೇಕಾಗುತ್ತದೆ. Midday meals ಗೋಸ್ಕರ ನಾವು ಎರಡು ಲಕ್ಷ ರೂಪಾಯಿಗಳನ್ನಿಟ್ಟುಕೊಂಡಿ ದ್ದೇವೆ. ಮದರಾಸಿನಲ್ಲಿ ವಿಶೇಷ ಹಣವನ್ನೊದಗಿಸಿ ದ್ದಾರೆಂದು ಕೇಳಿದ್ದೇವೆ. ಆದುದರಿಂದ ನಾವೂ ಒಂದು ಯೋಜನೆಯನ್ನು ತಯಾರುಮಾಡಿ ಪ್ಲಾನಿಂಗ್ ಕಮಿಷನ್ನಿನ ಒಪ್ಪಿಗೆಯನ್ನು ತೆಗೆದುಕೊಂಡು ಎರಡು ಮೂರು ಲಕ್ಷಕ್ಕೆ ಹೆಚ್ಚಿಗೆ ಮಾಡಿ progressively increase ಮಾಡಿದರೆ ಒಳ್ಳೆಯದೆಂದು ನನಗೆ ಅನ್ನಿಸು ತ್ತದೆ. ಈ ಸವಲತ್ತುಗಳನ್ನೆಲ್ಲ ಕೊಟ್ಟರೆ ಮಕ್ಕಳು ಹೆಚ್ಚು ಹೆಚ್ಚಾಗಿ ಬರಬಹುದು. ಸರ್ಕಾರದವರು ಈಗ ಆಗುತ್ತಿರುವ wastage ಏನಿದೆ ಅದಕ್ಕೆ ಮಹತ್ವ ವನ್ನು ಕೊಡದೇಹೋದರೆ ಮುಂದೆ ಸರ್ಕಾರದ ಹಣ ಸುಮ್ಮನೆ ವೆಚ್ಚವಾಗಬಹುದು ಎಂದು ಅಂದಾಜು ಮಾಡಲಾಗಿದೆ. ಅದಕ್ಕಾಗಿ ಎರಡು ಯೋಜನೆಗಳು ಎಂದರೆ attendance scholarship ಮತ್ತು midday meals, ಇವುಗಳಿಗೆ ಮುಂದೆ ವಿಶೇಷ ಮಹತ್ವವನ್ನು ಕೊಟ್ಟು ಈ ವರ್ಷದಲ್ಲಿಯೇ ಸ್ವಲ್ಪ ಹಣವನ್ನು ಹೆಚ್ಚಿಗೆ ಒದಗಿಸತಕ್ಕ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಾರೆಂದು ನಾನು ಹೇಳ ಬಹುದು.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—Mid-day meals ಬಗ್ಗೆ ಏರ್ಪಾಡನ್ನು ಹರಿಜನರು ವಾಸಮಾಡುವ ಪ್ರದೇಶಗಳಿಗೂ ಅನ್ವಯಿಸಲಾಗು ತ್ತದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಒಂದು ಸಾವಿರಕ್ಕೆ ಕಡಮೆ ಜನಸಂಖ್ಯೆ ಇದ್ದಲ್ಲಿ ಮಾತ್ರ ಇದನ್ನು ಏರ್ಪಾಡು ಮಾಡಿಲ್ಲ. ಹೆಚ್ಚಿಗೆ ಜನರಿದ್ದರೆ, ಅಲ್ಲಿನ ಶಾಲೆಗಳಿಗೆ ಬಹಳ ದೂರದಿಂದ ಹುಡುಗರು ಬರುತ್ತಿರುತ್ತಾರೆ. ಅವರಿಗೆ ಊಟ ಸರಿಯಾಗಿ ಆಗಿರುವುದಿಲ್ಲ, ಆದ್ದರಿಂದ ಕೊಡಬೇಕಾಗುತ್ತದೆ. ಈ ಬಗ್ಗೆ ಮುಂದಿನ ಪಂಚ ವಾರ್ಷಿಕ ಯೋಜನೆಯಲ್ಲಿ ಹತ್ತು ಕೋಟಿ ರೂಪಾಯಿ ಗಳನ್ನು ಒದಗಿಸಿ, ಸಾಧಾರಣವಾಗಿ ಆರರಿಂದ ಹನ್ನೊಂದು ವರ್ಷ ವಯಸ್ಸಿನೊಳಗಿರುವ ಮಕ್ಕಳಿಗೆ ಕಡ್ಡಾಯ ವಿದ್ಯಾಭ್ಯಾಸದ ಏರ್ಪಾಡು ಮಾಡ ಬೇಕೆಂದಿದೆ. ಇನ್ನೊಂದು ಲಾಭವೆಂದರೆ, ಈಗಾಗಲೇ ಬೊಂಬಾಯಿನ ಪ್ರದೇಶದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತಂದದ್ದಾಗಿದೆ. ಈ ವರ್ಷ ಒಂದು ಸಾವಿರ ಉಪಾಧ್ಯಾಯರುಗಳನ್ನು ಆ ಪ್ರದೇಶಕ್ಕೆ ಕೊಟ್ಟಿದ್ದೇವೆ. ಹೀಗಾಗಿ ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಈ ಭಾಗದ liability ಇರುವುದಿಲ್ಲ. ಏನಿದ್ದರೂ ಆವೃತ್ತವೆಚ್ಚ ಮಾತ್ರ ಇರುತ್ತದೆ ಅಷ್ಟೆ.

ನಮ್ಮಲ್ಲಿ ಹಾಲಿ ಪ್ರೈಮರಿ ಸ್ಕೂಲುಗಳಿರುವುದು 21,045. 1958-59 ರಲ್ಲಿ 845 ಶಾಲೆಗಳನ್ನು ತೆರೆದಿದ್ದೇವೆ. ಇನ್ನು ಮುಂದಿನ ಸಾಲಿನಲ್ಲಿ 1959-60 ರಲ್ಲಿ ಇನ್ನೊಂದು ಸಾವಿರವನ್ನೂ 1960-61 ಕ್ಕೆ ಮತ್ತೊಂದು ಸಾವಿರವನ್ನೂ ತೆರೆದು ಇಡೀ ಪ್ರದೇಶ ದಲ್ಲಿ ಒಂದು ಮೈಲಿಗೊಂದು ಪ್ರೈಮರಿ ಪಾಠಶಾಲೆ ಯಿರುವಂತೆ ಏರ್ಪಾಡು ಮಾಡಲಾಗುತ್ತದೆ.

ಇನ್ನು ಮಿಡಲ್ ಸ್ಕೂಲು ಮತ್ತು ಹೈಸ್ಕೂಲುಗಳು. ಎಲ್ಲೆಲ್ಲಿ ಮಿಡಲ್ ಸ್ಕೂಲುಗಳ ಅವಶ್ಯಕತೆಯಿದೆ ಅಲ್ಲಿ ಮಾತ್ರ ಮಿಡಲ್ ಸ್ಕೂಲುಗಳನ್ನು ಮಾಡುತ್ತೇವೆಯೇ ಹೊರತು, ಎಲ್ಲ ಕಡೆಯಲ್ಲೂ ತೆರೆಯುವುದಿಲ್ಲ. ಹೈಸ್ಕೂಲಿನ ವಿಷಯದಲ್ಲೂ ಅಷ್ಟೇ. ಹುಡುಗರು ಜಾಸ್ತಿ ಇದ್ದಲ್ಲಿ ಮಾತ್ರ ಮಿಡಲ್ ಸ್ಕೂಲು ತೆರೆಯಬೇಕೆಂಬುದೇ ಸರ್ಕಾರದವರ ಧ್ಯೇಯ. ಏಕೆಂದರೆ, ಪ್ರೈಮರಿ ವಿದ್ಯಾಭ್ಯಾಸದಲ್ಲೇ ಮಿಡಲ್ ಸ್ಕೂಲು ವಿದ್ಯಾಭ್ಯಾಸವೂ ಕೂಡ ಸ್ವಲ್ಪ ಮಟ್ಟಿಗೆ ಸೇರಿದೆ ಯೆನ್ನಬಹುದು.

ಬೇಸಿಕ್ ಸ್ಕೂಲುಗಳ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲೀಗ 2,671 ಬೇಸಿಕ್ ಶಾಲೆಗಳಿವೆ. ಇಂಥ ಜೀವಂತ ಶಿಕ್ಷಣ ಶಾಲೆಗಳಲ್ಲಿ ಬೊಂಬಾಯಿ ಪ್ರದೇಶದಲ್ಲಿ 1,324 ಇವೆ.

Sri C. M. ARUMUGHAM (Kolar Gold Fields).—I want to know how many middle schools you are going to start within the Second Five-Year Plan ?

Sri ANNA RAO GANAMUKHI.—That estimate has not been made so far.

Sri C. M. ARUMUGHAM.—When you have not made up your mind and when you have not drawn up your programme for the Second Five-Year Plan, why do you talk of the Third Five-Year Plan ?

Sri ANNA RAO GANAMUKHI.—We will go on upgrading these schools into middle schools wherever there is a reasonable number. Wherever it is warranted by the numbers, we will certainly open a middle school.

ಹೀಗೆ, ನಾನು ಹೇಳಿದ 2,671 ಬೇಸಿಕ್ ಸ್ಕೂಲುಗಳಲ್ಲಿ 1,324 ಬೊಂಬಾಯಿ ಪ್ರದೇಶದಲ್ಲಿ, ಹಳೆಯ ಮೈಸೂರಿನಲ್ಲಿ 967, ಹೈದರಾಬಾದ್ ಕರ್ನಾಟಕದಲ್ಲಿ 224, ಸೌತ್ ಕೆನರಾದಲ್ಲಿ 111, ಕೊಡಗಿನಲ್ಲಿ 145 ಇದ್ದು ಹಳೆಯ ಮೈಸೂರಿನಲ್ಲಿಯೂ ಮತ್ತು ಹೈದರಾಬಾದ್ ಕರ್ನಾಟಕದಲ್ಲಿಯೂ ಬಹಳ ಕಡಮೆ ಸಂಖ್ಯೆಯಲ್ಲಿವೆಯೆನ್ನಬಹುದು. ಮಾನ್ಯ ಸದಸ್ಯರು ಬೇಸಿಕ್ ಶಿಕ್ಷಣವನ್ನು ಎಲ್ಲ ಕಡೆಯಲ್ಲಿಯೂ ಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ನಮ್ಮಲ್ಲಿರುವ 24,045 ಶಾಲೆಗಳ ಪೈಕಿ ಈಗ ಬೇಸಿಕ್ ಶಿಕ್ಷಣ ಕೊಡುವ 2,671ನ್ನು ಬಿಟ್ಟರೆ ಇನ್ನು ಎಷ್ಟು ಸ್ಕೂಲುಗಳನ್ನು ನಾವು ಪರಿವರ್ತಿಸಬೇಕಾಗಿದೆಯೆಂಬುದು ವೇದ್ಯವಾಗುತ್ತದೆ. ಮದ್ರಾಸಿನಲ್ಲಿ ಸೇರಿದ ಸೆಂಟ್ರಲ್ ಅಡ್ವೈಸರಿ ಎಜುಕೇಷನ್ ಕೌನ್ಸಿಲ್‌ನವರು ಇದನ್ನೆಲ್ಲಾ ಯೋಚನೆಮಾಡಿ ಒಂದು ಅಂದಾಜು ತಯಾರುಮಾಡಿ ದೇಶದಲ್ಲೆಲ್ಲಾ fullfledged ಆಗಿ ಬೇಸಿಕ್‌ಸ್ಕೂಲುಗಳನ್ನು ಪ್ರಾರಂಭಿಸಬೇಕಾದರೆ ಇನ್ನೂ ಹತ್ತು ವರ್ಷಗಳು ಬೇಕಾಗುತ್ತವೆಂದು ಹೇಳಿದ್ದಾರೆ. ನಮ್ಮಲ್ಲಿ ಎರಡು ರೀತಿಗಳಲ್ಲಿ ಈ problemನ್ನು ಎದುರಿಸಬೇಕೆಂದಿದ್ದೇವೆ. ಕೆಲವು ಶಾಲೆಗಳಲ್ಲಿ Basic Equipmentಗಳನ್ನೆಲ್ಲಾ ಕೊಟ್ಟು, ಬೇಸಿಕ್ ಶಿಕ್ಷಣದಲ್ಲಿ ಟ್ರೈನಿಂಗ್ ಆಗಿರುವ ಉಪಾಧ್ಯಾಯರುಗಳನ್ನೂ ಸಾಕಷ್ಟು ಒದಗಿಸಿ full-fledged ಆಗಿ ಪ್ರಾರಂಭಿಸಬೇಕು; ಇನ್ನು ಕೆಲವು ಕಡೆಗಳಲ್ಲಿ basic orientation ಕೊಟ್ಟು ಬೇಸಿಕ್ ವಿಧ್ಯಾಭ್ಯಾಸದ basic features ಮಾತ್ರ ಇರುವಂತೆ ಮಾಡಿ ಏರ್ಪಾಡು ಮಾಡಬೇಕೆಂದಿದೆ. Full-fledged schoolsಗಳಲ್ಲಿ ಪೂರಾ ಎಷ್ಟು strength ಇವೆಯೋ ಅಷ್ಟು trained men ಆಗಿರಬೇಕು. Oriented Scheme ಪ್ರಕಾರವಾದರೆ ಕಡಮೆ teachers ಇದ್ದರೂ ಪರವಾಗಿಲ್ಲ. ಈ ರೀತಿಯಾಗಿ ಮಾಡಿದರೆ, equipmentನ್ನು ಮೊದಲನೆಯದಕ್ಕೆ ಏಳು ನೂರನ್ನೂ, ಎರಡನೆಯದಕ್ಕೆ ಮುನ್ನೂರನ್ನೂ ಕೊಡಬೇಕಾಗುತ್ತದೆಂದು ಯೋಚನೆ ಮಾಡಿದ್ದೇವೆ. ನಮ್ಮಲ್ಲಿ ಈ ಬಗ್ಗೆ ಬೇಕಾದ Trained Teacherಗಳಿಗೂ ಬಹಳ ಕೊರತೆಯಿದೆ. ಹಾಲಿ ಉಪಾಧ್ಯಾಯರುಗಳ ಟ್ರೈನಿಂಗಿಗಾಗಿ ನಮ್ಮಲ್ಲೀಗಾಗಲೆ 48 ಕಾಲೇಜುಗಳಿವೆ. ಇವುಗಳಲ್ಲಿ 25 ಜೀವಂತ ಶಿಕ್ಷಣದಲ್ಲಿ ತರಬೇತು ಕೊಡತಕ್ಕವು. ಉಳಿದುವು non-basic ಸ್ಕೂಲುಗಳು. ಈ ಸ್ಕೂಲುಗಳ ಒಟ್ಟು capacity 3,300 ಮಾತ್ರ. ಹಾಲಿ ನಮ್ಮಲ್ಲಿರುವ ಪ್ರೈಮರಿ ಸ್ಕೂಲುಗಳ ಟೀಚರುಗಳ ಸಂಖ್ಯೆಯನ್ನು ತೆಗೆದುಕೊಂಡರೆ 68,000 ನಮ್ಮಲ್ಲಿದೆ. ಇವರಲ್ಲಿ 19,000 ಜನ ಎಸ್. ಎಸ್. ಸಿ. ಮಾಡಿದವರು, 49,000 ಎಸ್.ಎಸ್.ಸಿ. ಆಗದವರು. ಇವರುಗಳಲ್ಲಿ ಹಾಲಿ 32,300 ಜನ ತರಪೇತು ಹೊಂದಿದವರಾಗಿದ್ದಾರೆ. ಉಳಿದವರಿಗೆ ತರಪೇತು ಆಗಬೇಕಾಗಿದೆ. ಇನ್ನು ಮುಂದೆ ಟ್ರೈನಿಂಗ್ ಕೊಡಬೇಕಾದರೆ ಬೇಸಿಕ್ ಟ್ರೈನಿಂಗನ್ನೇ ಕೊಡಬೇಕೆಂದಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಲೇಡಿ ಟೀಚರುಗಳೆಷ್ಟು ಮಂದಿ ಇದ್ದಾರೆ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದನ್ನು ನೋಡಿ ಹೇಳಬೇಕು. ನಮ್ಮಲ್ಲಿ ಹೆಂಗಸರು, ಗಂಡಸರು ಎಂದು ವ್ಯತ್ಯಾಸ ಮಾಡಿಲ್ಲ.

ಅಧ್ಯಕ್ಷರು.—ಶಕ್ಯವಿದ್ದರೆ ಆ ಸಂಖ್ಯೆಯನ್ನು ಕೊಡಬಹುದು.

ಶ್ರೀ ಅಣ್ಣಾರಾವ್ ಗಣಮುಖಿ.—ಈಗಲೇ ತರಿಸಿ ಕೊಡುತ್ತೇನೆ. ಹಾಲಿ ಇಷ್ಟೊಂದು ದೊಡ್ಡ ಸಂಖ್ಯೆಯಿರುವುದರ ಜೊತೆಗೆ ಮುಂದಿನ ಐದು ವರ್ಷಗಳಲ್ಲಿ ರಿಟೈರ್ ಆಗುವವರು, ಮರಣ ಹೊಂದುವವರು-ಇಂಥವರ ಸಂಖ್ಯೆಯನ್ನು ಸೇರಿಸಿಕೊಂಡರೆ ಸಾಮಾನ್ಯವಾಗಿ ನಾವು 60,000 ಉಪಾಧ್ಯಾಯರುಗಳಿಗೆ ತರಪೇತು ಕೊಡಬೇಕಾಗುತ್ತದೆಂದು ಕಾಣುತ್ತದೆ. ಖರ್ಚನ್ನು ನೋಡಿದಲ್ಲಿ ವರ್ಷಕ್ಕೆ 5,000 ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವುದೆಂದರೂ 15 ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಖರ್ಚಾಗುತ್ತವೆ. ಟ್ರೈನಿಂಗ್ ಕ್ಲಾಸುಗಳನ್ನು ಜಾಸ್ತಿ ಮಾಡಿದರೆ, ಅಲ್ಲಿಗೆ ಟೀಚರ್‌ಗಳನ್ನು ಕಳುಹಿಸಿದಂತೆ, ಅವರಿದ್ದ ಸ್ಥಾನಗಳನ್ನು ತಾತ್ಕಾಲಿಕವಾಗಿ ಭರ್ತಿ ಮಾಡಬೇಕಾಗುತ್ತದೆ. ಇದರಿಂದಾಗಿಯೂ ನಮಗೆ ಹೆಚ್ಚಿಗೆ ಹಣಕಾಸಿನ ಖರ್ಚು ಬರುತ್ತದೆ. ಇದಕ್ಕೆ ಐದು ಸಾವಿರ ಉಪಾಧ್ಯಾಯ

8-30 A.M.

ರನ್ನು ಟ್ರೈನ್ ಮಾಡಬೇಕು, ಹದಿನೈದು ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಕಾರಣ ಇದರ ವಿಷಯದಲ್ಲಿ ಹೆಚ್ಚು ವಿಚಾರ ಮಾಡಬೇಕಾಗುತ್ತದೆ. ಈಗಿನ ಟ್ರೈನಿಂಗ್ ಕಾಲೇಜುಗಳಲ್ಲಿ ಬಹಳ ಮಟ್ಟಿಗೆ 16 ಸಾವಿರ ಉಪಾಧ್ಯಾಯರನ್ನು ತರಪೇತು ಮಾಡಬಹುದು, ಅಷ್ಟು ಅವಕಾಶವಿದೆ. ಪೂರ್ತಿ ಕ್ಯಪ್ಯಾಸಿಟಿ ವರ್ಕ್ ಮಾಡಿದರೆ ಇಷ್ಟು ಮಂದಿ ತರಪೇತು ಮಾಡ

(ಶ್ರೀ ಅಣ್ಣಾರಾವ್ ಗಣಮುಖಿ)

ಬಹುದು. ಆದರೆ ಖರ್ಚು ಮಾತ್ರ ಐದು ಸಾವಿರಕ್ಕೆ 15 ಲಕ್ಷ ರೂಪಾಯಿ ಆಗುತ್ತದೆ.

ಬಿ.ಇ.ಡಿ. ಕಾಲೇಜುಗಳು ನಮ್ಮ ದೇಶದಲ್ಲಿ ಎಂಟು ಇವೆ, ಎರಡು ಬೆಂಗಳೂರಿನಲ್ಲಿ, ಎರಡು ಮೈಸೂರಿನಲ್ಲಿ, ಎರಡು ಮಂಗಳೂರಿನಲ್ಲಿ, ಒಂದು ಗುಲ್ಬರ್ಗಾದಲ್ಲಿ ಒಂದು ಬೆಳಗಾಂನಲ್ಲಿ ಇವೆ; ಮತ್ತು ಎರಡು ಬೇಸಿಕ್ ಸ್ಕೂಲುಗಳಿವೆ.

Sri J. B. MALLARADHYA (Nanjangud).—How are you going to implement your training programme?

ಶ್ರೀ ಅಣ್ಣಾರಾವ್ ಗಣಮುಖಿ.—ಅದನ್ನು ವರ್ಕ್‌ಔಟ್ ಮಾಡಿ ತೀರ್ಮಾನ ಮಾಡುವುದಕ್ಕೆ ಹೊರಟಿದ್ದಾರೆ. ಈಗ ಬಡ್ಜೆಟ್ಟಿನಲ್ಲಿ ಅವಕಾಶ ಮಾಡಿರುವ ಪ್ರಕಾರ ಹೇಳುತ್ತಿದ್ದೇನೆ. ಗ್ರಾಂಟನ್ನು ಹೆಚ್ಚಿಸಬೇಕೆಂದು ಹೇಳುತ್ತಾರೆ. ಸಾಧಾರಣವಾಗಿ ಒಂದು ರೀತಿ ಮಾಡಬಹುದು. ಈಗ ಒಂದು ವಿಚಾರ ಮಾಡಿರುವುದು ಈಗಿರುವ ಉತ್ತಮವಾದ ಹೈಸ್ಕೂಲುಗಳಲ್ಲಿ ತರಪೇತಾದ ಉಪಾಧ್ಯಾಯರು ಸಿಕ್ಕುತ್ತಾರೆ. ಬೆಳಿಗ್ಗೆ ಕೆಲವು ಟ್ರೈನಿಂಗ್ ಕಾಲೇಜುಗಳಲ್ಲಿ ಹೈಸೂಲಿನಲ್ಲಿರುವ ಉಪಾಧ್ಯಾಯರಲ್ಲಿ ಯಾರು ತರಪೇತು ಹೊಂದಿದ್ದಾರೋ ಅವರನ್ನು ಬೋಧನೆಗಾಗಿ ಉಪಯೋಗಿಸಿಕೊಳ್ಳಬಹುದು, ಕೆಲವು ಹೈಸ್ಕೂಲುಗಳನ್ನು ಟ್ರೈನಿಂಗ್ ಕಾಲೇಜಿಗೆ ಅಟ್ಯಾಚ್ ಮಾಡಿ ಟ್ರೈನ್ಡ್ ಉಪಾಧ್ಯಾಯರ ಮೂಲಕ ಕೆಲವು ಹೈಸ್ಕೂಲುಗಳಲ್ಲಿ ಟ್ರೈನಿಂಗ್ ಕ್ಲಾಸಸ್ ತೆಗೆದು ಅಲ್ಲಿ ಟ್ರೈನ್ ಮಾಡುವ ಪ್ರಶ್ನೆ ವಿಚಾರ ಮಾಡಬಹುದು. ಹೊಸದಾಗಿ ಮಾಡಬೇಕಾದರೆ ಹಣಕಾಸಿನ ಪ್ರಶ್ನೆ ಬರುತ್ತದೆ. ಆದ್ದರಿಂದ ಟ್ರೈನಿಂಗ್ ಕಾಲೇಜುಗಳನ್ನು ಇರುವ ಹೈಸ್ಕೂಲುಗಳಲ್ಲೇ ನಡೆಸಲು ವಿಚಾರ ಮಾಡುತ್ತಿದ್ದೇವೆ. ಹಾಗೆ ಮಾಡುವುದಾದರೆ ತರಪೇತಾದ ಪದವೀಧರರಾದ ಉಪಾಧ್ಯಾಯರಿದ್ದಾರೆ, ಅವರೇ ತರಪೇತು ಮಾಡಬಹುದು.

ಈಗ ನಮ್ಮಲ್ಲಿ ಪದವೀಧರರಾಗಿರುವ ಉಪಾಧ್ಯಾಯರು 4,158 ಜನ ಇದ್ದಾರೆ, ಅದರಲ್ಲಿ ತರಬೇತಾಗಿರುವವರು 2,524 ಜನರಿದ್ದಾರೆ, ತರಬೇತಾಗದಿರುವವರು 1,634 ಜನ. ಈ ಪ್ರಕಾರವಾಗಿ ಪದವೀಧರರಾದ 4,158 ಮಂದಿಯಲ್ಲಿ 2,524 ಅಂದರೆ ಬಹುಮತದವರು ತರಪೇತು ಪಡೆದವರು. ಈಗ ಕ್ಯಪ್ಯಾಸಿಟಿ ನಮಗಿರುವುದು 120, ಎರಡು ಬೇಸಿಕ್ ಟ್ರೈನಿಂಗ್ ಕಾಲೇಜುಗಳು ದೊಡ್ಡಬಳ್ಳಾಪುರ ಮತ್ತು ಧಾರವಾಡಗಳಲ್ಲಿವೆ. ಈ ಎರಡೂ ಕಡೆ ಬೇಸಿಕ್ ಟ್ರೈನಿಂಗ್ ನಡೆಯುತ್ತದೆ ಮತ್ತು ಇತರ ಕಾಲೇಜುಗಳನ್ನು ಕೂಡ ಮುಂದೆ ಬೇಸಿಕ್ ಆಗಿ ಬದಲಾಯಿಸಬೇಕಾಗುತ್ತದೆ, ಅದಕ್ಕೆ ಕಾರ್ಯಕ್ರಮ ಹಾಕಿ ಎಲ್ಲಾ ಉಪಾಧ್ಯಾಯರಿಗೂ ಬೇಸಿಕ್ ಟ್ರೈನಿಂಗ್ ಕೊಡಬೇಕೆಂದಿದೆ. ಪ್ರೈಮರಿ ಮತ್ತು ಸೆಕೆಂಡರಿ ಲೆವಲ್‌ಗಳಲ್ಲಿ ಎಲ್ಲರಿಗೂ ಬೇಸಿಕ್ ಟ್ರೇನಿಂಗ್ ಕೊಡಬೇಕಾಗುತ್ತದೆ. ಸಾಧಾರಣವಾಗಿ ಮುಂದೆ ಸೆಕೆಂಡರಿಯೆಲ್ಲಾ ಬೇಸಿಕ್ಕಿಗೆ ಸೇರುತ್ತದೆಂದು ಹೇಳಬಯಸುತ್ತೇನೆ.

ಇನ್ನು ಹೈಸ್ಕೂಲು, ನಮ್ಮಲ್ಲಿ ಒಟ್ಟು 570 ಹೈಸ್ಕೂಲುಗಳಿವೆ. ಅದರಲ್ಲಿ 114 ಸರ್ಕಾರಿ ಹೈಸ್ಕೂಲುಗಳು, 456 ಏಡೆಡ್ ಹೈಸ್ಕೂಲುಗಳು. ಮೈಸೂರಿನಲ್ಲಿ 304, ಬೊಂಬಾಯಿ ಕರ್ನಾಟಕದಲ್ಲಿ 152, ಹೈದರಾಬಾದು ಭಾಗದಲ್ಲಿ 24, ದಕ್ಷಿಣ ಕನಡಾದಲ್ಲಿ 77, ಕೊಡಗಿನಲ್ಲಿ 13 ಈ ಪ್ರಕಾರ 570 ಹೈಸ್ಕೂಲುಗಳು ನಮ್ಮಲ್ಲಿವೆ.

ಇನ್ನು ಪ್ರೈಮರಿ ಸ್ಕೂಲು ಒಂದು ಮೈಲಿ ರೇಡಿಯಸ್‌ನಲ್ಲಿರಬೇಕು, ಮಿಡ್ಲ್‌ಸ್ಕೂಲು 3–4 ಮೈಲಿ ರೇಡಿಯಸ್‌ನಲ್ಲಿರಬೇಕು, ಹೈಸ್ಕೂಲು 5-8 ಮೈಲಿ ರೇಡಿಯಸ್‌ನಲ್ಲಿರಬೇಕು ಎಂದು ಸರ್ವೆ ವರದಿ ಹೇಳುತ್ತದೆ. ಅದರ ಪ್ರಕಾರ ಇನ್ನೂ ನಮ್ಮ ದೇಶಕ್ಕೆ 400 ಹೈಸ್ಕೂಲುಗಳು ಬೇಕಾಗುತ್ತವೆ. 1958-59 ರಲ್ಲಿ ಸರ್ವೆ ಮುಗಿಸಿದ್ದಾರೆ. ಅದು ಪ್ರಿಂಟಾಗುತ್ತಿದೆ.

Sri C. J. MUCKANNAPPA (Gubbi).—Day before Yesterday in answer to a question you stated that we were not taking over the High Schools managed by local bodies. But you have taken good many schools in Hyderabad Karnatak. May I know the policy? When they are not in a position to manage them what is the object in taking over these schools?

ಶ್ರೀ ಅಣ್ಣಾರಾವ್ ಗಣಮುಖಿ.—ಹೈದರಾಬಾದ್ ಕರ್ನಾಟಕದಲ್ಲಿ ಪ್ರೈಮರಿ ಶಾಲೆಗಳನ್ನೆಲ್ಲಾ ಸರಕಾರ ವಹಿಸಿಕೊಂಡಿದೆ, ಕೆಲವು ಹೈಸ್ಕೂಲುಗಳನ್ನು ತೆಗೆದಿದೆ, ಪೂರ್ಣವಾಗಿ ಖಾಸಗಿ ಹೈಸ್ಕೂಲುಗಳೇನಿವೆ ಆ ವಿಚಾರದಲ್ಲಿ ಕೈ ಹಾಕುತ್ತಿಲ್ಲ. ಪ್ರೈವೇಟ್ ಬಾಡೀಸ್ ತೆಗೆದುಕೊಂಡರೆ ನಾವು ಕೊಡಬಹುದು. ಬಹಳ ಹಿಂದುಳಿದ ಪ್ರದೇಶ ವಿರುವಕಡೆ ಹೈಸ್ಕೂಲು ಇಲ್ಲದಿದ್ದರೆ ನಾವು ತೆಗೆಯಬಹುದು. ಶರಣಗೌಡರ ಕ್ಷೇತ್ರದಲ್ಲಿ ಒಂದು ಹೈಸ್ಕೂಲೂ ಇರಲಿಲ್ಲ. ಅಂಥಕಡೆ ಒಂದೊಂದು ತೆರೆದಿದ್ದೇವೆ. ಇಲ್ಲದಿದ್ದರೆ ಮಾತ್ರ ಅಂಥ ಕಡೆಗೆ ಹೈಸ್ಕೂಲು ಕೊಡುತ್ತೇವೆ.

Sri C. J. MUCKANNAPPA.—What is your policy in the matter of opening High Schools?

ಶ್ರೀ ಅಣ್ಣಾರಾವ್ ಗಣಮುಖಿ.—ಹಿಂದುಳಿದ ಪ್ರದೇಶವಾಗಿ ಹೈಸ್ಕೂಲು ಇಲ್ಲದಿರುವ ಕಡೆ ಕೊಡಬೇಕಾಗಿದೆ. ಕೆಲವು ಕಡೆ ಬೇಕಿಲ್ಲ.

ಅಧ್ಯಕ್ಷರು.—ಅಂಥ ಹಿಂದುಳಿದ ಪ್ರದೇಶ ಹೈದರಾಬಾದು ಕರ್ನಾಟಕದಲ್ಲಿದ್ದ ಹಾಗೆ ಕಾಣುತ್ತದೆ, ಬೊಂಬಾಯಿ ಕರ್ನಾಟಕದಲ್ಲಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಬೊಂಬಾಯಿ ಪ್ರಾಂತದ ವಿಚಾರದಲ್ಲಿ ನಮಗೆ ಕಷ್ಟವೇ ಇಲ್ಲ. ಒಬ್ಬರೂ ಬಂದು ಈ ವರ್ಷ ಹೈಸ್ಕೂಲು ಕೊಡಿ ಎಂದು ಬೇಡಿಲ್ಲ. ಹೈದರಾಬಾದು ಕರ್ನಾಟಕ ಮತ್ತು ಹಳೆಯ ಮೈಸೂರಿನಲ್ಲಿ ಅದರ ಅವಶ್ಯಕತೆ ಹೆಚ್ಚು. ಎಂಟು ಮೈಲಿ ಅಂತರದೊಳಗೆ ನಾಲ್ಕು ಹೈಸ್ಕೂಲುಗಳನ್ನು ತೆಗೆಯುತ್ತೇವೆ, ಅದಕ್ಕಾಗಿ ಗ್ರಾಂಟು ಕೊಡಿ ಎಂದು ಕೇಳಿದರೆ ಗ್ರಾಂಟು ಕೊಡುವುದಕ್ಕಾಗುವುದಿಲ್ಲ. ಇನ್ನು ಈ ರೂಲನ್ನು ಇದೇ ರೀತಿಯಾಗಿ ಗರ್ಲ್ಸ್ ಹೈಸ್ಕೂಲ್ ಬಗ್ಗೆ strict ಆಗಿ ಮಾಡುತ್ತೇವೆಂದು ಹೇಳುವುದಿಲ್ಲ. ಹೆಣ್ಣುಮಕ್ಕಳ ಸಲುವಾಗಿ ಹೈಸ್ಕೂಲು ತೆರೆಯಬೇಕಾಗುತ್ತದೆ. ಎಲ್ಲೆಲ್ಲಿ ಇಂಥ ಹೈಸ್ಕೂಲುಗಳು ಬೇಕಾಗಿವೆಯೋ ಅಲ್ಲಲ್ಲಿ ಪ್ರಾರಂಭಿಸುತ್ತೇವೆ. ಇಲ್ಲದೇ ಹೋದರೆ ಒಂದು section ಆದರೂ ಪ್ರಾರಂಭಿಸುತ್ತೇವೆ. ಅನೇಕ ಕಡೆಗಳಲ್ಲಿ ಲೋಕಲ್ ಬೋರ್ಡ್ಸ್ ಮುನಿಸಿಪಾಲಿಟಿಗಳು ಹೈಸ್ಕೂಲುಗಳನ್ನು ನಡೆಸುತ್ತಿವೆ. ಕೆಲವು ಪ್ರದೇಶಗಳಲ್ಲಿ ಮುನಿಸಿಪಾಲಿಟಿಗಳು ಹೈಸ್ಕೂಲುಗಳನ್ನು ನಡೆಸುವುದಿಲ್ಲ ಈ ವಿಚಾರ

ದಲ್ಲಿ ಮಲೆನಾಡು ಪ್ರದೇಶ ಹಿಂದೆ ಉಳಿದಿದೆ ಎಂದು ಎನ್ನಲಿಕ್ಕೆ ಬರವದಿಲ್ಲ. ಯಾಕೆಂದರೆ ಮಲೆನಾಡು ಪ್ರದೇಶವಲ್ಲಿ ಒಂದೊಂದು ಭಾಗದಲ್ಲಿ ನಾಲ್ಕು ಹೈಸ್ಕೂಲುಗಳು ಇವೆ. ಆದರೆ ಪ್ರೈಮರಿ ಸ್ಕೂಲುಗಳ ವಿಚಾರದಲ್ಲಿ ಮತ್ತು ಎಲ್ಲಾ ಕಡೆಗೂ ಶಾಲೆಗಳನ್ನು ಪ್ರಾರಂಭಿಸಲಾಗುವುದು. ಕೆಲವೊಂದು ಹಳ್ಳಿಗಳಲ್ಲಿ ಜನಸಂಖ್ಯೆ ಕಡಮೆಯಾಗಿರುವದರಿಂದ ಒಂದು ಕಡೆ ಬೆಳಿಗ್ಗೆ ಮತ್ತೊಂದು ಕಡೆ ಸಾಯಂಕಾಲ ಕ್ಲಾಸುಗಳನ್ನು ನಡೆಸಲಾಗುತ್ತಿದೆ. ಇಂಥ ಸ್ಥಳಗಳಲ್ಲಿ ಶಾಲೆಗಳನ್ನು ತೆರೆಯಬೇಕಾಗುತ್ತದೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಇಂಥ ಶಾಲೆಗಳನ್ನು ನಡೆಸುವುದಕ್ಕೆ ಸ್ಕೂಲು ಬೋರ್ಡುಗಳು ಇವೆ. ಎಲ್ಲಿ ಶಾಲೆಗಳನ್ನು ನಡೆಸುವದಕ್ಕೆ ಆಗುವುದಿಲ್ಲವೆಂದು ವರದಿ ಬರುತ್ತದೆಯೋ ಅಂಥಲ್ಲಿ ಸರಕಾರದ ಪೂರ್ಣ ಖರ್ಚಿನಿಂದ ಶಾಲೆಗಳನ್ನು ಕೊಡಿಸುತ್ತೇವೆ. ಇದಕ್ಕಾಗಿ ಇರುವ ಹಣವನ್ನು ಪೂರ್ತಿಯಾಗಿ ಖರ್ಚು ಮಾಡಲು ಸಾಧ್ಯವಾಗಿಲ್ಲ. ಒಟ್ಟು 570 ಹೈಸ್ಕೂಲುಗಳಲ್ಲಿ, ಮಲ್ಟಿಪರ್ಪಸ್ 59, ಹೈಯರ್ ಸೆಕೆಂಡರಿ 57 ಸ್ಕೂಲುಗಳು ಇವೆ. ಇಷ್ಟೇ ಅಲ್ಲದೆ 69 ಸ್ಕೂಲುಗಳನ್ನು convertಮಾಡಲಿಕ್ಕೆ ಮತ್ತು equipment ಕೊಡುವದಕ್ಕೆ ಒಂದು ಪ್ರಪೋಸಲ್ ಇದೆ. ನಮ್ಮ ಮೈಸೂರು ರಾಜ್ಯದಲ್ಲಿ ಒಟ್ಟು ನಾಲ್ಕು ವರ್ಷಗಳ ಕೋರ್ಸ್ ಉಳ್ಳ 12 ಹೈಸ್ಕೂಲುಗಳು ಇವೆ. Full-fledged high schools four years course ಇರತಕ್ಕ ಹೈಸ್ಕೂಲುಗಳು, ಮೈಸೂರಿನಲ್ಲಿ ಆರು ಕೊಡಗಿನಲ್ಲಿ ಎರಡು, ಬೇರೆ ಕಡೆ ನಾಲ್ಕು ಹೀಗೆ ಒಟ್ಟು 12 ಸ್ಕೂಲುಗಳು ಇವೆ. ಇದೊಂದು ಬೃಹದಾಕಾರದ ಪ್ರಶ್ನೆಯಾಗಿದೆ. ಈ ಯೋಜನೆಯು ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ಹೈಸ್ಕೂಲುಗಳನ್ನೂ ತೃತೀಯ ಪಾಂಚವಾರ್ಷಿಕ ಯೋಜನೆಯ ಅವಧಿಯೊಳಗಾಗಿ ಹೈಯರ್ ಸೆಕೆಂಡರೀ ಶಾಲೆಗಳಾಗಿ ವರ್ಪಡಿಸಲಾಗುವುದು. ನಮ್ಮ ಪ್ರದೇಶಕ್ಕೂ ಮದ್ರಾಸ್ ಪ್ರದೇಶಕ್ಕೂ ಅಂತರವೇನಿದೆ ಎಂದರೆ, ಮದ್ರಾಸಿನಲ್ಲಿ ಇಂಟಿಗ್ರೇಷನ್ ಪ್ರಾಬ್ಲೆಮ್ ಇರಲಿಲ್ಲ. ಬರಿ ರಿಫಾರ್ಮ್ ಪ್ರಾಬ್ಲೆಮ್ ಇತ್ತು. ಆದರೆ ನಮ್ಮಲ್ಲಿ ಇಂಟಿಗ್ರೇಷನ್ ಮತ್ತು ರಿಫಾರ್ಮ್ ಎರಡನ್ನೂ ಮಾಡಬೇಕಾಗಿದೆ. ಮದ್ರಾಸ್ ರಾಜ್ಯದಲ್ಲಿ ಹತ್ತು ವರ್ಷ ಅವಧಿಯಲ್ಲಿ ಎಲ್ಲ ಶಾಲೆಗಳನ್ನೂ ಮಲ್ಟಿಪರ್ಪಸ್ ಸ್ಕೂಲುಗಳನ್ನಾಗಿ ಮಾಡಿದ್ದಾರೆ. ಮಲ್ಟಿಪರ್ಪಸ್ ಸ್ಕೂಲುಗಳನ್ನು ಮಾಡುವದರಲ್ಲಿ ನಾಲ್ಕು ವಿಭಾಗಗಳು ಇವೆ. ಅವು ಯಾವವೆಂದರೆ agriculture, commerce, home science, fine arts ಈ ಒಂದೊಂದು ವಿಷಯವನ್ನೂ ತೆಗೆದುಕೊಂಡು ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಮುಂದೆ ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಬಹುದು. ಈ ರೀತಿ ಬೇರೆ ಬೇರೆ ವಿಷಯಗಳಿಗಾಗಿ ವಿದ್ಯಾಭ್ಯಾಸದ ಸೌಕರ್ಯ ಕಲ್ಪಿಸಿ ಕೊಟ್ಟರೆ ಎಲ್ಲ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು. ಇನ್ನು ಮುಂದಿನ ವರ್ಷ ನಾಲ್ಕು ಪಾಲಿಟೆಕ್ನಿಕ್ ಶಾಲೆಗಳನ್ನೂ ಮತ್ತು ಮೂರು ಎಂಜಿನಿಯರಿಂಗ್ ಕಾಲೇಜುಗಳನ್ನೂ ಐದು ಟೆಕ್ನಿಕಲ್ ಹೈಸ್ಕೂಲುಗಳನ್ನೂ ಪ್ರಾರಂಭಿಸ ಬೇಕೆಂದಿದ್ದೇವೆ.

Sri J. B. MALLARADHYA (Nanjangud).—The policy of the Government in regard to multi-purpose school *vis-a-vis* technical schools is not very clear. The House is anxious to know about that. Is the Government of India keen on multi-purpose schools and is the Government of Mysore keen on that? What is the attitude of the Government?

Sri ANNA RAO GANAMUKHI.—I am proceeding. I am not finishing the subject now. ಈಗ ಸದ್ಯಕ್ಕೆ 12 ಮಲ್ಟಿಪರ್ಪಸ್ ಹೈಸ್ಕೂಲುಗಳು ಇವೆ. ಇತರ ಹೈಸ್ಕೂಲುಗಳಲ್ಲಿ ಹೈಯರ್ ಸೆಕಂಡರಿ ಮಾಡಬೇಕಾಗುತ್ತದೆ. ಮೊದಲು equipment, accommodation, library ಮುಂತಾದ ಅನುಕೂಲತೆಗಳನ್ನು ಒದಗಿಸಿ ಕೊಡಬೇಕಾಗುತ್ತದೆ. ಇದಲ್ಲದೆ ಇಂಥ ಸಾಲೆಗಳಲ್ಲಿ ಶಿಕ್ಷಕರು ಬೇಕಾಗುತ್ತಾರೆ. Agricluture ವಿಷಯಕ್ಕಾಗಿ Agricluture graduate, ಟೆಕ್ನಿಕಲ್ ಕೋರ್ಸಿಗಾಗಿ ಇಂಜಿನಿಯರ್ಸ್, commerces ವಿಷಯಕ್ಕೆ Commerce graduates ಹೀಗೆ ಟ್ರೇನಿಂಗ್ ಕೊಡಬೇಕಾಗುತ್ತದೆ. ಮಲ್ಟಿಪರ್ಪಸ್‌ನಲ್ಲಿ ಎರಡು ಕೋರ್ಸಸ್ ಆಗಬೇಕು.

ಎಲ್ಲಾ ಟೆಕ್ನಿಕಲ್ ಕೋರ್ಸಿನಲ್ಲೂ ಶಿಕ್ಷಣಕೊಡಬಹುದು. ಅದೇ ಪ್ರಕಾರ teachersನ್ನು ನೇಮಕಮಾಡಬೇಕಾಗುತ್ತದೆ. ಆದರೆ ಈಗ ಪಿ.ಡಬ್ಲ್ಯು.ಡಿ.ನಲ್ಲಿ scales of pay ಹೆಚ್ಚಾಗಿರುವುದರಿಂದ Polytechnic institutionಗಳಿಗೆ ಇಂಜಿನಿಯರಿಂಗ್ ಗ್ರ್ಯಾಜುಯೇಟ್ಸ್ ಹೆಚ್ಚಾಗಿ ಬರುವುದಿಲ್ಲ; ಮತ್ತು ಅಂತಹ ಗ್ರ್ಯಾಜುಯೇಟ್ಸ್ ಯಾರನ್ನ appoint ಮಾಡುತ್ತೇವೆ ಅವರಿಗೆ ಆಯಾಯ ಕೋರ್ಸಿಗೆ ತಕ್ಕ ಟ್ರೇನಿಂಗ್ ಕೊಡಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಬೇಕಾದಷ್ಟು ಜನ ಎಂ.ಎ. ಮತ್ತು ಎಂ.ಎಸ್‌ಸಿ. ಪಾಸ್ ಮಾಡಿದವರು ಸಿಕ್ಕಲಿಕ್ಕಿಲ್ಲ. ಇದನ್ನು ಯೂನಿವರ್ಸಿಟಿಯವರು ದೂರಮಾಡಬೇಕಾಗುತ್ತದೆ. 1960-61ರಿಂದ ಹೊಸ ಸಿಲಬಸ್ ತರಬೇಕಾಗುತ್ತದೆ. ಎಲ್ಲಾ ಕಡೆಯೂ ತರುತ್ತೇವೆ. ಇನ್ನು ಕೆಲವು ಕಡೆ ಮೂರು ವರ್ಷದ್ದು ಕೋರ್ಸ್ ಇರುತ್ತದೆ, ನಾಲ್ಕು ವರ್ಷದ ಕೋರ್ಸ್ ತೆಗೆದರೆ ಮೂರು ವರ್ಷಮುಗಿಸಿಕೊಂಡು ನಾಲ್ಕನೆಯ ವರ್ಷ ಮತ್ತೊಂದು ಕಡೆ ಓದಬೇಕಾಗುತ್ತದೆ. ಇಂಥ ಸಮಸ್ಯೆಗಳು ಬರಬಹುದು.

Sri Y. VEERAPPA (Holenarsipur).—Is there a definite programme in regard to the introduction of multi-purpose high schools? In what time are you going to cover it?

Sri ANNA RAO GANAMUKHI.—I think, for our State, it will take six years. ಅದಕ್ಕೆ ಈಗ ನಾವು ಏನು ಮಾಡಿದ್ದೇವೆ ಎಂದರೆ ಮುಂದೆ ಡಿ.ಪಿ.ಐ. ಮುಖಾಂತರ ಯಾವ ಸ್ಕೂಲ್‌ನಲ್ಲಿ accommodation ಇಲ್ಲ, ಯಾವ ಸ್ಕೂಲ್‌ನಲ್ಲಿ accommodation, library ಕಡಮೆ ಇದೆ, ಇಂಥದನ್ನೆಲ್ಲಾ ನೋಡಿಕೊಂಡು ಅವುಗಳನ್ನು full fledged schools ಆಗಿ ಮಾಡಿ, ಅವನ್ನು multi-purpose schoolಗಳನ್ನಾಗಿ ಪರಿವರ್ತನೆ ಮಾಡುತ್ತೇವೆ. ಎಲ್ಲಿ ಮಾಡಿದ ಪರಿವರ್ತನೆ ಕೂಡಲೇ ಹಣ ಕೊಡಬೇಕಾಗುತ್ತದೋ ಅಂತಹ ಕಡೆ ಪರಿವರ್ತನೆ ಮಾಡುವುದಿಲ್ಲ.

Sri G. B. SHANKAR RAO (Hirekerur).—Are you going to convert all schools into multi-purpose high schools?

Sri ANNA RAO GANAMUKHI.—It is impossible unless you convert them into higher secondary schools.

ಅದಕ್ಕೇ ಅದೆಲ್ಲಾ ಹೈಯರ್ ಸೆಕಂಡರಿ ಎಂದು ತಿಳಿಯಬೇಕಾಗುತ್ತದೆ. ಎಲ್ಲಿ ಎಕ್ವಿಪ್‌ಮೆಂಟ್ ಕಡಮೆ ಇದೆ, ಎಲ್ಲಿ ಲೈಬ್ರೆರಿ ಸೌಲಭ್ಯ ಇಲ್ಲ, ಅಲ್ಲೆಲ್ಲಾ ಅದನ್ನು ಒದಗಿಸಬೇಕಾಗುತ್ತದೆ; ಮತ್ತು ಟ್ರೈನ್‌ಡ್ ಟೀಚರುಗಳನ್ನು ಕೂಡ ಹೆಚ್ಚಾಗಿ ಇಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಅದಕ್ಕೇ ಆರು ವರ್ಷದ ಅಂದಾಜು ಹೇಳಬಹುದು. ಎಲ್ಲಾ ಸ್ಕೂಲ್ಸ್ ಹೈಯರ್ ಸೆಕೆಂಡರಿ ಸ್ಕೂಲ್ಸ್ ಆಗುತ್ತವೆ. ಮಲ್ಟಿಪರ್‌ಪಸ್ ಸ್ಕೂಲ್ಸ್ ಆಗುತ್ತವೆಂದು ಹೇಳಲಿಕ್ಕೆ ಬರುವುದಿಲ್ಲ. ಅದಕ್ಕೆ ಅಗ್ರಿಕಲ್ಚರಲ್ ಗ್ರ್ಯಾಜುಯೇಟ್ಸ್, ಇಂಜಿನಿಯರಿಂಗ್ ಗ್ರ್ಯಾಜ್ಯುಯೇಟ್ಸ್, ಕಾಮರ್ಸ್ ಗ್ರ್ಯಾಜುಯೇಟ್ಸ್, ಆರ್ಟ್ಸ್ ಗ್ರ್ಯಾಜುಯೇಟ್ಸ್ ಎಲ್ಲಾ ಬೇಕು. ಗುತ್ತವೆ ಇದಕ್ಕೆ ಏಡೆಡ್‌ಸ್ಕೂಲ್ಸ್ ಮತ್ತು ಗವರ್ನ್‌ಮೆಂಟ್ ಸ್ಕೂಲ್ಸ್ ಎಂದು ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲ. ಈ ವರ್ಷದ ಬಡ್ಜೆಟ್‌ನಲ್ಲಿ ಯಾವ ಶಾಖೆಗಳಲ್ಲಿ ಎಕ್ವಿಪ್‌ಮೆಂಟ್ ಇಲ್ಲ, ಅಕಾಮೊಡೇಷನ್ ಇಲ್ಲ, ಅದನ್ನೆಲ್ಲಾ ಪೂರೈಸುವುದಕ್ಕಾಗಿ ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. 1960-61ರಲ್ಲಿ ಅದು ಒಂದು exploratory year ಎಂದು ಹೇಳುತ್ತಾರೆ. 8th, 9th, 10th, 11th class open ಮಾಡಬೇಕಾಗಿದ್ದರೆ ಎಲ್ಲಾ ಟೆಕ್ನಿಕಲ್ ಗ್ರ್ಯಾಜುಯೇಟ್ಸ್ ಬೇಕಾಗುತ್ತಾರೆ.

ಅಧ್ಯಕ್ಷರು.–ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ಸ್ ಏನಾಗುತ್ತದೆ?

ಶ್ರೀ ಅಣ್ಣಾರಾವ್ ಗಣಮುಖಿ.–ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್‌ಗಳನ್ನು ಅಬಾಲಿಷ್ ಮಾಡಿ ಎಲ್ಲಾ ಪ್ರೈಮರೀ ಸ್ಕೂಲುಗಳನ್ನು ಸರ್ಕಾರದವರೇ ತೆಗೆದುಕೊಳ್ಳುತ್ತಾರೆಯೇ ಎಂಬ ಅನುಮಾನ ಬಂದಿದೆ. ಪ್ರೈಮರಿ ಸ್ಕೂಲಿನ ಹೊಣೆ ಏನೋ ಸರ್ಕಾರದಮೇಲೆ ಇದೆ; ಒಪ್ಪುತ್ತೇನೆ. ಆದರೆ ಡಿಸ್ಟ್ರಿಕ್ಟ್‌ಸ್ಕೂಲ್ ಬೋರ್ಡುಗಳನ್ನು ಸರ್ಕಾರದವರೇ ನಡೆಸುತ್ತಾರೆ ಅನ್ನುವುದು ತಪ್ಪು. ಏಕೆಂದರೆ ಈಗಾಗಲೇ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಬಿಲ್ ಅಸೆಂಬ್ಲಿ ಮುಂದೆ ಇದೆ. ಅದರಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಯಾವ ಪ್ರಕಾರ ಆಡಳಿತ ನಡೆಯಬೇಕು, ತಾಲ್ಲೂಕು ಬೋರ್ಡಿಗೇ hand over ಮಾಡಬೇಕೇ ಅಥವಾ ಸರ್ಕಾರದವರೇ ನಡೆಸಬೇಕೇ ಎಂಬ ನಿರ್ಣಯ ತೆಗೆದುಕೊಂಡಮೇಲೆ ಗೊತ್ತಾಗುತ್ತದೆ. ಬೊಂಬಾಯಿನಲ್ಲಿ ಮಾತ್ರ ಈ ಸ್ಕೂಲ್‌ಬೋರ್ಡ್‌ಗಳು ಇವೆ. ಅವುಗಳನ್ನು ಮೈಸೂರಿನಲ್ಲಿರುವ ಹಾಗೆ ಲಾಗು ಮಾಡಬೇಕಾಗುತ್ತದೆ ಅಂತೂ ಯಾವುದಾದರೂ ಒಂದು ಯೂನಿಫಾರ್ಮಿಟಿ ತರಬೇಕಾಗುತ್ತದೆ.

Sri G. B. SHANKAR RAO (Hirekerur).—Are you going to take over private schools?

ಶ್ರೀ ಅಣ್ಣಾರಾವ್ ಗಣಮುಖಿ.—ಪ್ರೈವೇಟ್ ಸ್ಕೂಲುಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಯಾರು ಹೇಳಿದರು? ಪ್ರೈವೇಟ್‌ನವರು ಕಾಲೇಜ್ ನಡೆಸಬಹುದು, ಪ್ರೈಮರೀ ಸ್ಕೂಲು ನಡೆಸಬಹುದು, ನರ್ಸರೀ ಸ್ಕೂಲು ನಡೆಸಬಹುದು. ಅಂಥಾದ್ದು ಯಾವುದನ್ನೂ ಸರ್ಕಾರ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಯಾರಾದರೂ ನಮ್ಮ ಕಡೆಯಿಂದ ನಡೆಸುವುದಕ್ಕೆ ಆಗುವುದಿಲ್ಲ ಎಂದುಬಿಟ್ಟರೆ ನಾವು ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಪ್ರೈಮರೀ ಸ್ಕೂಲು ನಡೆಸುವುದು ಸರ್ಕಾರದವರ ಹೊಣೆ. ನಂಜನಗೂಡಿನ ವಿಷಯ ಹೇಳಿದರು. ಅಂಥಲ್ಲಿ ಪ್ರೈಮರೀ ಸ್ಕೂಲು ತೆಗೆಯಿರಿ ಎಂದರೆ ಅವಶ್ಯ ತೆಗೆಯುತ್ತೇವೆ.

ಅಧ್ಯಕ್ಷರು.—ಅದು ಇನ್ನೂ ನಿರ್ಣಯ ಆಗಿಲ್ಲ ಎಂದು ಭಾವಿಸಬಹುದೇ?

ಶ್ರೀ ಅಣ್ಣಾರಾವ್ ಗಣಮುಖಿ.—ಆ ವಿಷಯ ನಿರ್ಣಯ ಆಗಿಲ್ಲ. ಆ ಬಿಲ್‌ನಲ್ಲಿ ಏನಾಗುತ್ತದೆ ಎಂಬುದನ್ನು ನೋಡಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬಿಲ್‌ನಲ್ಲಿ obligatory ಆಗಿ ಇರುವುದಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಮೊನ್ನೆ ದಿವಸ ಲೋಕಲ್ ಗವರ್ನಮೆಂಟ್ ಮಿನಿಸ್ಟರೂ, ನಾನೂ ವಿಚಾರ ಮಾಡಿದ್ದೇವೆ. ಯಾವ ನಿರ್ಣಯಕ್ಕೂ ಬಂದಿಲ್ಲ. ಇದು ಫೈನಲ್ ಆಗುವುದಕ್ಕೆ ಮುಂಚೆ ಯಾವ ನಿರ್ಣಯಕ್ಕೂ ಬರುವಹಾಗಿಲ್ಲ. ಏನೇ ಆದರೂ ಶೇಕಡ 90 ಖರ್ಚನ್ನೆಲ್ಲ ಈಗಲೂ ನಾವೇ ಹೊರುತ್ತಿದ್ದೇವೆ ಆದ್ದರಿಂದ ಸ್ಕೂಲ್ ಬೋರ್ಡಿನವರಿಗೇನೂ financial burden ಇಲ್ಲ.

ಅಲ್ಲಿಂದ ಶ್ರೀ ಮಲ್ಲಾರಾಧ್ಯರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಪ್ರೈಮರೀ ಎಜ್ಯುಕೇಷನ್ ಬೋರ್ಡ್, ಸೆಕೆಂಡರೀ ಎಜ್ಯುಕೇಷನ್ ಬೋರ್ಡ್ ಇದರಲ್ಲೆಲ್ಲಾ non-Academic persons ಅನ್ನೇ ಹೆಚ್ಚಾಗಿ ಹಾಕಿದ್ದೀರಿ ಎಂದು ಹೇಳಿದರು.

Sri J. B. MALLARADHYA.—I am afraid the Hon'ble Minister for Education has not taken down the notes properly. That was not my statement at all. I said sufficient representation has not been given to the teaching staff.

Sri ANNA RAO GANAMUKHI.—You shall have to correct the statement if I give the figures.

Sri J. B. MALLARADHYA.—I am quite willing.

Sri ANNA RAO GANAMUKHI.–State Education Board—total is 25, the number of academic persons is 10; the number of non-academic persons is 15. Primary Education Board—the number of academic persons is 19 and the number of non-academic persons is 13; total 32.

9 A.M.

Secondary Education Board.—33 total; 27 academic persons, 6 non-academic persons. See in what a thumping majority the teaching fraternity is represented.

Text-Book Committee for Primary and Basic Schools.—15 total; 12 academic persons and 3 non-academic persons.

ಶ್ರೀ ಜೆ. ಬಿ. ಮಲ್ಲಾರಾಧ್ಯ.–ಪ್ರೈಮರಿ, ಸೆಕೆಂಡರಿ, ಸಿಂಡಿಕೇಟ್‌ಗೆ ಬೇರೆ ಬೇರೆ ಕೊಡಿ ಎಂದು ನಾನು ಹೇಳಲಿಲ್ಲ. In the appropriate grade of education, give representation to people

who are conversant with that particular grade of education. I asked for representation for teachers in all grades.

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ಕನ್ವರ್‌ಸೆಂಟ್ ಇದ್ದವರಿಗೆ ರೆಪ್ರಸೆಂಟೇಷನ್ ಕೊಡಬೇಕೆಂದು ಹೇಳುತ್ತಾ, ನೀವು ಎಲ್ಲಾದರಲ್ಲೂ ಕ್ಲೈಮ್ ಮಾಡುತ್ತೀರಿ. ಎಲ್ಲಿ ಕೊಡಬೇಕು ?

Sri J. B. MALLARADHYA.—I can prove to the hilt that the claim that you are making is not correct.

Sri ANNA RAO GANAMUKHI.—If you have got a different list, please show me. Criticisms which have no substance should not be made.

Sri J. B. MALLARADHYA.—I have not made any such statement.

ಶ್ರೀ ಅಣ್ಣಾರಾವ್ ಗಣಮುಖಿ.—ಮೊನ್ನೆ ಇನ್ನೊಂದು ಪತ್ರ ಬರೆದಿದ್ದೇವೆ, ಒಂದು ಮೆಮೋರ್‍ಯಾಂಡಂ ಕಳುಹಿಸಿದೆ, ಅದಕ್ಕೆ ಮಂತ್ರಿಗಳಿಂದ ಉತ್ತರವೇ ಬಂದಿಲ್ಲ, ಯಾವ ಅಕ್‌ನಾಲೆಡ್ಜ್‌ಮೆಂಟ್ ಕೂಡ ಬಂದಿಲ್ಲ'' ಎಂದು ಕೆಲವರು ವಾದ ಮಾಡಿದರು. ಇವರು ಹೇಗೆ ಆ ಪ್ರಕಾರ ವಾದ ಮಾಡುತ್ತಾರೆ ? ಇದು ಸರಿಯೇ ಎಂದು ಯೋಚಿಸಿದರೆ, ಶ್ರೀ ಮಲ್ಲಾರಾಧ್ಯರಂತಹ ಮನುಷ್ಯರು ನಮ್ಮ ಮೇಲೆ ಇಷ್ಟು ಮಟ್ಟಿಗೆ ಇಲ್ಲದ ಸಲ್ಲದ ದೋಷಾರೋಪಣೆ ಮಾಡುವ ಆವಶ್ಯಕತೆ ಏನಿತ್ತು ? ನಮ್ಮ ನಿರ್ಧಾರ ಏನಾದರೂ ಅವರಿಗೆ ತಲುಪಿದೆಯೋ ಇಲ್ಲವೇ ಎಂಬುದನ್ನು ನೋಡಿದರೆ, ಶ್ರೀ ಮಲ್ಲಾರಾಧ್ಯರಿಗೆ 1959ನೆಯ ಇಸವಿ ಜನವರಿ 18ನೆಯ ತಾರೀಖಿನಲ್ಲಿ ಒಂದು ಉತ್ತರ ಹೋಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—18ನೆಯ ತಾರೀಖು, ಯಾರು ಕಳುಹಿಸಿದ್ದು ? ಯಾವಾಗ ಕಳುಹಿಸಿದ್ದು ಎಲ್ಲಿಗೆ ಕಳುಹಿಸಲಾಯಿತು ?

ಶ್ರೀ ಅಣ್ಣಾರಾವ್ ಗಣಮುಖಿ.—ಮಾನ್ಯ ಸದಸ್ಯರ ಪತ್ರದಲ್ಲಿ ಇದ್ದ ವಿಳಾಸದ ಪ್ರಕಾರ ಉತ್ತರ ಕಳುಹಿಸಲಾಗಿದೆ.

Sri J. B. MALLARADHYA.—When we make a criticism on the floor of this House, you say that we are not correct. You want to tell that your reply was sent as recently as January to the representation made on 29th May 1957. Even granting that a reply was given in January 1959, the Minister for Education takes credit for it as showing the efficiency of the Department. This is something wonderful !

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು C/o ವಸಂತಮಾಲಾ ಎಂದು ತಮ್ಮ ಪತ್ರದಲ್ಲಿ ಯಾವ ವಿಳಾಸವನ್ನು ಕೊಟ್ಟಿದ್ದಾರೋ, ಆ ವಿಳಾಸಕ್ಕೆ ಮಂತ್ರಿಗಳ ಆಫೀಸಿನಿಂದ ಉತ್ತರವನ್ನು ಬರೆದಿದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇನ್ನೊಂದು ವಿಷಯ, ಯೂನಿವರ್ಸಿಟಿ ಸಿಂಡಿಕೇಟಿಗೆ ನಾಮಿನೇಷನ್ ಮಾಡುವ ಕಾಲಕ್ಕೆ ಸರ್ಕಾರದವರು ಏನೋ ಒಂದು ಪಾರ್ಟಿ ದೃಷ್ಟಿಯಿಂದ ಮಾಡಿದ್ದಾರೆ ಎಂದೂ ಗೌರ್ನರಿಗೆ ಈ ವಿಷಯವನ್ನು ಬಿಡದೆ ಸರ್ಕಾರದವರೇ ಕೈಹಾಕಿದ್ದಾರೆಂದೂ ಹೇಳಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಗೌರ್ನರ್ ಹೆಸರನ್ನೇ ಇಲ್ಲಿ ತರಲಿಲ್ಲ.

ಅಧ್ಯಕ್ಷರು.—ಪಾರ್ಟಿಯವರನ್ನು ಸಿಂಡಿಕೇಟಿಗೆ ನಾಮಿನೇಷನ್ ಮಾಡುತ್ತಿದ್ದಾರೆಂದು ಹೇಳಿದ್ದೀರಿ.

Sri J. H. SHAMSUDDIN (Deputy Minister for Finance).—He said that the Head of the State makes the nominations to the Syndicate. The Head of the State means the Governor.

ಶ್ರೀ ಅಣ್ಣಾರಾವ್ ಗಣಮುಖಿ.—ನಾವು ಸಿಂಡಿಕೇಟಿಗೆ ನಾಮಿನೇಷನ್ಸನ್ನು ಒಳ್ಳೆಯ ದಕ್ಷರಾದ ಜನರಿಗೆ ಮಾಡಿದ್ದೇವೆ. ಒಳ್ಳೆಯ ಯೋಗ್ಯರಾಗಿರುವವರನ್ನು ನಾಮಿನೇಟ್ ಮಾಡಿದ್ದೇವೆ. ಸಿಂಡಿಕೇಟಿಗೆ ಅವರು ಬಹಳ ಕೆಲಸವನ್ನು ಮಾಡುತ್ತಿದ್ದಾರೆ. ಒಳ್ಳೆಯ ಅನುಭವಸ್ಥರು ಅಲ್ಲಿದ್ದಾರೆ. ಗೌರ್ನರಿಗೆ ಅಡ್ವೈಜ್ ಮಾಡಬೇಕು, ಅಂತಹ ಜನರನ್ನು ನಾಮಿನೇಟ್ ಮಾಡಿದ್ದೇವೆ. ಇವರಿಂದ ಉತ್ತಮ ಕೆಲಸ ನಡೆಯುತ್ತದೆಂದು ನನಗನ್ನಿಸುತ್ತದೆ.

ಇನ್ನು ರೂಲ್ಸ್ ವಿಷಯದಲ್ಲಿ ಮಾತನಾಡುತ್ತಾ ಇದಕ್ಕೆ ಸಂಬಂಧಪಟ್ಟ ರೂಲ್ಸ್ ಮಾಡಿ 14 ತಿಂಗಳುಗಳಾದರೂ ಸರ್ಕಾರದವರು ಅವನ್ನು ಇನ್ನೂ ಜಾರಿ ಮಾಡಿಲ್ಲವೆಂಬುದಾಗಿ ಹೇಳಿದರು. ಅದಕ್ಕೆ ನಾನು ಕೆಲಮಟ್ಟಿಗೆ ಒಪ್ಪುತ್ತೇನೆ. ರೂಲ್ಸ್ ಮಾಡಿ 11 ತಿಂಗಳು ಆದುವು. ಇದೀ ಸಂಸ್ಥಾನದ ರೂಲ್ಸ್‌ಗಳನ್ನೆಲ್ಲಾ ರೀಡ್ರಾಫ್ಟ್ ಮಾಡಬೇಕಾಗಿದೆ. ಈಗ ಕೆಲಸ ಹೆಚ್ಚಿದೆ. ಸಾಧಾರಣವಾಗಿ ಆರು ತಿಂಗಳು ರೀ-ಡ್ರಾಫ್ಟ್ ಮಾಡಿದ್ದುದನ್ನು ಈಗ ಎಲ್ಲಾ ಸ್ಕ್ರೂಟಿನಿ ಮಾಡಿ ಫೈನಲ್ಲಾಗಿ ಮಾಡಿದೆ. ಅವನ್ನು ಕೂಡಲೆ ಸಿಂಡಿಕೇಟಿಗೆ ಕಳುಹಿಸುವುದಕ್ಕೆ ಹತ್ತಿದ್ದೇವೆ. ಸಿಂಡಿಕೇಟಿನ ಉಪಾಧ್ಯಾಯರಿಗೆ ಯಾವಯಾವ ರೀತಿಯಲ್ಲಿ ಅನ್ಯಾಯವಾಗುತ್ತಿದೆಯೋ ಅವನ್ನೆಲ್ಲಾ ಸರಿಪಡಿಸುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಕಳುಹಿಸುವುದಕ್ಕೆ ಹತ್ತಿದ್ದೇವೆ ಎಂದು ಮಂತ್ರಿಗಳು ಹೇಳುತ್ತಾರೆ. ಕಳುಹಿಸಿದ್ದಾರೋ, ಇಲ್ಲವೋ ?

ಶ್ರೀ ಅಣ್ಣಾರಾವ್ ಗಣಮುಖಿ.—ಕಳುಹಿಸುತ್ತಿದ್ದೇವೆ. ಶ್ರೀ ಮಲ್ಲಾರಾಧ್ಯರು ನಮ್ಮಲ್ಲಿ ವಿದ್ಯಾಖಾತೆಯ ಧೋರಣೆ ಸರಿಯಾಗಿಲ್ಲ. ಮದ್ರಾಸಿಗೂ ನಮಗೂ ವ್ಯತ್ಯಾಸ ಇದೆ ಎಂಬುದಾಗಿ ಹೇಳಿದರು. ನಮ್ಮಲ್ಲಿ ಎಜುಕೇಷನ್ ರಿಫಾರ್ಮ್ ಬಗ್ಗೆ ಇಂಟಿಗ್ರೇಷನ್ ಪ್ರಶ್ನೆ ಇದೆ.

ಒಂದು ಇಂಟಿಗ್ರೇಷನ್ ಅಡ್‌ವೈಸರಿ ಬೋರ್ಡ್ ಎಂದು ಮಾಡಿದ್ದಾರೆ. ಅದರಲ್ಲಿ ಅವರೂ ಇದ್ದಾರೆ. ಸುಮಾರು 31 ಜನ ಎಜುಕೇಷನಿಸ್ಟ್ಸ್ ಅದರಲ್ಲಿ ಇದ್ದಾರೆ ಅವರು ಸಿಲಬಸ್ ಅಪ್ರೂವ್ ಮಾಡಿದ್ದಾರೆ, ಈಗಾಗಲೇ ಮುಂದೆ ಹೆಜ್ಜೆ ಇಟ್ಟಿದ್ದಾರೆ. ಅದಕ್ಕಾಗಿ ವೈಟ್ ಪೇಪರ್ ತೆಗೆಯುವುದು ಅವಶ್ಯ ಏನೂ ಈಗ ಕಂಡಿಲ್ಲ. 32 ಜನಗಲ್ಲಿ ಎಲ್ಲಾ ಮೆಂಬರುಗಳೂ ಎಜುಕೇಷನಿಸ್ಟ್ಸ್ ಇದ್ದಾರೆ. ಕೆಲಸ ಇನ್ನೂ ಮುಗಿದಿಲ್ಲ. ಸ್ಟೇಟ್ ಇಂಟಿಗ್ರೇಷನ್ ಅಡ್ವೈಸರಿ ಬೋರ್ಡಿದೆ. ಮುಂದಿನ ಸಿಲಬಸ್ ಅಪ್ರೂವ್ ಮಾಡುವವರೂ ಇವರೇ. ಎಲ್ಲಾ ಎಜುಕೇಷನಿಸ್ಟ್ಸ್ ಹಾಗೂ ಶ್ರೀ ಮಲ್ಲಾರಾಧ್ಯರೂ ಅಪ್ರೂವ್ ಮಾಡಿದ್ದಾರೆ. ಅವರು ಮೆಂಬರಾಗಿ ಅಲ್ಲಿ ಅಪ್ರೂವ್ ಮಾಡುತ್ತಾರೆ. ಇಲ್ಲಿ ಬಂದು ಹೀಗೆ ಏಕೆ ಮಾಡಿಲ್ಲವೆಂದು ಕೇಳುತ್ತಾರೆ ಮತ್ತು ವ್ಯಾಜ್ಯ ಮಾಡುತ್ತಾರೆ.

Sri J. B. MALLARADHYA.—I might be there. I might not be there. Before a major policy is inaugurated, I suggest that the Legislature is put in touch with it and its consent taken.

ಶ್ರೀ ಅಣ್ಣಾರಾವ್ ಗಣಮುಖಿ.—ಯೂನಿವರ್ಸಿಟಿ ವಿಷಯವಾಗಿ ಕೂಡ ಅವರು ಒಂದು ಮಾತು ಹೇಳಿದ್ದಾರೆ: ಯು.ಜಿ.ಸಿ. ಗ್ರಾಂಟ್ ಕೊಟ್ಟಿದ್ದಾರೆ; ಸೈನ್ಸ್ ಮಹತ್ವದ ಸಬ್ಜೆಕ್ಟ್; ಇನ್ನೂ ಸರ್ಕಾರ ವಿಚಾರ ಮಾಡಿಲ್ಲ; ಗ್ರಾಂಟು ಕೊಟ್ಟಿಲ್ಲ ಎಂದು ಹೇಳಿದರು. ನಾನು ನಿನ್ನೆ ನೋಡಿದೆ. ಸಾಧಾರಣವಾಗಿ ಜನವರಿ ತಿಂಗಳಿನಲ್ಲಿ ಯು.ಜಿ.ಸಿ. ಪರ್ಮಿಷನ್ ಬಂದಿದೆ. ಸೈನ್ಸ್ ಡಿಪಾರ್ಟ್‌ಮೆಂಟಿಗೆ ಸೆಂಟ್ರಲ್ ಕೋಟ 23·37 ಲಕ್ಷ. ಅದರಲ್ಲಿ 66 2/3 ಪರ್ಸೆಂಟ್ ನಾನ್ ರೆಕರಿಂಗ್ ಅವರದು; 50 ಪರ್ಸೆಂಟ್ ನಮ್ಮದು. 33 1/3 ಪರ್ಸೆಂಟಲ್ಲಿ ನಾನ್ ರೆಕರಿಂಗ್ ಎರಡು ಐಟೆಮ್ಮುಗಳಿಗೆ 23 ಲಕ್ಷ ಪ್ರೊವೈಡ್ ಮಾಡಿದ್ದಾರೆ. ಆದರೆ ನಮಗೆ ಅದು ಬಂದಿಲ್ಲ. ರಿಜಿಸ್ಟ್ರಾರ್‌ರವರು ಲೆಟರ್ ಬರೆದಿದ್ದಾರೆ, ಅವರ ಬಗ್ಗೆ ಸ್ಕೀಮು ಫೈನಲೈಸ್ ಆಗಿಲ್ಲ, ಸಿಂಡಿಕೇಟಿನಲ್ಲಿ ಸ್ಕೀಮು ಅಪ್ರೂವ್ ಆಗಿಲ್ಲವೆಂದು. ತಾವೂ ಅದರೊಳಗೆ ಇದ್ದೀರಿ. ಆ ಸ್ಕೀಮು ಬಂದನಂತರ ನಮ್ಮ ಪ್ರೋರ್ಷನ್ ಏನು ಇದೆಯೋ ಅದನ್ನು ರಿಲೀಸ್ ಮಾಡುತ್ತೇವೆ. ಸರ್ಕಾರದ ಕಡೆಯಿಂದ ಈ ವಿಚಾರದಲ್ಲಿ ಯಾವ ತಡವೂ ಆಗಿಲ್ಲ. ನಮ್ಮ ಭಾಗದ ಫೈನಾನ್ಸ್ ಏನಿದೆ ಅದನ್ನು ರಿಲೀಸ್ ಮಾಡುತ್ತೇವೆ. ಇದರಿಂದ ಸ್ಟಾಂಡರ್ಡ್ ಕಡಮೆಯಾಗಿದೆ ಎಂದು ಹೇಳಿದರು.

Sri J. B. MALLARADHYA.—I am sorry. I do not know whether I made a mistake. I never said that the science grant or matching grant is not given to the University. Till today, the Finance Department of the Government has not transferred the block grant due under the University Act. That is what I said.

ಶ್ರೀ ಅಣ್ಣಾರಾವ್ ಗಣಮುಖಿ.—ತಾವು ಸಿಂಡಿಕೇಟ್ ಮೆಂಬರ್ ಆಗಿದ್ದೀರಿ. 54 ಲಕ್ಷ ರೂಪಾಯಿನಷ್ಟು ಬ್ಲಾಕ್ ಗ್ರಾಂಟ್ ಪ್ರೊವೈಡ್ ಮಾಡಿದ್ದನ್ನು ಕೊಟ್ಟಿರಾ ಎಂದು ಕೇಳಿದರು. ಮೆಡಿಕಲ್ ಡಿಪಾರ್ಟ್‌ಮೆಂಟ್ ಟ್ರಾನ್ಸ್‌ಫರ್ ಆಯಿತು. ಪಿ.ಯು.ಸಿ. ಆಗಿದೆ, ಸೆಕೆಂಡ್ ಇಯರ್ ಇಂಟರ್‌ಮೀಡಿಯಟ್ ಕ್ಲಾಸ್ ಹೋಯಿತು. ಬ್ರೇಕ್-ಅಪ್ ಕಳುಹಿಸುವುದಿಲ್ಲ. ಯೂನಿವರ್ಸಿಟಿ ಆಕ್ಟ್ ಪ್ರಕಾರ ಹಿಂದಿನ ಮೂರು ವರ್ಷಗಳ ಆವರೇಜ್ ಎಕ್ಸ್‌ಪೆಂಡಿಚರ್ ನೋಡುತ್ತೇವೆ. ಹಿಂದಿನ ಮೂರು ವರ್ಷಗಳ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಕೂಡಿಸಿ, ನಾರ್ಮಲ್ ಗ್ರಾಂಟ್ ಕೊಡಿ ಎಂದರೆ ಸಾಧ್ಯವಿಲ್ಲ.

Sri J. B. MALLARADHYA.—The University is not so unreasonable. ಆಕ್ಟ್ ಪ್ರಕಾರ three previous years average ಬ್ಲಾಕ್ ಗ್ರಾಂಟ್ ಕೊಡಬೇಕು. I know that the Medical College transferred to the University is not claiming that portion of expenditure at all. ಅಲ್ಲಿ ನಿಮ್ಮವರೇ ಡೆಪ್ಯುಟಿ ಕಂಟ್ರೋಲರ್ ಇದ್ದಾರೆ. Do you mean to say that the statement of accounts sent by the University does not fit in? Usual grant 44 ಲಕ್ಷ ಬೇಡಿ. 41 ಲಕ್ಷ ಅವರಿಗೆ ಕೊಡಿ.

ಶ್ರೀ ಅಣ್ಣಾರಾವ್ ಗಣಮುಖಿ.—ಕಾರಣವೇನೆಂದರೆ, ಹೋದ ಮೂರು ವರ್ಷಗಳ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಕೂಡಿಸಿ ಕೊಡಿರಿ ಎಂದರೆ, ಹಾಗೆ ಯಾರೂ ಕೊಡುತ್ತಿಲ್ಲ. ಡೆವಲಪ್ ಮೆಂಟ್ ಗ್ರಾಂಟ್ ಕೂಡಿಸಿ ನಾರ್ಮಲ್ ಗ್ರಾಂಟ್ ಕೊಡಿ ಎಂದು ಹೇಳುವುದಕ್ಕೆ ಯಾರಿಗೂ ಶಕ್ಯವಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಎಲ್ಲಾ ಕ್ಲಾರಿಫಿಕೇಷನ್ನನ್ನೂ ತೆಗೆದುಕೊಂಡು, ಎಷ್ಟು ದುಡ್ಡನ್ನು ಕೊಡಬೇಕೋ ಅಷ್ಟನ್ನೂ ಕೊಟ್ಟಿದ್ದಾರೆ.

Sri J. B MALLARADHYA.—The complaint is from people like Venkaji Rao. ಎಷ್ಟು ಗ್ರಾಂಟು ಕೊಡುತ್ತೀರೋ, ಅಷ್ಟನ್ನೂ ಕೊಡಿ. Affiliated Colleges are starving to death. 20ನೆಯ ಮಾರ್ಚ್‌ವರೆಗೂ ಹಣ ಟ್ರಾನ್ಸ್‌ಫರ್ ಆಗಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಸರ್ಕಾರದವರು ತಿಂಗಳು, ತಿಂಗಳೂ ಅಡ್-ಹಾಕ್ ಬೇಸಿಸ್ ಮೇಲೆ ಕೊಡುತ್ತಾ ಹೋಗಿದ್ದಾರೆ. ಲೆಕ್ಕ ಬಂದಿಲ್ಲ. ಪ್ರತಿ ತಿಂಗಳೂ ಕೊಟ್ಟಿದ್ದಾರೆ. ಲಾಸ್ಟ್ ಗ್ರಾಂಟ್ ಕೊಡುವ ಕಾಲಕ್ಕೆ ಫೈನಲ್ಲಾಗಿ ಲೆಕ್ಕಪತ್ರನೋಡಿ ಕೊಡಬೇಕಾಗುತ್ತದೆ. ಮೂರು ವರ್ಷಗಳ ಡೆವಲಪ್‌ಮೆಂಟ್ ಗ್ರಾಂಟ್ ಕೂಡಿಸಿ ನಾರ್ಮಲ್ ಗ್ರಾಂಟ್ ಎಂದು ಟ್ರೀಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಹೇಳಿದರು. ಆಪ್ರಶ್ನೆ ಈಗ ಮುಗಿದಿರುತ್ತದೆ.

ಒಂದು ಮಹತ್ವದ್ದು ಏನೆಂದರೆ, ಶ್ರೀ ಸುಂಠಣಕರ್ ರವರು ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಏನೆಂದರೆ, ಮರಾಠಿಗೆ step-motherly treatment ಕೊಡುತ್ತಿದ್ದೇವೆಂದು. ಅದು ಬಹಳ ತಪ್ಪು. ನಮ್ಮ ರಾಜ್ಯದಲ್ಲಿ ಎಲ್ಲಾ ಭಾಷೆಗಳಿಗೂ ಸಮಪಾದ ಮಹತ್ವವಿದೆ. ಮೈಸೂರು ಸ್ಟೇಟಿನಲ್ಲಿ ತೆಲುಗು ಇದೆ, ತಮಿಳು ಇದೆ, ಹಿಂದಿ ಇದೆ, ಉರ್ದು ಇದೆ. ತಮಿಳು, ತೆಲುಗು, ಉರ್ದು ಮುಂತಾದ ಮೈನಾರಿಟಿ ಲ್ಯಾಂಗ್‌ವೇಜುಗಳೇನಿವೆಯೋ, ಅವುಗಳಿಗೆ ಸಮಪಾದ ಮಹತ್ವ ಕೊಡುವುದಕ್ಕೆ ಹತ್ತಿದ್ದೇವೆ. ಇದರಲ್ಲಿ ಮರಾಠಿಯೂ ಸೇರಿದೆ. ಬೆಳಗಾಂ ಬಾರ್ಡರಿನಲ್ಲಿರುವ ಮರಾಠಿ ಶಾಲೆಗಳಿಗೆ ಎಷ್ಟು ಗ್ರಾಂಟ್-ಇನ್-ಏಡ್ ಕೊಡಬೇಕೋ ಅದನ್ನು ಕೊಡಲಿಕ್ಕೆ ಹತ್ತಿದ್ದೇವೆ. ಅವರಿರುವುದು 'ಬೈಲಿಂಗ್‌ವಲ್' ಪ್ರದೇಶವಾದ್ದರಿಂದ ಅಲ್ಲಿ ಎಲ್ಲರಿಗೂ ಮರಾಠಿ, ಕನ್ನಡ ಬರುತ್ತದೆ. ಸುಮ್ಮನೆ ಭಾಷೆ ನೆಪಮಾಡಿ, ಭಾಷೆಯ ಪ್ರಶ್ನೆಯನ್ನು ಮುಂದಿಟ್ಟು ಬೊಂಬಾಯಿಗೆ ಸೇರಬೇಕೆಂದು ಹೇಳುತ್ತಿದ್ದಾರೆ ಮತ್ತು ಆರ್.ಪಿ.ಡಿ. ಕಾಲೇಜನ್ನು ಪೂನಾ ಯೂನಿವರ್ಸಿಟಿಗೆ ಅಫಿಲಿಯೇಷನ್ ಮಾಡಬೇಕು, ಸೇರಿಸಬೇಕೆಂದು ಹೇಳುತ್ತಿದ್ದಾರೆ. ಕರ್ಣಾಟಕ ಯೂನಿವರ್ಸಿಟಿ ಆಕ್ಟ್ ಪ್ರಕಾರ ನಮ್ಮ ಪ್ರದೇಶದಲ್ಲಿ ಯಾವ ಕಾಲೇಜಿದ್ದರೂ, ಅದು ಇತರ ಪುರ ಪ್ರದೇಶದ ಯೂನಿವರ್ಸಿಟಿಗೆ ಅಫಿಲಿಯೇಟ್ ಆಗುವುದಕ್ಕೆ ಪರ್ಮಿಷನ್ ಕೊಡಲು ಬರುವುದಿಲ್ಲ. ಇದು ಒಂದು ಸಮಸ್ಯೆ. ಇನ್ನೊಂದು ಏನೆಂದರೆ, ಬೆಳಗಾಮಿನಲ್ಲಿರುವ ಲಿಂಗ್‌ರಾಜ್ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳಲ್ಲಿ, ಅರ್ಧಸಂಖ್ಯೆ ಮರಾಠಿ ಓದುವವರೇ ಇದ್ದಾರೆ. ಆ ಕಾಲೇಜಿನಲ್ಲಿ ಯಾವ ತರಹ ಕಂಪ್ಲೇಂಟೂ ಇಲ್ಲ. ಮೂರನೆಯದೇನೆಂದರೆ, ಹುಡುಗರಿಗೆ ಕನ್ನಡವ

ನ್ನಾಗಲಿ, ಮರಾಠಿಯನ್ನಾಗಲಿ ತೆಗೆದುಕೊಳ್ಳುವ ಆಪ್‌ಷನ್ ಕೊಟ್ಟು ಬಿಟ್ಟಿದೆ. ಮೀಡಿಯಮ್ ಆಫ್ ಇನ್‌ಸ್ಟ್ರಕ್ಷನ್‌ಗೆ ಇವುಗಳನ್ನು ಉಪಯೋಗಿಸಬಹುದು. ಆದರೂ ಕೂಡ ಕನ್ನಡವನ್ನಾಗಲಿ, ಮರಾಠಿಯನ್ನಾಗಲಿ ಮೀಡಿಯಮ್ ಆಗಿ ತೆಗೆದುಕೊಂಡಿಲ್ಲ. ಇಂಗ್ಲೀಷ್ ಮೀಡಿಯಮ್ಮನ್ನ ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಅವರಿಗೆ ವಿಶೇಷ ಅನುಕೂಲಗಳನ್ನು ಒದಗಿಸುವುದಕ್ಕೆ ತಯಾರಿದ್ದೇವೆ; ಒದಗಿಸಲೂ ಹತ್ತಿದ್ದೇವೆ. ಸರ್ಕಾರ ಮರಾಠಿ ಜನರಿಗೆ ಪ್ರಿಜುಡೀಸ್ ತೋರಿಸುತ್ತಿದೆ ಎಂದು ಹೇಳುತ್ತಾರೆ. ಅದು ತಪ್ಪು ಇದೆ. ಅದರಿಂದ ಮರಾಠಿ ಟೀಚರ್ಸ್‌ನ್ನು ಜಂಖಂಡಿಗೆ ಕಳುಹಿಸಿದ್ದಾರೆ, ಬೆಳಗಾಮಿಗೆ ಕಳುಹಿಸಲಿಲ್ಲ ಎಂದು ಪ್ರಸ್ತಾಪ ಮಾಡಿದ್ದಾರೆ. ಬೆಳಗಾಂ ಕಾಲೇಜಿಗೆ ಅವರನ್ನು ಕಳುಹಿಸಿದರೆ, ಸರ್ಕಾರಕ್ಕೆ ಫೀ ಕೊಡಬೇಕಾಗುತ್ತದೆ. ಜಂಖಂಡಿಯಲ್ಲಿ ಸರ್ಕಾರಿ ಶಾಲೆ ಇದೆ; ಮರಾಠಿ ಟ್ರೇನಿಂಗ್ ಸೆಕ್ಷನ್ ಇದೆ. ಬೆಳಗಾಮಿಗೆ ಅವರನ್ನು ಕಳುಹಿಸತಕ್ಕ ಪ್ರಶ್ನೆ ಏಕೆ ಬರಲಿಲ್ಲವೆಂದರೆ, ಅಲ್ಲಿರುವುದು ಪ್ರೈವೇಟ್ ಕಾಲೇಜು, ಆದ್ದರಿಂದ ಫೀ ಕೊಡಬೇಕಾಗುತ್ತದೆ.

ಅಲ್ಲಿಂದ ಕೆಲವು ಮೆಂಬರುಗಳು ಇನ್ನೂ ಕೆಲಕೆಲವು ಪ್ರಶ್ನೆಗಳನ್ನೆತ್ತಿದ್ದಾರೆ, ಹಾಗೂ ಕೆಲವು ಸಲಹಾ ಸೂಚನೆಗಳನ್ನೂ ಕೊಟ್ಟಿದ್ದಾರೆ. ಆ ವಿಷಯಗಳಿಗೆಲ್ಲ ಸಂಪೂರ್ಣವಾಗಿ ಉತ್ತರಕೊಡಲು ನನಗೀಗ ಅಷ್ಟೊಂದುವೇಳೆ ಇಲ್ಲ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಎಲ್ಲಾ ಸಲಹೆಗಳನ್ನೂ ನಮ್ಮ ಎದುರಿಗೆ ಇಟ್ಟುಕೊಂಡಿದ್ದೇವೆ. ಅವುಗಳ ಬಗ್ಗೆ ಪ್ರತಿಯೊಂದು ವಿಚಾರವನ್ನು ವಿಮರ್ಶೆಮಾಡುತ್ತೇವೆಂದು ನಾನು ಸಭೆಗೆ ತಿಳಿಸಲಿಚ್ಛಿಸುತ್ತೇನೆ.

ಇನ್ನು ಈ ಓಪನ್ ಏರ್ ಥಿಯೇಟರುಗಳ ಹಾಗೂ ಸ್ಪೋರ್ಟ್ಸ್ ಆಕ್ಟಿವಿಟೀಸ್‌ಗಳ ಬಗ್ಗೆ ನಾವು ಈಗಾಗಲೇ ಕೆಲವು ಕಡೆ ಓಪನ್ ಏರ್ ಥಿಯೇಟರುಗಳನ್ನು ಕಟ್ಟಿಸಿದ್ದೇವೆ; ಅಥವಾ ಕಟ್ಟಿಸುವುದರಲ್ಲಿದ್ದೇವೆ. 21 ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್‌ಗಳಿಗೆ ಹತ್ತು ಸಾವಿರ ರೂಪಾಯಿಗಳ ಗ್ರಾಂಟಿನಲ್ಲಿ ಎಲ್ಲಾ ಕಡೆಗಳಿಗೂ ಈ ಓಪನ್ ಏರ್ ಥಿಯೇಟರುಗಳನ್ನು ಕಟ್ಟಿಸಿಕೊಡಬೇಕೆಂದಿದ್ದೇವೆ. ಬಿಲ್ಡಿಂಗ್‌ಗಳಿಗಾಗಿ ಎಂಟು ಸಾವಿರ ರೂಪಾಯಿಗಳನ್ನು ಎಕ್ವಿಪ್‌ಮೆಂಟ್‌ಗಳಿಗಾಗಿ ಎರಡು ಸಾವಿರ ರೂಪಾಯಿಗಳನ್ನೂ ಹೀಗೆ ಒಟ್ಟು ಹತ್ತು ಸಾವಿರ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದೇವೆ. ಈಗಾಗಲೆ ಕೆಲವುಕಡೆ ಈ ಓಪನ್ ಏರ್ ಥಿಯೇಟರುಗಳನ್ನು ಕಟ್ಟಿಸಲಾಗಿದೆ; ಇನ್ನು ಕೆಲವು ಭಾಗಗಳಲ್ಲಿ ಕಟ್ಟಿಸಲಾಗುತ್ತದೆ. ಆದರೆ ಈಗ ಸದ್ಯಕ್ಕೆ ಈ ಯೋಜನೆಯನ್ನು ಸಿಟಿ ಏರಿಯಾಗಳಿಗೆ ಮಾತ್ರ ಅನ್ವಯಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಿಗಿನ್ನೂ ಇದನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ಈಗ ಓಪನ್ ಏರ್ ಥಿಯೇಟರುಗಳನ್ನು ಯಾವ ಯಾವ ಊರುಗಳಿಗೆ ಕೊಡಲಾಗಿದೆ?

ಶ್ರೀ ಅಣ್ಣಾರಾವ್ ಗಣಮುಖಿ.—ಜಿಲ್ಲಾ ಕಸಬೆಗಳಿಗೆ ಮಾತ್ರ ಈ ಯೋಜನೆ ಈಗ ಸದ್ಯಕ್ಕೆ ಮಾಡಿರತಕ್ಕದ್ದಾಗಿದೆ.

ಅಧ್ಯಕ್ಷರು.—ತಾಲ್ಲೂಕ್ ಹೆಡ್‌ಕ್ವಾಟರುಗಳಿಗೆ ಇದು ಅನ್ವಯಿಸುತ್ತದೆಯೋ ಇಲ್ಲವೋ?

ಶ್ರೀ ಅಣ್ಣಾರಾವ್ ಗಣಮುಖಿ.—ಅದಿನ್ನೂ ಸದ್ಯಕ್ಕೆ ನಮ್ಮ ಆಲೋಚನೆಯಲ್ಲಿಲ್ಲ. ಮುಂದಕ್ಕೆ ಆಲೋಚನೆ ಮಾಡಬೇಕಾಗಿದೆ. ನಾನು ಕೆಲವು ಕಡೆ ಹೋಗಿದ್ದಾಗ ಧಾರವಾಡದಲ್ಲಿ ಓಪನ್ ಏರ್ ಥಿಯೇಟರು ಆಗಲೆ ತಯಾರಾಗಿತ್ತು. ನಾನೇ ಕಣ್ಣಾರ ನೋಡಿಕೊಂಡು ಬಂದಿದ್ದೇನೆ. ಹುಬ್ಬಳ್ಳಿಯಲ್ಲಿ ಸದ್ಯದಲ್ಲೇ ಇನ್ನೊಂದು ಕಂಪ್ಲೀಟಾಗುವ ಸ್ಟೇಜಿನಲ್ಲಿರುತ್ತದೆಯೆಂದು ವರ್ತಮಾನ ಬಂದಿದೆ. ಹೀಗೆ ಈ ಥಿಯೇಟರುಗಳನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಮಾಡಬೇಕೆಂದಿದ್ದೇವೆ. ಅಲ್ಲಿ ಷೆಡ್ಡ್‌ಗಳನ್ನು ಕಟ್ಟಿಸತಕ್ಕ ಬಗ್ಗೆ 15,000 ರೂಪಾಯಿಗಳನ್ನು ಕೊಟ್ಟಿದ್ದೇವೆ. ಈಗಾಗಲೇ 20 ಜನ ಪಾರ್ಟ್ ಟೈಂ ಇನ್‌ಸ್ಟ್ರಕ್ಟರುಗಳನ್ನು ಕೂಡ ನೇಮಕ ಮಾಡಿ ಅವರ ಖರ್ಚು ವೆಚ್ಚಗಳಿಗಾಗಿ 14 ನೂರು ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರಮೇಲೆ ಸೂಪರ್‌ವೈಜ್ ಮಾಡಲು ಫಿಜಿಕಲ್ ಕಲ್ಚರ್ ಸೂಪರಿಂಟೆಂಡೆಂಟರುಗಳನ್ನೂ ನೇಮಕಮಾಡಿದೆ. ಇನ್ನು ರಾಜ್ಯದಲ್ಲಿ ಏಳು ಕಡೆ ಫಿಜಿಕಲ್ ಕಲ್ಚರ್ ಇನ್‌ಸ್ಟಿಟ್ಯೂಷನ್‌ಗಳನ್ನು ಮಾಡಬೇಕೆಂದಿದ್ದೇವೆ. ಈ ಪ್ರತಿಯೊಂದಕ್ಕೂ 4,139 ರೂಪಾಯಿಗಳ ಪ್ರಕಾರ ನಾವು ಈಗಾಗಲೇ ಸ್ಯಾಂಕ್ಷನ್ ಮಾಡಿದ್ದೇವೆ. ಈಗ ಪ್ರೈಮರಿ ಶಾಲೆಗಳಿಗೆ ಫಿಜಿಕಲ್ ಕಲ್ಚರ್ ಇನ್‌ಸ್ಟ್ರಕ್ಟರುಗಳಿದ್ದಾರೆ. ಇನ್ನುಳಿದ ಶಾಲೆಗಳಲ್ಲಿರತಕ್ಕವರನ್ನು ಡ್ರಿಲ್ ಇನ್‌ಸ್ಟ್ರಕ್ಟರುಗಳೆಂದು ಕರೆಯಲಾಗುತ್ತಿದೆ. ಹೆಣ್ಣುಮಕ್ಕಳ ವ್ಯಾಯಾಮ ಶಾಲೆಗೂ ತಕ್ಕ ಏರ್ಪಾಡುಗಳನ್ನು ಕಲ್ಪಿಸಲಾಗುತ್ತಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಪ್ಲೇಗ್ರೌಂಡನ್ನು ಮಾಡಲು ಒಂದೊಂದಕ್ಕೂ 3,500 ರೂಪಾಯಿಗಳ ಪ್ರಕಾರ ಹಣವನ್ನು ಮಂಜೂರು ಮಾಡಲಾಗಿದೆ. ಇನ್ನು ಎಲ್ಲಾದರೂ ಹಣದ ಕೊರತೆ ಬಿದ್ದರೆ ಅದಕ್ಕಾಗಿ ಒಂದು ಎರಡು ಲಕ್ಷ ರೂಪಾಯಿಗಳ ಸೆನ್ಸನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಈಗ ಮೊದಲನೆಯದಾಗಿ ಬೆಂಗಳೂರಿನಲ್ಲೊಂದು ಫಿಜಿಕಲ್ ಕಲ್ಚರ್ (ಜಿಂನಾಷಿಯಂ) ಕಾಲೇಜನ್ನು ತೆರೆಯಲು ಒಂದು ಲಕ್ಷ 20 ಸಾವಿರ ರೂಪಾಯಿಗಳ ಒಂದು ಅಂದಾಜು ತಯಾರಾಗಿದೆ. ಆದರೆ ಈ ಕಾರ್ಯದಲ್ಲಿ ಈಗ ಸ್ವಲ್ಪ ತಡೆ ಹಿಡಿದಿದೆ. ಇದಕ್ಕೆ ಕಾರಣವೇನೆಂದರೆ ಈ ಕಾರ್ಯಕ್ಕಾಗಿ ತಗಲುವ ವೆಚ್ಚದಲ್ಲಿ ರೆಕರಿಂಗ್ ಮತ್ತು ನಾನ್ ರೆಕರಿಂಗ್ ಬಗ್ಗೆ ಅರ್ಧ ವೆಚ್ಚವನ್ನು ಕೇಂದ್ರ ಸರ್ಕಾರದವರು ವಹಿಸಿ ಇನ್ನುಳಿದ ಅರ್ಧ ಖರ್ಚನ್ನು ನಾವು ವಹಿಸಬೇಕೆಂಬುದಾಗಿ ಒಂದು ಯೋಜನೆ ಇತ್ತು. ಆದರೆ ನಾವೀಗ ಕೇಂದ್ರ ಸರ್ಕಾರದವೊಂದಿಗೆ ಈ ವಿಚಾರದಲ್ಲಿ ಪತ್ರವ್ಯವಹಾರ ನಡೆಸುತ್ತಿದ್ದೇವೆ. ಅದಿನ್ನೂ ಪೂರ್ಣವಾಗಿ ಮುಗಿದಿಲ್ಲ. ಅವರಿಂದ ನಮಗಿನ್ನೂ ಪೂರ್ಣವಾದ ಉತ್ತರ ಬಂದಿಲ್ಲ. ಅದು ತೀರ್ಮಾನವಾದ ಕೂಡಲೇ ಬೆಂಗಳೂರಿನಲ್ಲೊಂದು ಫಿಜಿಕಲ್ ಕಲ್ಚರ್ ಕಾಲೇಜನ್ನು ತೆರೆಯಬೇಕೆಂದಿದ್ದೇವೆ. ಅಲ್ಲಿಂದ ಮುಂದಕ್ಕೆ ಎಲ್ಲ ಕಡೆಗಳಲ್ಲೂ ಫಿಜಿಕಲ್ ಕಲ್ಚರ್ ಎಜ್ಯುಕೇಷನ್ ಹರಡಲು ಎರಡು ಲಕ್ಷ 23 ಸಾವಿರದ 396 ರೂಪಾಯಿಗಳನ್ನು ಕೊಟ್ಟಿದ್ದೇವೆ. ಕ್ರಿಕೆಟ್ ಅಸೋಸಿಯೇಷನ್ನಿಗೆ 16,300 ರೂಪಾಯಿಗಳನ್ನೂ ಶ್ರೀಮಾನ್ ಮಲ್ಲಾರಾಧ್ಯರು ತಿಳಿಸಿದಂತೆ ಬ್ಯಾಸ್‌ಕೆಟ್‌ಬಾಲ್ ಅಸೋಸಿಯೇಷನ್ನಿಗೆ 5,000 ರೂಪಾಯಿಗಳನ್ನೂ ಕೊಡುತ್ತಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ತಾವು ಹಿಂದೆ ಐದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೀಗೆಲ್ಲಾ ಹಿಂದಿನ ಸುದ್ದಿ ಹೇಳಿ ನಮ್ಮ ಬಾಯಿ ಮುಚ್ಚಿಸಲು ಪ್ರಯತ್ನ ಮಾಡಿದರೆ ನಾವೇನು ಮಾಡೋಣ? ನಾನು ತಾವು ಸ್ಪೋರ್ಟ್ಸ್ ಆಕ್ಟಿವಿಟೀಸ್‌ಗೆ ಸಾಕಷ್ಟು ಉತ್ತೇಜನವನ್ನು ಕೊಡುತ್ತಿಲ್ಲ, 1959-60ಕ್ಕೆ ಹೆಚ್ಚು ಹಣ ಒದಗಿಸಿಲ್ಲ ಎಂದು ಟೀಕೆಮಾಡಿದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾವು ಮುಂದೆ ಬರಲಿರುವ ವರ್ಷಕ್ಕೂ ಹಣವನ್ನು ಅಲಾಟ್ ಮಾಡುತ್ತೇವೆ.

Sri VEERENDRA PATIL (Chincholi).—May I know whether there is any proposal to open a Science and Arts College at Bidar or does the Government think that there is no necessity to open a college there?

ಶ್ರೀ ಅಣ್ಣಾರಾವ್ ಗಣಮುಖಿ.—ಅಲ್ಲಿಂದ ಈ A.C.C., N.C.C. ಮತ್ತು ಸ್ಕೌಟ್ ದಳಗಳಿಗಾಗಿ ದ್ರವ್ಯ ಸಹಾಯವನ್ನು ಕೊಟ್ಟಿದ್ದೇವೆ.

Sri C. J. MUCKANNAPPA.—Why do you spend on Scouts? It is a colossal waste of money on this movement. At the cost of Scouts a telephone is installed at the house of the Scout Commissioner at Tumkur.

Sri J. B. MALLARADHYA.—It is totally a false statement being made on the floor of the House.

Sri C. J. MUCKANNAPPA.—I rise to a point of order, Sir. If I am not able to prove every word I have uttered on the floor of the House, I am prepared to.........

Mr. SPEAKER.—That is not a point of order. It is only a device to say something on the floor of the House. If Sri Muckannappa has a right to interrupt the Minister, then Sri Malla-radhya has also a right to interrupt if the Hon'ble Minister gives in.

ಶ್ರೀ ಅಣ್ಣಾರಾವ್ ಗಣಮುಖಿ.—ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ಗೆ 75 ಸಾವಿರ ರೂಪಾಯಿಗಳನ್ನೂ, N.C.C.ಗೆ ನಾರ್ಮಲ್ ಗ್ರಾಂಟ್ ಒಂದು ಲಕ್ಷ 60 ಸಾವಿರ ರೂಪಾಯಿಗಳನ್ನೂ, ಡೆವಲಪ್‌ಮೆಂಟ್ ಗ್ರಾಂಟ್ ಬಗ್ಗೆ ಒಂದು ಲಕ್ಷ 60 ಸಾವಿರ ರೂಪಾಯಿಗಳನ್ನೂ, A.C.C. ಬಗ್ಗೆ ಒಂದು ಲಕ್ಷ 57 ಸಾವಿರ ರೂಪಾಯಿಗಳ ನಾರ್ಮಲ್ ಗ್ರಾಂಟನ್ನೂ, ಒಂದು ಲಕ್ಷ 60 ಸಾವಿರ ರೂಪಾಯಿಗಳ ಡೆವಲಪ್‌ಮೆಂಟ್ ಗ್ರಾಂಟನ್ನೂ, ಸ್ಕೌಟ್ ಟ್ರೂಪ್ಸಿಗೆ ನಾರ್ಮಲ್ ಗ್ರಾಂಟ್ ಒಂದು ಲಕ್ಷ 20 ಸಾವಿರ ರೂಪಾಯಿಗಳನ್ನೂ, ಭಾರತ್ ಸೇವಾದಳಕ್ಕೆ 57 ಸಾವಿರ ಡೆವಲಪ್‌ಮೆಂಟ್ ಗ್ರಾಂಟನ್ನೂ, 90 ಸಾವಿರ ನಾರ್ಮಲ್ ಗ್ರಾಂಟನ್ನೂ ಕೊಟ್ಟಿದ್ದೇವೆ.

Sri J. B. MALLARADHYA.—After integration we have 8 districts added to our State and still you continue the grant for Scouts Organisation at the same level. Is this the type of integration you are thinking of and talking of? So many units of Scouts and Guides have come into the fold after integration and still you continue the grant at the same level. Not only that, but you have reduced it by 25 per cent. I raised that point, but there is no answer to it.

Sri ANNA RAO GANAMUKHI.—If it becomes necessary, we shall reappropriate and make finance available for that purpose. It is not such a difficult job.

9-30. A.M

ಶ್ರೀ ಟಿ. ಎಸ್. ಮುಡಲಗಿರಿಗೌಡ (ಕುಣಿಗಲು).—ಭಾರತ ಸೇವಾದಳ, ಸ್ಕಾಟ್ ಸಂಸ್ಥೆ ಇವುಗಳಿಗೆ ಕೊಡುವ ಹಣವನ್ನು ಅವರು ಖರ್ಚು ಮಾಡತಕ್ಕದ್ದೇ ಹೊರತು ಅದು ಸರಿಯಾಗಿ ವಿನಿಯೋಗವಾಗಿಲ್ಲವೆಂದು ಇನ್ನೊಬ್ಬರು ಟೀಕೆ ಮಾಡುವುದು ಸರಿಯಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ನಾರ್ಮಲ್ ಗ್ರಾಂಟ್‌ಬೇರೆ, ಡೆವಲಪ್‌ಮೆಂಟ್ ಗ್ರಾಂಟ್ ಬೇರೆ. ನಾರ್ಮಲ್ ಗ್ರಾಂಟನ್ನು ಆಯಾ ಸಂಸ್ಥೆಗಳವರೇ ಖರ್ಚು ಮಾಡಬಹುದು. ಆದರೆ ಡೆವಲಪ್‌ಮೆಂಟ್ ಗ್ರಾಂಟ್ ವಿಚಾರದಲ್ಲಿ ಏನೇನು development works ಮಾಡುತ್ತಾರೆಂದು ಮೊದಲು approval ತೆಗೆದು ಕೊಳ್ಳಬೇಕು. ಹಾಗೆಯೇ ಖರ್ಚು ಮಾಡುತ್ತೇವೆಂದರೆ ಸಾಧ್ಯವಿಲ್ಲ. It is an elected body and it is up to it to look after its affairs.

ಸೋಷಿಯಲ್ ವೆಲ್‌ಫೇರ್ ಸೆಮಿನಾರ್‌ಗೋಸ್ಕರ, ಹಣಬೇಕು, ಅದರಲ್ಲಿ ಕೇಂದ್ರದವರು ಶೇಕಡ 75 ಗ್ರಾಂಟ್ ಕೊಡುತ್ತಾರೆಂದು ಶ್ರೀಮಾನ್ ಮಲ್ಲಾರಾಧ್ಯರು ಪತ್ರ ಬರೆದಿದ್ದಾರೆ. ನಮ್ಮಲ್ಲಿ ಅದಕ್ಕೆ ಪ್ರತ್ಯೇಕ ಯೋಜನೆ ಇದೆ. ಅದೆಲ್ಲ ಪರಿಶೀಲನೆ ನಡೆದಿದೆ ಎಂದು ಹೇಳಬಹುದು.

ಬಿದರೆಯಲ್ಲಿ ಕಾಲೇಜ್ ಇಲ್ಲ, ಆದ್ದರಿಂದ ಅಲ್ಲಿಗೆ ಒಂದು ಕಾಲೇಜ್ ಕೊಡಬೇಕೆನ್ನುವ ವಿಷಯವನ್ನು ಮಾನ್ಯ ವಿರೇಂದ್ರ ಪಾಟೀಲ್ ಅವರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಅತ್ಯವಶ್ಯವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳಬಹುದು. ಆದರೆ ಸೈನ್ಸ್ ಅಥವಾ ಆರ್ಟ್ಸ್ ಕಾಲೇಜು ಆಗಲಿಕ್ಕೆ ಸ್ಥಳೀಯ ಜನರೂ ಸಹಕಾರ ಕೊಟ್ಟು ಸಹಾಯವನ್ನು ಮಾಡಿದರೆ ಆ ದಾರಿಯಲ್ಲಿ ನಾವು ಹೆಜ್ಜೆಯನ್ನು ಮುಂದೆ ಇಡಬಹುದೆಂದು ಅನ್ನಿಸುತ್ತದೆ. ಪರಿಶೀಲನೆ ಮಾಡಿ ಹುದು ಎಂದಿಷ್ಟೇ ಹೇಳಬಹುದೇ ವಿನಾ ಅದರ ಖರ್ಚಿಗೆ ಹಣವನ್ನು ಕೊಡಲು ಹಣಕಾಸಿನ ಮಂತ್ರಿಗಳು ಒಪ್ಪಬೇಕಾಗುತ್ತದೆ. ಅವರು ರೊಕ್ಕ ಕೊಟ್ಟರೆ ನಾವು ಮಾಡಬಹುದು. ಕಾಲೇಜುಗಳಲ್ಲಿ third year course introduce ಮಾಡಿದ್ದರಿಂದ ಕೇಂದ್ರದ ಸಹಾಯ ಬರುತ್ತಿದೆ. ಹೊಸದಾಗಿ ತೆರೆಯುವ ಕಾಲೇಜುಗಳಿಗೆ ಆ ರೀತಿ ಸಹಾಯ ಬರುವುದಿಲ್ಲ.

ಶ್ರೀ ಬಿ. ಎ. ದೇಸಾಯಿ (ಕಲಘಟಗಿ).—Undeveloped area ವನ್ನು develop ಮಾಡಲು ಆರು ಕೋಟಿ ರೂಪಾಯಿ ಹಣವನ್ನು ತೆಗೆದುಕೊಳ್ಳುತ್ತೀರಿ. ಅದರಿಂದ ಬಿದರೆಯೊಳಗೆ ಕಾಲೇಜು ಕೊಡುವುದಕ್ಕೆ ಹಣಕಾಸಿನ ಮಂತ್ರಿಗಳನ್ನು ಕೇಳಬೇಕು ಎಂದು ಹೇಳುತ್ತೀರಿ. ಈ ಹಣವನ್ನು ಯಾರ ಮೇಲೆ ಖರ್ಚು ಮಾಡಬೇಕೆಂದು ಮಾಡಿದ್ದೀರಿ?

ಶ್ರೀ ಅಣ್ಣಾರಾವ್ ಗಣಮುಖಿ.—ವಿದ್ಯಾಭ್ಯಾಸ ವಿಚಾರದಲ್ಲಿ ಮುಂಬೈ ಭಾಗ ಎಲ್ಲಕ್ಕಿಂತ ಮುಂದೆ ಇದೆ, ಅನಂತರ ಹೈದರಾಬಾದ್ ಭಾಗ ಬರುತ್ತದೆ, ಅದರನಂತರ ex-Mysore ಬರುತ್ತದೆ. ಹಳೆಯ ಮೈಸೂರು ಭಾಗದಲ್ಲಿ ಎಷ್ಟೋಕಡೆ ಶಾಲೆಗಳಿಲ್ಲ,

ಇನ್ನೂ develop ಆಗಿಲ್ಲ. ರಸ್ತೆಗಳು ಮುಂತಾದುವು ಸಾಕಾದಷ್ಟಿರಬಹುದು. ಆದರೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಾತ್ರ ಹಿಂದುಳಿದಿದೆ.

ಅಧ್ಯಕ್ಷರು. ಮುಂಬಯಿ ಮುಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ನಾವು ನಡೆಸಿರುವ ಸರ್ವೆ ಪ್ರಕಾರ ಬೊಂಬಾಯಿ ಬಹಳ ಮುಂದೆ ಹೋಗಿದೆ. Compulsory education ಸಂಬಂಧದಲ್ಲಿಈ ವರ್ಷ ಒಂದುಸಾವಿರ ಉಪಾಧ್ಯಾಯರನ್ನು ಕೊಡಬೇಕಾಗಿದೆ. ಅದರಲ್ಲಿ ಹಳೆಯ ಮೈಸೂರಿಗೆ 300 ಮತ್ತು ಹೈದರಾಬಾದಿಗೆ 400 ಕೊಟ್ಟಿದ್ದೇವೆ. ಹಿಂದುಳಿದವರನ್ನು ಮುಂದೆ ತರಲಿಕ್ಕೆ ಹತ್ತಿದ್ದೇವೆ. ಮುಂದೆ ಹೋಗಿರುವವರನ್ನು ಹಿಂದಕ್ಕೆ ನಿಲ್ಲಿಸತಕ್ಕ ಪ್ರಯತ್ನವಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನನ್ನ ಪ್ರಶ್ನೆಗೆ ಉತ್ತರ ಬಂದಿದೆ ಎಂಬುದು ನನಗನ್ನಿಸುವುದಿಲ್ಲ. ಕಾಲೇಜು ಮಾಡಬೇಕೆನ್ನುವುದರ ವಿಚಾರವಾಗಿ ಸರ್ಕಾರದ ಧೋರಣೆ ಏನೆಂಬುದನ್ನು ತಿಳಿಯಬೇಕು. ಕಾಲೇಜನ್ನು ಮಾಡುತ್ತೇವೆಂದರೆ ಜನರಿಂದ ಕಂಟ್ರಿಬ್ಯೂಷನ್ ಅಥವ ಮತ್ತೆ ಯಾವುದಾದರೂ ಸಹಾಯವನ್ನು ಕೊಡಿಸಬಹುದು. ಕಾಲೇಜನ್ನು ಮಾಡುವಂಥ proposal ಇಲ್ಲವೆಂದರೆ ಜನರಿಂದ ಸಹಾಯವನ್ನು ಕೊಡುವ ಪ್ರಶ್ನೆ ಬರುವಹಾಗೆಯೇ ಇಲ್ಲ. ಅಂಥ ಪ್ರಪೋಸಲ್ ಇದ್ದು ಜನ ಮುಂದೆ ಬರಬೇಕು ಎನ್ನುವುದಾದರೆ ಅದನ್ನು ಈ ಸಭೆಯಲ್ಲಿ ಹೇಳಿ.

ಶ್ರೀ ಅಣ್ಣಾರಾವ್ ಗಣಮುಖಿ.—ಜನರು ಎಷ್ಟು ಹಣವನ್ನು ಕೊಡುತ್ತಾರೆ, ಅವರಿಗೆ ಕೊಡತಕ್ಕ ಯೋಗ್ಯತೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಕಾಲೇಜು ತೆಗೆಯುವುದು ಎಂದರೆ ಕಟ್ಟಡದಮಟ್ಟಿಗಾದರೂ ಒದಗಿಸಿಕೊಡತಕ್ಕ ಪ್ರಯತ್ನವನ್ನು ಮಾಡಿದರೆ, ನಾವು ವಿಚಾರ ಮಾಡಬಹುದು ಎಂದು ಹೇಳಬಹುದು. ಕಾಲೇಜನ್ನು ತೆರೆಯುತ್ತೇವೆಂದು ಹೇಳಬೇಕಾದರೆ ನಾನು ವ್ಯಕ್ತಿಗತವಾಗಿ ಹೇಳಲಿಕ್ಕೆ ಬರುವುದಿಲ್ಲ; ಆ ವಿಷಯವನ್ನು ಈಗ ಹೇಳತಕ್ಕ ಸ್ಥಿತಿಯಲ್ಲಿಲ್ಲ. ಆದರೆ ಒಂದು ವಿಷಯವನ್ನು ಹೇಳಬಹುದು. ನಾವು ಮುಂದಿನ ವರ್ಷ ಒಂದು ಪಾಲಿಟೆಕ್ನಿಕ್ ತೆಗೆಯುವವರಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್.—ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು ಕಾಲೇಜನ್ನು ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರದ ನೀತಿ ಏನು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.— ಸರ್ಕಾರದ ನೀತಿಯಾದರೂ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳನ್ನು ತೆರೆಯುವುದಲ್ಲ. ಈಗಿರುವ ಕಾಲೇಜುಗಳೇ ಸಾಕಾಗಿವೆ. ಇರುವ ಕಾಲೇಜುಗಳಲ್ಲಿ ಸೀಟ್ಸ್ ಭರ್ತಿಯಾಗಬೇಕಾದರೆ ಕಷ್ಟವಾಗಿದೆ. ಸೀಟ್ಸ್ ಖಾಲಿ ಬೀಳುತ್ತಿವೆ. ಪ್ರೈಮರಿ ಶಾಲೆಗಳನ್ನು ಹೆಚ್ಚಿಗೆ ತೆರೆಯಬೇಕಾಗಿದೆ. ಹುಡುಗರಿದ್ದಲ್ಲಿ ಕಾಲೇಜನ್ನು ತೆರೆಯಬೇಕೆಂಬ ಉದ್ದೇಶವಿಲ್ಲ. ಕಾಲೇಜು ಇದ್ದಲ್ಲಿಗೆ ಹುಡುಗರು ಹೋಗಬೇಕು. ಸರ್ಕಾರ ತನ್ನ ಖರ್ಚಿನಿಂದ ಎಲ್ಲಿಯೂ ಕಾಲೇಜುಗಳನ್ನು ತೆರೆಯುವುದಿಲ್ಲ. Backward area ಎಂದು ಪರಿಶೀಲನೆ ಮಾಡಬಹುದು. ಆ ಪ್ರದೇಶಕ್ಕೆ ಕಾಲೇಜು ಬೇಕೋ, ಹೇಗೆ, ಎಂದು ವಿಚಾರ ಮಾಡಬೇಕೆಂದು ಮಾತ್ರ ಹೇಳಬಯಸುತ್ತೇನೆ.

ಶ್ರೀಮಾನ್ ಘೋರ್ಪಡೆಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಬೀಹಾರ್ ಮಾದರಿಯಲ್ಲಿ ಒಂದು ಪಬ್ಲಿಕ್ ಸ್ಕೂಲ್ ಬೇಕು ಎಂದು. ನಾನು ಅವರಿಗೆ ಕೇಳಿಕೊಳ್ಳುವುದು, ಸರ್ಕಾರದ ಕಡೆಯಿಂದ ಪಬ್ಲಿಕ್ ಸ್ಕೂಲ್ ಸ್ಥಾಪನೆ ಮಾಡಬೇಕೆನ್ನುವುದು ಆಗುವುದಿಲ್ಲ. ಅದಕ್ಕಾಗಿ ಖಾಸಗಿ ಜನರು ಪ್ರಯತ್ನಿಸಿ ಪ್ರಾರಂಭಮಾಡಿದರೆ backward students ಇದ್ದವರಿಗೆ ನಮ್ಮ ಕಡೆಯಿಂದ ಸ್ಕಾಲರ್‌ಷಿಪ್ ಕೊಡುತ್ತೇವೆ. ಅವರು ಪ್ರಾರಂಭಿಸಿ ಪ್ರಯತ್ನಮಾಡಬೇಕೆಂದು ಹೇಳುತ್ತೇನೆ. ದೇಶದಲ್ಲಿ ನಾಯಕರನ್ನು ಹೆಚ್ಚಿಸಬೇಕು ಎನ್ನುವ ಇಚ್ಛೆ ಇದ್ದರೆ ಬಳ್ಳಾರಿ ಜಿಲ್ಲೆಯಲ್ಲಿ ಪಬ್ಲಿಕ್ ಸ್ಕೂಲ್ ಒಂದನ್ನು ತೆರೆಯಬಹುದು.

Sri M. Y. GHORPADE (Sandur).—If it is the intention of the Government to give scholarships, why should the Government not take the credit? Why should you give credit to the private persons ?

Sri ANNA RAO GANAMUKHI.—We want to encourage as much as possible private enterprise. Government is an abstract body. It is a continuing entity.

Sri M. Y. GHORPADE.—A Government Public School for the whole State, is what I want. It cannot be run by private body.

Sri ANNA RAO GANAMUKHI.—If it should be run by Government entirely, then there will be a clamour in every District for such a school. If such a school is started by a private body, Government aid will be forthcoming substantially.

Sri M. Y. GHORPADE.—They hold public examinations in all District Headquarters and 10 or 20 boys who stand high in the list are admitted into this public school. That is why it is necessary that Government should run the school.

Sri ANNA RAO GANAMUKHI.—For the moment, Government is not inclined to open such a school, but if a private body comes forward, we will be helping it liberally.

Mr. SPEAKER.—There is a Public School in Gwalior. It is run by private people.

Sri ANNA RAO GANAMUKHI.—The Hon'ble Member has promised to give a memorandum and I will consider whether it is feasible or not *prima facie* it appears it is not possible. The Government is not in a position to divert any amount from the budget for that propose I think it cannot be brought under the Plan also.

Sri Y. VEERAPPA (Holenarasipur).—Under what provision you have provided?

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಪ್ಲಾನಿನಲ್ಲಿ ತರುವುದೂ ತಮ್ಮ ಕೈಯಲ್ಲೇ ಇದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಅವರು ಇನ್ನೊಂದು ಹೇಳಿದರು, ವಿದ್ಯಾಭ್ಯಾಸದ ಇಲಾಖೆಯಲ್ಲಿ ಖರ್ಚು ಬಹಳ ಕಡಮೆಯಾಗಿದೆ, ಎಂದು. ಕೇವಲ ಶೇಕಡ 50ರಷ್ಟು ಮಾತ್ರ ಖರ್ಚಾಗಿದೆ ಎಂದರು. ನಾನು ಬಜೆಟ್ಟಿನಮೇಲೆ ಸಾಮಾನ್ಯ ಚರ್ಚೆಯ ಸಂದರ್ಭದಲ್ಲಿ ಉತ್ತರ ಕೊಡುತ್ತಾ ತಿಳಿಸಿದ್ದೇನೆ ಜನರಲ್ ಮತ್ತು ಟೆಕ್ನಿಕಲ್ ವಿದ್ಯಾಭ್ಯಾಸಕ್ಕಾಗಿ 57·77 ಲಕ್ಷ ರೂಪಾಯಿಗಳನ್ನು provi ಮಾಡಿದ್ದುದರಲ್ಲಿ 19 ಲಕ್ಷ ರೂಪಾಯಿಗಳನ್ನು General Educationನ್ನಿನಲ್ಲೂ, 21 ಲಕ್ಷ ರೂಪಾಯಿಗಳನ್ನು Technical Educationನ್ನಿನಲ್ಲೂ ಖರ್ಚಾಗಿದೆ ಯೆಂದು ಹೇಳಿದೆ. ಒಂದು ವಿಷಯವನ್ನು ಮಾನ್ಯ ಸದಸ್ಯರು ತಿಳಿದಕೊಳ್ಳಬೇಕು. ಬಜೆಟ್ಟಿನಲ್ಲಿ ಹಾಕಿ ದಾಕ್ಷಣ ಅದಷ್ಟನ್ನು ಖರ್ಚುಮಾಡಬೇಕೆಂದಿಲ್ಲ. ಹಾಗೆ ಖರ್ಚು ಮಾಡುವುದರಲ್ಲಿ ಅನೇಕ ತೊಡಕುಗಳು ಬರುತ್ತವೆ. ಉದಾಹರಣೆಗೆ, ಈಗ ಟೆಕ್ನಿಕಲ್ ವಿದ್ಯಾಭ್ಯಾಸದ ಕೆಳಗೆ ಕೆಲವು ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಬೇಕೆಂದಿತ್ತು. ಆದರೆ ಅದಕ್ಕೆ ಅಡಚಣೆಯಾಗಿ ಸಮಯಕ್ಕೆ ಸರಿಯಾಗಿ equipment ಸಿಕ್ಕದಿರುವುದು, exchange ತೊಂದರೆಯುಂಟಾಗಿರುವುದಿದೆ. ಸರಿಯಾದ ಜಾಗ ಕೆಲವು ಸಂದರ್ಭಗಳಲ್ಲಿ ಸಿಕ್ಕಲಿಲ್ಲ. ಕೆಲವುವೇಳೆ, ಇಂಡಿಯಾ ಸರ್ಕಾರದವರು ಗೊತ್ತು ಮಾಡಿದ್ದ ಕೋಟಾಕ್ಕಿಂತಲೂ ಹೆಚ್ಚು ಖರ್ಚುಮಾಡ ಬೇಕಾದ ಪ್ರಸಂಗ ಬಂದಿತು.

ಶ್ರೀ ವೈ. ವೀರಪ್ಪ.—ಹೀಗಾದರೆ ಇನ್ನೂ bulky Budgetನ್ನು ನಮ್ಮ ಆರ್ಥಿಕ ಮಂತ್ರಿಗಳು ತೋರಿಸ ಬಹುದಲ್ಲಾ!

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).—ನಮ್ಮಲ್ಲಿ ಪಾಲಿಟೆಕ್ನಿಕ್‌ಗಳನ್ನು ಸ್ಥಾಪಿಸಿರುವಷ್ಟು ಮಟ್ಟಿಗೆ ಇನ್ನು ಯಾರೂ ಮಾಡಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಆರೀತಿ ಬೇಕಂತ ಯಾರೂ ಉಳಿಸುವುದಿಲ್ಲ. ಜಾಗ ಸಿಕ್ಕದಿರುವುದು, ಕಟ್ಟಡ ಇಲ್ಲದಿರುವುದು, ಸಲಕರಣೆಗಳು ಬರುವುದು ನಿಧಾನವಾಗಿ ಖರ್ಚಿನಲ್ಲಿ shortfall ಆಗಿದೆ ಅಷ್ಟೇ.

ಶ್ರೀ ವೈ. ವೀರಪ್ಪ.—ಹಾಗಿದ್ದರೆ, ಅವುಗಳನ್ನೆಲ್ಲಾ ಮೊದಲೇ ಕೈಬಿಡಬಹುದಲ್ಲಾ.

ಶ್ರೀ ಅಣ್ಣಾರಾವ್ ಗಣಮುಖಿ.—ಹಾಗೆಮಾಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಇನ್ನೂ ಹೆಚ್ಚಿಗೆ ಖರ್ಚಾಗಬಹುದು.

ಶ್ರೀ ವೈ. ವೀರಪ್ಪ.—ಹಾಗಾದರೆ, ಇದು fraud ಆಗುವುದಿಲ್ಲವೇ ?

ಶ್ರೀ ಟಿ. ಮರಿಯಪ್ಪ.—Fraud ಹೇಗೆ? ಯಂತ್ರೋಪಕರಣಗಳು ಸಿಕ್ಕದಿದ್ದರೆ ಏನು ಮಾಡುವುದು ?

ಶ್ರೀ ಅಣ್ಣಾರಾವ್ ಗಣಮುಖಿ.—ಒಂದು ಕಡೆ ಪಾಲಿಟೆಕ್ನಿಕ್ ಪ್ರಾರಂಭಮಾಡಬೇಕೆಂದಾಗ ನಮಗೆ ಸರಿಯಾದ ಸಿಬ್ಬಂದಿಯೇ ಸಿಕ್ಕಲಿಲ್ಲ. ಮುಂಚೆ ಸ್ಥಳ ಸಿಕ್ಕಲಿಲ್ಲ. ಸಿಬ್ಬಂದಿ ಸಿಕ್ಕುವಹೊತ್ತಿಗೆ ನಾಲ್ಕೈದು ತಿಂಗಳಾಯಿತು. ಖರ್ಚಾಗಲಿಲ್ಲವೆಂದು ಹೇಳಿ ಕೆಲಸ ಮಾಡದೆ ಇದ್ದರೂ ಸಂಬಳ ಕೊಡುವುದೇ? ಹಾಗೆಯೇ ಮಲ್ಟಿಪರ್ಪಸ್ ಹೈಸ್ಕೂಲುಗಳನ್ನು ಪ್ರಾರಂಭಮಾಡುವುದಕ್ಕೆ ಸಹಾಯಮಾಡುವುದಕ್ಕೆಂದು ಹೇಳಿ D.P.I. ಅವರ ಹತ್ತಿರ ಹಣ ಕೊಟ್ಟಿದ್ದೇವೆ. ಇದಕ್ಕೆ ಸರ್ಕಾರ ಒಂದಿಷ್ಟು ಹಣ ಕೊಡಬೇಕು, ಅವರು ಒಂದಷ್ಟು ಕೊಡಬೇಕೆಂದು ನಿಯಮವಿದೆ. ಆದರೆ, ಈ ಹೈಸ್ಕೂಲು ಪ್ರಾರಂಭಮಾಡುವವರು ನಮ್ಮ ಹತ್ತಿರ ದುಡ್ಡಿಲ್ಲ, ನೀವೇ ಅಡ್ವಾನ್ಸ್ ಕೊಡಿ ಎಂದು ಹೇಳುತ್ತಿದ್ದಾರೆ. ಅಡ್ವಾನ್ಸಾಗಿ ಕೊಡುವುದಕ್ಕೆ ರೂಲ್ಸ್ ಇಲ್ಲ. ಹೀಗಾಗಿ ಅದರಲ್ಲಿ ಖರ್ಚಾಗಿಲ್ಲ. ಇನ್ನುಮುಂದೆ ಡೆಪ್ಯುಟಿ ಕಮಿಷನರಿಗೆ ಹಣ ಕೊಟ್ಟು ಪಿ.ಡಬ್ಲ್ಯು.ಡಿ. ನಿಂದ ಕೆಲಸ ಮಾಡಿಸಬೇಕೆಂದು ಯೋಚನೆಮಾಡಿದ್ದೇವೆ. ಹೀಗೆಲ್ಲಾ, Shortfall ಆಗುವುದಕ್ಕೆ ಅವಕಾಶವಾಗಿದೆ. ಆದರೂ 31ನೆಯ ಮಾರ್ಚಿಯವರೆಗಿನ ಲೆಕ್ಕಾವನ್ನು ತೆಗೆದುಕೊಂಡರೆ 275 ಲಕ್ಷ ರೂಪಾಯಿಗಳ ಪೈಕಿ 175 ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ತಿಳಿದಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—1959-60ನೆಯ ಇಸವಿಗೆ ಮಲ್ಟಿಪರ್ಪಸ್ ಹೈಸ್ಕೂಲುಗಳನ್ನು ಎಷ್ಟು ತೆರೆಯುತ್ತೀರಿ ?

ಶ್ರೀ ಅಣ್ಣಾರಾವ್ ಗಣಮುಖಿ.—ಇನ್ನು ಮುಂದೆ ಸರ್ಕಾರದವರು ಹೈಸ್ಕೂಲುಗಳನ್ನು ತೆರೆಯುವುದಿಲ್ಲ. ಮೂರು ಲಕ್ಷ ರೂಪಾಯಿಗಳನ್ನು Provision ಮಾಡಿದ್ದೇವೆ. ಎಲ್ಲಿ ಹೈಸ್ಕೂಲಿನ ಅವಶ್ಯಕತೆಯಿದೆ ಅಲ್ಲಿ equipmentಗೆ, ಕಟ್ಟಡಕ್ಕೆ ಬೇಕಾದ ಸ್ವಲ್ಪ ಹಣ ಸಹಾಯಮಾಡುತ್ತೇವೆ.

Sri V. P. DEENADAYALU NAIDU (Cubbonpet).—Are you thinking of developing astrology as a subject and starting an institution ?

ಶ್ರೀ ಅಣ್ಣಾರಾವ್ ಗಣಮುಖಿ.—ಸಂಗೀತ ನಾಟಕ ಅಕ್ಯಾಡೆಮಿ ವಿಷಯದಲ್ಲಿ ಕೆಲವರು ಬಹಳ ಕಡಮೆ ಕೊಟ್ಟಿದೆಯೆಂದು ಹೇಳಿದರು. ಆದರೆ ಶ್ರೀಮಾನ್ ಕೆಂಚಪ್ಪನವರು ಇದನ್ನು ತೆಗೆದೇ ಹಾಕಿಬಿಡಬೇಕೆಂದು ಹೇಳಿದರು. ಇದನ್ನು ನೋಡಿದರೆ, ನಾವು ಹಾಗೂ ಇಲ್ಲ, ಹೀಗೂ ಇಲ್ಲವೆಂದು ಮಧ್ಯವೆನ್ನುವಂತೆ ಒದಗಿಸಿದ್ದೇವೆ. ಇದೇ ಸರಿಯೆಂದು ಕಾಣುತ್ತದೆ. ಕೆಲವರು ಇದು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ಈ ಸಂದರ್ಭದಲ್ಲಿ ಶ್ರೀ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆಮಾಡಿದ್ದೇವೆ. ಅವರು ಈಗತಾನೆ ರಿಪೋರ್ಟ್ ಕಳುಹಿಸಿದ್ದಾರೆ. ಅದು ಪರಿಶೀಲನೆಯಲ್ಲಿದೆ. ಜನರಲ್ ಬಾಡಿ ಮೀಟಿಂಗ್ ಕರೆದು ಅವರ ಸಲಹೆಯನ್ನು ತೆಗೆದುಕೊಂಡು ಅದರಮೇಲೆ ಕೆಲಸ ಪ್ರಾರಂಭಮಾಡಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಡೆವಲಪ್‌ಮೆಂಟ್ ಗ್ರಾಂಟ್ ಎಂದು ಹೇಳಿ 55,000 ರೂಪಾಯಿಗಳನ್ನು ಹಿಂದೆ 1956-57ರಲ್ಲಿ ಕೊಟ್ಟಿತ್ತು. ಇನ್ನು ಮುಂದೆ ಯಾವರೀತಿ ಡೆವಲಪ್‌ಮೆಂಟಿಗೆ ಗಮನಕೊಡಬೇಕೆಂದು ಯೋಚನೆಮಾಡಿ ಖರ್ಚುಮಾಡುತ್ತೇವೆ. ಈ ವರ್ಷ ಮಾತ್ರ ಖರ್ಚೇನೂ ಆಗಿಲ್ಲ, 15 ಸಾವಿರ ರೂಪಾಯಿ ಕೊಟ್ಟಿದ್ದೆವು. ಅದರಲ್ಲಿ ಆರು ಸಾವಿರ ರೂಪಾಯಿ ಸಿಬ್ಬಂದಿ ಸಂಬಳ ಸಾರಿಗೆಗಾಗಿ ಖರ್ಚಾಗಿದೆ, ಉಳಿದ ಒಂಭತ್ತು ಸಾವಿರ ಗ್ರ್ಯಾಂಟ್ ಕೊಟ್ಟಿರುವುದು, ಡೆವಲಪ್‌ಮೆಂಟ್ ಗ್ರ್ಯಾಂಟ್ ಖರ್ಚಾಗಿಲ್ಲ. ಸಂಬಂಧಪಟ್ಟ ಸಮಿತಿ ಕೂಡಿದಮೇಲೆ ಕೇಳಿ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಕೆಂಗೇರಿ ನಿಮ್ಮ ವರ್ಗದ ಪರವಾಗಿ ಸರ್ಕಾರಕ್ಕೆ ಮನವಿ ಮಾಡಿರುವ ವಿಚಾರದಲ್ಲೇನು ಕಾರ್ಯಕ್ರಮ ಕೈಕೊಂಡಿದೆ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದು ನನ್ನ ಗಮನಕ್ಕೆ ಬಂದಿಲ್ಲ. ಬಂದನಂತರ ಆವಶ್ಯಕ ಕಾರ್ಯಕ್ರಮ ಏನು ಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

Sri F. H. MOHSIN.—In view of the fact that the shift system prevalent in Bombay Karnatak area in primary schools is not working properly, will the Government consider abolishing it?

Sri ANNA RAO GANAMUKHI.—Unless building facilities are available, it is impossible to abolish. If alternative proposals are sent, Government will consider. ಈಗ ನಮ್ಮ ಎಜುಕೇಷನ್ ಪ್ಯಾಟ್ರನ್ ಪ್ರಕಾರ ಪ್ರೈಮರಿ ಸ್ಟೇಜಿನಲ್ಲಿ ಆರ್ಡಿನರಿ ಸ್ಕೂಲನ್ನು ಬೇಸಿಕ್ ಸ್ಕೂಲು ಮಾಡುವುದು, ಹೈಸ್ಕೂಲು ಸ್ಟೇಜಿನಲ್ಲಿ ಪ್ರೊಫೆಷನಲ್ ಸ್ಕೂಲು, ಮಲ್ಟಿಪರ್ಪಸ್ ಸ್ಕೂಲು ಮಾಡುವುದು, ಕಾಲೇಜು ಸ್ಟೇಜಿನಲ್ಲಿ ಪ್ರೊಫೆಷನಲ್ ಮತ್ತು ಟೆಕ್ನಿಕಲ್ ಕಾಲೇಜುಗಳನ್ನು ವಿಶೇಷವಾಗಿ ತೆರೆಯುವುದು ಈ ಕಾರ್ಯಕ್ರಮ ನಮ್ಮ ಎದುರಿಗಿದೆ. ಈಗ ಟೆಕ್ನಿಕಲ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ನಮ್ಮ ಡಿಪ್ಲೊಮಾ ಕೋರ್ಸುಗಳಿಗೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 1,370 ಸೀಟುಗಳು, ಡಿಗ್ರಿ ಲೆವಲ್‌ನಲ್ಲಿ 410 ಇದ್ದುವು. ಈಗ ಅದರ ಸಂಖ್ಯೆ ದ್ವಿಗುಣವಾಗಿದೆಯೆಂದು ಹೇಳಬಹುದು. ಇನ್ನು ಮುಂದೆ 2,800 ಡಿಪ್ಲೊಮಾ ಸೀಟ್ಸ್, 930 ಡಿಗ್ರಿ ಕೋರ್ಸಿನ ಸೀಟ್ಸ್ ನಮ್ಮ ದೇಶದಲ್ಲಿರುತ್ತವೆ. ಈ ವರ್ಷ ಮಂಗಳೂರಿನಲ್ಲಿ ಸೆಂಟ್ರಲೀ ಸ್ಪಾನ್ಸರ್ಡ್ ಸ್ಕೀಂ ಪ್ರಕಾರ ಇಂಜಿನಿಯರಿಂಗ್ ಕಾಲೇಜ್ ಮಾಡುವುದಿದೆ. ಅದರಲ್ಲಿ 250 ಸೀಟುಗಳಿರುತ್ತವೆ. ಸ್ಟೇಟ್ ಲೆವಲ್‌ನಲ್ಲೂ ಕೂಡ ಎರಡು ಇಂಜಿನಿಯರಿಂಗ್ ಕಾಲೇಜುಗಳು ಒಂದು ಶಿವಮೊಗ್ಗದಲ್ಲಿ, ಇನ್ನೊಂದು ಹಾಸನ ಅಥವಾ ಬೇರೆ ಕಡೆ ಎಂದು ನಿರ್ಣಯವಾಗಿಲ್ಲ; ಈ ಪ್ರಕಾರ ಮೂರು ಮುಂದಿನ ವರ್ಷ ಆಗಬೇಕು. ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಹಣ ಸಾಕಾದಷ್ಟು ಇಟ್ಟಿದ್ದೇವೆ.

ಶ್ರೀ ವೈ. ವೀರಪ್ಪ.—ಶಿವಮೊಗ್ಗ ಎಂದು ನಿರ್ಣಯವಾಗಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಇನ್ನೂ ನಿರ್ಣಯ ಮಾಡಿಲ್ಲ. ಹೀಗೆ ಸ್ಟೇಟ್ ಲೆವಲ್‌ನಲ್ಲಿ ಎರಡು ಇಂಜಿನಿಯರಿಂಗ್ ಕಾಲೇಜುಗಳು, ಮಂಗಳೂರಿನಲ್ಲಿ ಒಂದು ಸೆಂಟ್ರಲೀ ಸ್ಪಾನ್ಸರ್ಡ್ ಇಂಜಿನಿಯರಿಂಗ್ ಕಾಲೇಜು ಹೀಗೆ ಮೂರು ಆಗುವುದಿದೆ. ಪಾಲಿಟೆಕ್ನಿಕ್ ಸ್ಕೂಲು ನಾಲ್ಕು ಇವೆ; ಒಂದು ಬಿದರೆ ಜಿಲ್ಲೆಯಲ್ಲಿ, ಒಂದು ಮಂಡ್ಯ ಜಿಲ್ಲೆಯಲ್ಲಿ ಆಗಬೇಕು, ಬಾಕಿಯವಕ್ಕೆ ನಾವು ನಿರ್ಣಯ ತೆಗೆದುಕೊಂಡಿಲ್ಲ. ಈ ಪ್ರಕಾರವಾಗಿ ಮಾಡುವಾಗ ಟೆಕ್ನಿಕಲ್ ಎಜುಕೇಷನ್ ಬಗ್ಗೆ ಎಷ್ಟು ಪ್ರಗತಿಯಾಗಿದೆಯೆಂದು ಎಲ್ಲರೂ ಊಹಿಸಬಹುದು. ಜರ್ಮನಿಯಲ್ಲಿ ಒಬ್ಬ ಸೊಸೆ ಗಂಡನ ಮನೆಗೆ ಹೋದಾಗ ಮೇಲೆ ಜಂತೆಯಲ್ಲಿ ಚಾಕು ಇತ್ತಂತೆ. ಅದನ್ನು ನೋಡಿ ಅಳಲು ಷುರುಮಾಡಿದಳಂತೆ. ಏಕೆಂದು ಕೇಳಿದರೆ ಮುಂದೆ ಹುಟ್ಟುವ ಮಗುವಿನ ತಲೆಯಮೇಲೆ ಆ ಚಾಕು ಬಿದ್ದರೆ ಏನು ಮಾಡುವುದು ಎಂದು ಅಳುತ್ತಿದ್ದೇನೆಂದು ಹೇಳಿದಳಂತೆ. ಹಾಗೆ ಯಾವುದಾದರೂ ಭಯದಿಂದ ಏನೂ ಪ್ರೋಗ್ರೆಸ್ ಇಲ್ಲವೆಂದು ಹೇಳಿದರೆ ಹೇಗೆ? ನಮ್ಮ ಪಕ್ಕದಲ್ಲಿರುವ ರಾಜ್ಯಗಳಲ್ಲಿ ಟೆಕ್ನಿಕಲ್ ಎಜುಕೇಷನ್ ಎಷ್ಟು ಮುಂದುವರಿದಿದೆ, ನಮ್ಮಲ್ಲಿ ಹೇಗಿದೆ ಎಂದು ನೋಡಿದರೆ ನಾವು ಬಹಳವಾಗಿ ಮುಂದುವರಿದಿದ್ದೇವೆಂದು ಧಾರಾಳವಾಗಿ ಹೇಳಬಹುದು.

ಶ್ರೀ ವೈ. ವೀರಪ್ಪ.—ಒಂದು ಅಪಾಯ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಕಾಣುತ್ತದೆ. ಮಲೆನಾಡು ಎಜುಕೇಷನ್ ಸಮಿತಿಯೆಂದು ಹಾಸನದಲ್ಲಿ ಏರ್ಪಾಡುಮಾಡಿ, ಮಾನ್ಯ ಮುಖ್ಯ ಮಂತ್ರಿಗಳನ್ನೂ ಮತ್ತು ತಮ್ಮನ್ನೂ ನಾವು ನೋಡಿ, ಈಗಾಗಲೆ ಹಣ ವಸೂಲು ಮಾಡಿದ್ದೇವೆ. ಅಷ್ಯೂರ್‌ಮಾಡಿ ಈಗ ನಸ್ಪೆಕ್ಟೇಷನ್‌ನಲ್ಲಿಟ್ಟರೆ ಹೇಗೆ?

ಶ್ರೀ ಅಣ್ಣಾರಾವ್ ಗಣಮುಖಿ.—First come first served ಎಂಬಂತೆ ಶಿವಮೊಗ್ಗಾದವರು ಮೊದಲು ಬಂದರು.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಾವು ಮೂರು-ನಾಲ್ಕು ವರ್ಷಗಳಿಂದ ಇಂಜಿನಿಯರಿಂಗ್ ಕಾಲೇಜು ಕೇಳುತ್ತಿದ್ದೇವೆ.

ಶ್ರೀ ಅಣ್ಣಾರಾವ್ ಗಣಮುಖಿ.—ಅದನ್ನು ಅವಶ್ಯವಾಗಿ ಪರಿಶೀಲಿಸುತ್ತೇವೆ. ಆದರೆ 1961-62ರವರೆಗೆ ಕಾಯಬೇಕು.

Sri GAJANANA PANDIT (Mangalore II).–You have stated that the centrally sponsored Engineering College for Mangalore will have 250 seats. Will the seats be open only to the State or filled up on an all-India basis?

Sri ANNA RAO GANAMUKHI.—It is centrally sponsored. Therefore it may be open to the whole of India. The position is not clear. I feel local people may get more chances. Mysore State may take more seats. Anyhow the position is not clear.

Sri J. B. MALLARADHYA.—I raised a point regarding Ramadurga.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಅಲ್ಲಿಗೆ ಹೋಗಿದ್ದಾಗ ಒಂದು ಮನವಿಯನ್ನರ್ಪಿಸಿದ್ದರು. ಪೌರಸಭೆಗೆ ಶಾಲೆಗಳ ಹೊರೆಯನ್ನು ಹೊರಿಸಬಾರದೆಂಬುದು ಸರ್ಕಾರದ ನೀತಿಯಾಗಿದೆ. ಸಾಧ್ಯವಾದಷ್ಟು ಹೈಸ್ಕೂಲು ವಿದ್ಯಾಭ್ಯಾಸದ ಹೊಣೆಯನ್ನು ಖಾಸಗಿ ಸಂಸ್ಥೆಗಳೇ ವಹಿಸಬೇಕು. ನಮಗೆ ವಹಿಸಿ ಎಂದು ಕೆಲವರು ಕೇಳುತ್ತಾರೆ. ನಮ್ಮ ಧೋರಣೆಯ ಪ್ರಕಾರ ಖಾಸಗಿ ಸಂಸ್ಥೆಗಳು ನಡೆಸಬೇಕೇ ಹೊರತು ಲೋಕಲ್ ಬಾಡೀಸ್ ಈ ಹೊಣೆಯನ್ನು ಹೊತ್ತುಕೊಳ್ಳಬಾರದು. ಆದರೆ ಅಲ್ಲಿ ಒಂದು ಪ್ರೈವೇಟ್ ಬಾಡಿ ಈಗಾಗಲೆ ನಡೆಸಲು ಷುರುಮಾಡಿದೆ.

10 A.M.

ಈ ಒಂದು ಪ್ರಶ್ನೆ ನಮ್ಮ ಮುಂದೆ ಇದೆ. ಪ್ರೊಪೋಜಲ್ಸ್ ಏನಿವೆಯೋ ಅವುಗಳನ್ನು ನೋಡಿ ಪರಿಶೀಲನೆ ಮಾಡಿ ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ. ಈಗ ಈ ಸಭೆಯಲ್ಲಿ ಏನನ್ನೂ ಹೇಳಲು ಸಾಧ್ಯವಿಲ್ಲ.

ಶ್ರೀ ಮೋಹಸೀನ್‌ಅವರು ಕೆಲವು ಮುಸ್ಲಿಮ್ ಸ್ಕೂಲುಗಳಿಗೆ ಸ್ಟೈಪೆಂಡ್ ಕೊಡುವುದರ ಬಗ್ಗೆ ಹೇಳಿದರು. ಅವರು ಮಾಡಿರತಕ್ಕ ಸೂಚನೆ ಉಚಿತವಾಗಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

Sri C. M. ARUMUGHAM.—The last Ministry, Sri Nijalingappa had decided to give scholarships to Scheduled class converts to Christianity. They had given for three or four months. After this Government came they have stopped it. May I know the position now?

Sri ANNA RAO GANAMUKHI.–That is under consideration now.

Mr. SPEAKER.—How much more time the Hon'ble Minister requires?

Sri ANNA RAO GANAMUKHI.—I require about half an hour more.

Mr. SPEAKER.—The House will now rise for recess and meet after half an hour.

The House adjourned at Five Minutes past Ten of the Clock and reassembled at Forty-five Minutes past Ten of the Clock.

[MR. SPEAKER in the Chair]

ಶ್ರೀ ಅಣ್ಣಾರಾವ್ ಗಣಮುಖಿ.—ಅಧ್ಯಕ್ಷರೇ, ನಾನು ವಿಶೇಷ ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನು ಒಂದೆರಡು ವಿಷಯಗಳು ಎಂದರೆ ಪೋಸ್ಟ್ ಬೇಸಿಕ್ ಹೈಸ್ಕೂಲುಗಳನ್ನು ತೆರೆಯಬೇಕೆಂದು ನಮ್ಮೆಲ್ಲರ ಒಂದು ಯೋಚನೆ ಇದೆ. ಆ ಪ್ರಕಾರವಾಗಿ ಸಿಲಬಸ್ ಕೂಡ ಸರ್ಕಾರದವರು ಫೈನಲೈಸ್ ಮಾಡಿದ್ದಾರೆ. ಆ ಸಿಲಬಸ್ ಯೂನಿವರ್ಸಿಟಿಯವರಿಗೂ ಹೋಗುತ್ತದೆ. ಪೋಸ್ಟ್ ಬೇಸಿಕ್ ಹೈಸ್ಕೂಲಿನಲ್ಲಿ ಪಾಸ್ ಆದವರಿಗೆ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಸಿಕ್ಕುತ್ತದೆಯೋ ಇಲ್ಲವೇ ಎಂಬುದನ್ನು ಪ್ರಾಸ್ಪೆಕ್ಟಸ್ಸಿನಲ್ಲಿ ತಿಳಿಸಿದ್ದೇನೆ. ಏಕೆಂದರೆ full-fledged basic school ನಲ್ಲಿ ಪಾಸ್ ಆದವರು ಪೋಸ್ಟ್ ಬೇಸಿಕ್ ಸ್ಕೂಲ್‌ಗೆ ಹೋದರೆ ವಿಶೇಷ ಅನುಕೂಲ ಒದಗುತ್ತದೆ. ಮತ್ತು ಅವರಿಗೆ ಅಲ್ಲಿ ಎಷ್ಟೋ ಬೇಸಿಕ್ crafts ಕಲಿತಿದ್ದನ್ನು follow ಮಾಡಲಿಕ್ಕೆ ಆಗುತ್ತದೆ ಎಂದು ಒಂದು ಸಲಹೆ ಇದೆ.

ಗವರ್ನ್‌ಮೆಂಟ್ ಆಫ್ ಇಂಡಿಯಾದವರು ನಾವು ಐದು ಟೆಕ್ನಿಕಲ್ ಹೈಸ್ಕೂಲುಗಳನ್ನು ತೆರೆಯುವುದ ಕ್ಕೋಸ್ಕರ ನಮಗೆ ಕಾಗದ ಕಳುಹಿಸಿದ್ದಾರೆ. ಈ ಟೆಕ್ನಿಕಲ್ ಹೈಸ್ಕೂಲುಗಳಲ್ಲಿ ಸಾಧಾರಣವಾಗಿ ಟೆಕ್ನಿಕಲ್ ಕೋರ್ಸ್ ಇರುತ್ತದೆ; ಜನರಲ್ ಕೋರ್ಸ್ ಕಡಮೆಯಾಗಿರುತ್ತದೆ. ಅದಕ್ಕೆ ಯೂನಿವರ್ಸಿಟಿ ರೆಕಗ್ನಿಷನ್ ಕೊಡಬೇಕೋ ಇಲ್ಲವೋ, ಆ ಸಿಲಬಸ್ ಪ್ರಕಾರ ಪಾಸ್ ಆದವರಿಗೆ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಸ್ಕೂಲಿನಲ್ಲಿ ಅಡ್ಮಿಷನ್ ಸಿಕ್ಕುತ್ತದೋ ಇಲ್ಲವೋ ಎನ್ನುವುದನ್ನು ವಿಮರ್ಶೆಮಾಡಲಿಕ್ಕೆ ಹತ್ತಿದ್ದೇವೆ. ಅದರಿಂದ ಟೆಕ್ನಿಕಲ್ ಬೈಯಾಸ್ ವಿಶೇಷ ಆಗುವುದಿದೆ. ಪಾಲಿಟೆಕ್ನಿಕಲ್ ಹೈಸ್ಕೂಲುಗಳನ್ನು ತೆರೆಯಬೇಕೆಂಬ ಒಂದು ಪ್ರೋಗ್ರಾಂ ಇದೆ. ಆ ಪ್ರಕಾರ ಕೆಲವು ಟೆಕ್ನಿಕಲ್ ಹೈಸ್ಕೂಲುಗಳನ್ನು ಸಾಧಾರಣವಾಗಿ ಕೆಲವು ಡಿಸ್ಟ್ರಿಕ್ಟುಗಳಿಗೆ ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ ಎಂದು ಇಷ್ಟು ಹೇಳಬಹುದು.

ಜಾಯಿಂಟ್ ಡೈರೆಕ್ಟರನ್ನೋ ಅಥವಾ ಅಡಿಷನಲ್ ಡೈರೆಕ್ಟರನ್ನೋ ನೇಮಿಸಬೇಕೆಂದು ಕೆಲವು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಈಗಾಗಲೇ ನಮ್ಮ ದುರಿಗೆ ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರ್ ಕಮಿಟಿ ರಿಪೋರ್ಟ್ ಇದೆ. ಬರೀ ಸೆಂಟ್ರಲ್ ಕಾಲೇಜ್ ಮತ್ತು ಮಹಾರಾಜ ಕಾಲೇಜನ್ನು ಮೈಸೂರು ಯೂನಿವರ್ಸಿಟಿ ಆಡಳಿತಕ್ಕೆ ಒಳಪಡಿಸಿ, ಮೈಸೂರು ಯೂನಿವರ್ಸಿಟಿ ಯಲ್ಲಿರುವ ಮಿಕ್ಕ ಎಲ್ಲಾ ಕಾಲೇಜುಗಳನ್ನೂ ಸರ್ಕಾರ ದವರು ತಮ್ಮ ವಶಕ್ಕೆ ತೆಗೆದುಕೊಂಡು ನಡೆಸಬೇ ಕೆಂದಿದೆ. ಈ ಕಾಲೇಜುಗಳನ್ನು ಸರ್ಕಾರ ನಡೆಸುವ ಕಾಲಕ್ಕೆ, ಕೊಲೆಜಿಯೇಟ್ ಎಜುಕೇಷನ್ನಿಗೆ ಒಬ್ಬ ಬೇರೆ ಡೈರೆಕ್ಟರನ್ನು ನೇಮಿಸಬೇಕೆಂದು ಸಲಹೆ ಬಂದಿದೆ. ಈ ಸಲಹೆಯನ್ನು ನಮ್ಮ ಎರಡು ಯೂನಿವರ್ಸಿಟಿಗಳಿಗೂ ಕಳುಹಿಸಿದ್ದೇವೆ. ಅವರುಗಳಿಂದ ಏನು ಸಲಹೆಗಳು ಬರುತ್ತವೆಂದು ನೋಡಿ ಸರ್ಕಾರ ತನ್ನ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಅಂತಿಮ ನಿರ್ಧಾರ ತೆಗೆದುಕೊಂಡನಂತರ, ಕೊಲೆಜಿಯೆಟ್ ಎಜುಕೇಷನ್ನಿಗೆ ಒಬ್ಬ ಡೈರೆಕ್ಟರು, ಬೇಸಿಕ್ ಎಜುಕೇಷನ್ನಿಗೆ ಒಬ್ಬ ಡೆಪ್ಯುಟಿ ಡೈರೆಕ್ಟರು, ಸೋಷಿಯಲ್ ಎಜುಕೇಷನ್ನಿಗೆ ಒಬ್ಬ ಡೆಪ್ಯುಟಿ ಡೈರೆಕ್ಟರು, ಸೆಕೆಂಡರಿ ಎಜುಕೇಷನ್ನಿಗೆ ಒಬ್ಬ ಡೆಪ್ಯುಟಿ ಡೈರೆಕ್ಟರು, ಮತ್ತು ಪ್ರೈಮರಿ ಎಜುಕೇಷನ್ನಿಗೆ ಒಬ್ಬ ಡೆಪ್ಯುಟಿ ಡೈರೆಕ್ಟರು ಬೇಕೆಂಬ ಕೆಲವು ಸಲಹೆಗಳು ಬಂದಿವೆ. ಆದ್ದರಿಂದ ಜಾಯಿಂಟ್ ಡೈರೆಕ್ಟರ್ ನೇಮಿಸಬೇಕೆ, ಅಥವ ಕೊಲೆಜಿಯೇಟ್ ಎಜುಕೇಷನ್ನಿಗೇ ಬೇರೆ ಡೈರೆಕ್ಟರನ್ನು ನೇಮಿಸಬೇಕೆ ಎಂಬ ಎಲ್ಲಾ ವಿಚಾರವನ್ನೂ ಕ್ಯಾಬಿನೆಟ್ಟಿನಲ್ಲಿ ಚರ್ಚೆಮಾಡಿ, ನಿರ್ಣಯ ತೆಗೆದುಕೊಳ್ಳುತ್ತೇವೆ. ಈಗ ಬೇರೆ ಡೈರೆಕ್ಟರನ್ನು ಮಾಡಬೇಕೆನ್ನುವ ಸಲಹೆಯ ಮೇಲೆ ಇನ್ನೇನನ್ನು ಹೇಳಲೂ ಸಾಧ್ಯವಿಲ್ಲ. ಆದ್ದರಿಂದ ಈ ಪಾಯಿಂಟನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ.

ಟ್ರೇನ್‌ಡ್ ಮತ್ತು ಅನ್‌ಟ್ರೇನ್‌ಡ್ ಟೀಚರುಗಳ ಪೇ ಸ್ಕೇಲಿನಲ್ಲಿ ವ್ಯತ್ಯಾಸವಿರಬೇಕೆಂದು ಸಲಹೆ ಮಾಡಿದ್ದಾರೆ. ಮಿಡಲ್‌ಸ್ಕೂಲು ಪರೀಕ್ಷೆ ಮಾಡಿದವರಿಗೆ ಯಾವ ಪ್ರಕಾರ 40 ರಿಂದ 80, 40 ರಿಂದ 100 ರ ಹಾಗೆ ಎರಡು ಬೇರೆ ಗ್ರೇಡುಗಳಿವೆಯೋ, ಅದೇ ಪ್ರಕಾರ S.S.L.C. trained and untrained ಟೀಚರುಗಳ ಸ್ಕೇಲಿನಲ್ಲಿ ವ್ಯತ್ಯಾಸವಿರಬೇಕೆಂದು ಹೇಳಿದ್ದಾರೆ. ಈಗ ಇವರಿಗೆ 50ರಿಂದ 100ರ ಒಂದೇ ಗ್ರೇಡ್ ಇದೆ. ಟ್ರೇನ್‌ಡ್ ಟೀಚರುಗಳಿಗೆ ಹೊಸ ಗ್ರೇಡ್ ಮಾಡಬೇಕೆಂಬ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ. ಏಕೆಂದರೆ trained and untrained ಟೀಚರುಗಳ ಸ್ಕೇಲಿನಲ್ಲಿ ವ್ಯತ್ಯಾಸವಿರಬೇಕೆಂಬ ಮಾತು ಒಪ್ಪತಕ್ಕ ಮಾತು. ಈಗಾಗಲೇ ಇದಕ್ಕೆ ಸಂಬಂಧಪಟ್ಟ ಫಿಗರುಗಳನ್ನು ವರ್ಕ್-ಔಟ್ ಮಾಡಲಿಕ್ಕೆ ಹತ್ತಿದ್ದೇವೆ. ಬೇರೆ ಗ್ರೇಡ್ ಮಾಡುವುದರಿಂದ ಸರ್ಕಾರಕ್ಕೆ ಎಷ್ಟು ಹೆಚ್ಚು ಖರ್ಚಾಗುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ.

ಇನ್ನೊಂದು ವಿಷಯ ಏನು ಪ್ರಸ್ತಾಪ ಮಾಡಿದ್ದಾರೆಂದರೆ, ಲೋಕಲ್ ಬಾಡೀಸ್ ಮತ್ತು ಏಡೆಡ್-ಬಾಡಿಗಳಲ್ಲಿ ಎಷ್ಟು ಗ್ರಾಜುಯೇಟ್ ಹೆಡ್‌ಮಾಸ್ಟರು ಗಳಿದ್ದಾರೋ ಅವರ ಮತ್ತು ಗವರ್ನ್‌ಮೆಂಟು ಹೈಸ್ಕೂಲು ಹೆಡ್‌ಮಾಸ್ಟರುಗಳ ಸ್ಯಾಲರಿ ಸ್ಕೇಲಿನಲ್ಲಿ ವ್ಯತ್ಯಾಸವಿದೆ ಎನ್ನುವುದು. ಏಡೆಡ್ ಸ್ಕೂಲಿನವರಿಗೆ 200—300 ಇದೆ; ಗವರ್ನ್‌ಮೆಂಟ್ ಸ್ಕೂಲಿನವರಿಗೆ 200—400 ಇದೆ ಎಂದು ಹೇಳಿದ್ದಾರೆ. ಫೈನಾನ್ಸ್ ಮಿನಿಸ್ಟರ ಸ್ಪೀಚಿನಲ್ಲಿಯೂ ಲೋಕಲ್ ಬಾಡಿ ಹೆಡ್ ಮಾಸ್ಟರುಗಳ ಸ್ಕೇಲು 200—300 ಇದೆ ಎಂದು ಅವರೇ ಹೇಳಿದ್ದಾರೆ. ಈ ಪ್ರಕಾರ ವ್ಯತ್ಯಾಸವಿರುವುದು ಚೆನ್ನಾಗಿ ಕಾಣುವುದಿಲ್ಲ. ಒಂದೇ ನಮೂನೆ ಕೆಲಸಮಾಡುತ್ತಾ ಇರತಕ್ಕಂಥ ಹೆಡ್ ಮಾಸ್ಟರುಗಳಿಗೆಲ್ಲಾ ಒಂದೇ ಸ್ಕೇಲ್ ಮಾಡುವುದು ಮಾನ್ಯ ಮಾಡುವ ಮಾತು. ಅದನ್ನು ಅವಶ್ಯವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳಬಹುದು.

ಮತ್ತೊಂದು ಟೀಚರುಗಳ ಟ್ರಾನ್ಸ್‌ಫರ್ ವಿಷಯ. ಟೀಚರುಗಳು ಒಂದೇ ಜಾಗದಲ್ಲಿ 10—20 ವರ್ಷಗಳು ಇದ್ದರೆ, ಆ ಜಾಗದ ಪಾಲಿಟಿಕ್ಸಿನಲ್ಲಿ ಭಾಗ ತೆಗೆದು ಕೊಳ್ಳುತ್ತಾರೆ, ತಮ್ಮ ಕೆಲಸದಲ್ಲಿ ಆಸಕ್ತಿ ವಹಿಸುವು ದಿಲ್ಲ ಎನ್ನುವ ಹಾಗೆ ಶ್ರೀ ಕಂಬ್ಳಿಯವರು ಮತ್ತಿತರ ಕೆಲವು ಸದಸ್ಯರು ಮಾತನಾಡಿದ್ದಾರೆ. ಪ್ರೈಮರಿ ಸ್ಕೂಲು ಟೀಚರಿಗೆ 50 ರೂಪಾಯಿ ಪಗಾರ; ಒಂದು ತಾಲ್ಲೂಕು ಬಿಡಿಸಿ ಇನ್ನೊಂದು ತಾಲ್ಲೂಕಿಗೆ ಹಾಕಿ ದರೂ ಸಣ್ಣ ನೌಕರರಿಗೆ ಕಷ್ಟವಾಗುತ್ತದೆ. ಡಿಸ್ಟ್ರಿಕ್ಟಿ ನಿಂದ, ಡಿಸ್ಟ್ರಿಕ್ಟಿಗೆ ಅಥವಾ ಹೈದರಾಬಾದ್ ಕರ್ಣಾಟಕ ಪ್ರದೇಶದವರನ್ನು ಮೈಸೂರಿಗೋ, ಮೈಸೂರು ಪ್ರದೇಶದವರನ್ನು ಮದ್ರಾಸ್-ಕರ್ಣಾಟಕ ಏರಿ ಯಾಕ್ಕೋ, ಈ ಪ್ರಕಾರ ಟ್ರಾನ್ಸ್‌ಫರ್ ಮಾಡಿದರೆ, ಅವರಿಗೆ ತುಂಬ ಕಷ್ಟವಾಗುತ್ತದೆ. ಅದ್ದರಿಂದ ಒಂದೇ ಶಾಲೆಯಲ್ಲಿ ವಿಶೇಷವಾಗಿ ಇರದಹಾಗೆ ಯಾವ ಕಾರ್ಯ ಕ್ರಮವನ್ನು ತೆಗೆದುಕೊಳ್ಳಬೇಕು, ಎಷ್ಟರಮಟ್ಟಿಗೆ ಅವರನ್ನು ಟ್ರಾನ್ಸ್‌ಫರ್ ಮಾಡಬೇಕೆನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ. ಆದರೆ ಒಂದೇ ಕಡೆ ಅವರು ಹತ್ತು ವರ್ಷವಿರುವುದು ನನಗೆ ಮಾನ್ಯ ವಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ನೀವು ಹೇಳುವುದು ಸಂತೋಷ. ಅದೇ ತಾಲ್ಲೂಕಿನಲ್ಲಿ ಬೇರೆ ಕಡೆ ಹಾಕಬೇಡಿ ಎಂದು ಹೇಳುವುದಿಲ್ಲ. ಅದೇ ಊರಿ ನಲ್ಲಿ ಹಾಕಬಾರದು ಎಂದು ಹೇಳುವುದು. ಬೇಕಿದ್ದರೆ, ಪಕ್ಕದ ತಾಲ್ಲೂಕಿಗೆ ಹಾಕಿ, ಗುಲ್ಬರ್ಗಕ್ಕೆ ಹಾಕಿ ಎಂದು ಹೇಳುವುದಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಆ ಪ್ರಕಾರವಾಗಿ ನಾವು ಅವಶ್ಯವಾದ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೇವೆ. 68 ಸಾವಿರ ಟೀಚರುಗಳ ವಿಷಯದಲ್ಲಿ ಮೆಂಬರುಗಳು, ಯಾರು ಯಾರು ಎಷ್ಟೆಷ್ಟು ವರ್ಷ ವಿದ್ದಾರೆ ಎಂಬ ಇನ್‌ಫರ್‌ಮೇಷನ್ ನಮ್ಮ ಗಮನಕ್ಕೆ ತಂದುಕೊಟ್ಟರೆ, ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲೆಲ್ಲಿ ಎಷ್ಟೆಷ್ಟು ಜನವಿದ್ದಾರೆನ್ನುವ ಇನ್‌ಫರ್‌ಮೇಷನ್ ಬರಬೇಕಾದರೆ, ಆರು ತಿಂಗಳು ಬೇಕಾಗುತ್ತದೆ. ಈ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇಷ್ಟು ಭರವಸೆ ಕೊಡುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).— ಲೋಕಲ್ ಬೋರ್ಡು ಸ್ಕೂಲುಗಳಲ್ಲಿ, ಫಸ್ಟ್ ಅಂಡ್ ಸೆಕೆಂಡ್ ಗ್ರೇಡು ಟೀಚರುಗಳಿಗೆ ವ್ಯತ್ಯಾಸವಿದೆ. ವ್ಯತ್ಯಾಸವಿರಬಾರದೆಂದು ಗವರ್ನ್‌ಮೆಂಟ್ ಆರ್ಡರ್ ಇದೆ. ಲೋಕಲ್ ಬೋರ್ಡ್ ಸ್ಕೂಲುಗಳಲ್ಲಿ ಇನ್ನೂ ಹಾಗೆಯೇ ನಡೆಯುತ್ತಾ ಇದೆ. ನಡೆಯಬಾರದು. ಕಾರ್ಯಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಅಣ್ಣಾರಾವ್ ಗಣಮುಖಿ.—ಅವಶ್ಯ ಪರಿಶೀಲನೆ ಮಾಡಿಸುತ್ತೇನೆ. ನರ್ಸರಿ ಸ್ಕೂಲುಗಳ ವಿಷಯ ಇನ್ನೂ ಕೆಲವು ಸದಸ್ಯರು ಪ್ರಸ್ತಾಪಮಾಡಿದ್ದಾರೆ. ನರ್ಸರಿ ಸ್ಕೂಲುಗಳ ಹೊಣೆ ಸರ್ಕಾರದ ಮೇಲೆ ಇಲ್ಲ. ಆರು ವರ್ಷಗಳ ಮೇಲೆ ಸರ್ಕಾರದ ಹೊಣೆ ಬರುತ್ತದೆ. ಅದಕ್ಕಿಂತ ಮೊದಲು ತಂದೆತಾಯಿಗಳ ಹೊಣೆ. ನರ್ಸರಿ ಸ್ಕೂಲುಗಳನ್ನು ತೆಗೆದರೆ, ಏಡ್ ಕೊಡುತ್ತೇವೆ. ಸರ್ಕಾರದ ಕಡೆಯಿಂದ ನರ್ಸರಿ ಸ್ಕೂಲುಗಳನ್ನು ತೆಗೆ ಯುವುದು ಸಾಧ್ಯವಿಲ್ಲ.

ಶ್ರೀ ವೈ. ವೀರಪ್ಪ.—ಸರ್ಕಾರದವರು ಇಂಡ್ಯೂಸ್ ಮಾಡಿ ಹೈಸ್ಕೂಲುಗಳನ್ನು ತೆಗೆಯಬೇಕಾದರೆ ಎಲ್ಲಾ ಕಡೆ ಇಂಡ್ಯೂಸ್ ಮಾಡುವುದಕ್ಕೆ ಹತ್ತಿದ್ದಾರೆ. ಎರಡು ಪರ್ಸೆಂಟ್ ಸಕ್‌ಸೆಸ್ ಆಗಿದೆ. ನೂರು ಪರ್ಸೆಂಟ್ ಸಕ್‌ಸೆಸ್ ಆಗುವುದು ಶಕ್ಯವೇ? ಕೆಲವು ಕಡೆಗಳಲ್ಲಿ ನರ್ಸರಿ ಟ್ರೇನಿಂಗ್ ಸೆಂಟರುಗಳನ್ನು ಮಾಡಿದರೆ ಒಳ್ಳೆಯದು.

Sri J. B. MALLARADHYA. What is the all-India policy?

ಶ್ರೀ ಅಣ್ಣಾರಾವ್ ಗಣಮುಖಿ.—The all-India policy is not to start on Government basis. ಅದಕ್ಕೆ ಹಣವೇ ಇಲ್ಲ. ಕಂಪಲ್ಸರಿ ಪ್ರೈಮರಿ ಎಜುಕೇಷನ್ನಿಗೆ ಹಣವಿಲ್ಲ. ಆರರಿಂದ ಹನ್ನೊಂದು ವರ್ಷದವರೆಗೆ ನಮ್ಮ ಹೊಣೆ ಬಂದಿದೆ. ಅದ ರಿಂದ ಮುಂದೆ ಇಲ್ಲ. ಅದು ಫೈನಾನ್ಸ್ ಪ್ರಶ್ನೆ ಇದೆ. ಯಾವುದಾದರೂ ಒಂದು ಹೆಜ್ಜೆ ಮುಂದಿಡಬೇಕಾದರೆ, ಫೈನಾನ್ಸ್ ಪ್ರಶ್ನೆ ಬರುತ್ತದೆ. ಯಾವುದಕ್ಕೆ ಹಣದ ಕೊರತೆ ಮಾಡಿ, ಯಾವುದಕ್ಕೆ ಹೆಚ್ಚಿಗೆ ಹಣ ಕೊಡಬೇ ಕೆಂದು ನೋಡಿ, ಬಜೆಟ್ಟಿನಲ್ಲಿ ಆ ರೀತಿ ಡಿಸ್ಟ್ರಿಬ್ಯೂಟ್ ಮಾಡಿ, ಹಣ ಒದಗಿಸಿದೆ. ಪ್ಲಾನ್ ಸೀಲಿಂಗ್ ಪ್ರಕಾರ ಅಡ್‌ಜಸ್ಟ್‌ಮೆಂಟ್ ಮಾಡಬೇಕು. ಪ್ಲಾನ್ ಸೀಲಿಂಗ್ ಪ್ರಕಾರ ಒದಗಿಸಬೇಕಾಗಿದೆ. ನರ್ಸರಿ ಸ್ಕೂಲಿಗೆ ವಿಶೇಷವಾದ ಮಹತ್ವವಿದೆ. ಪ್ರೈವೇಟ್ ಜನರು ಏರ್ಪಾಡುಮಾಡಿ, ಹೆಣ್ಣುಮಕ್ಕಳಿಗೆ ಟ್ರೇನಿಂಗ್ ಕೊಟ್ಟು, ನರ್ಸರಿ ಸ್ಕೂಲುಗಳನ್ನು ತೆಗೆದರೆ, grant-in-aid ಸಹಾಯ ಏನು ಬೇಕೊ, ಅದನ್ನು ಮಾಡಬಹುದು. ಟ್ರೇನಿಂಗ್ ಸೌಲಭ್ಯ ಕೊಟ್ಟಿದ್ದೇವೆ. ಎರಡು ಕಡೆ ಟ್ರೇನಿಂಗ್ ಕೊಡಲಿಕ್ಕೆ ಹತ್ತಿದ್ದೇವೆ. ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಟ್ರೇನಿಂಗ್ ಸೌಲಭ್ಯ ಕೊಟ್ಟಿ ದ್ದೇವೆ. ಇನ್ನೂ ಹೆಚ್ಚಿನ ಟ್ರೇನಿಂಗಿನ ಅವಶ್ಯಕತೆ ಬಂದರೆ, ಇನ್ನೂ ಜಾಸ್ತಿ ಸೆಂಟರುಗಳನ್ನು ತೆರೆಯು ತ್ತೇವೆ.

ಎರಡು ಟೀಚರ್ಸ್ ಟ್ರೇನಿಂಗ್ ಕಾಲೇಜುಗಳನ್ನು ತೆರೆಯುತ್ತೇವೆ. ಅದರಲ್ಲಿ ಒಂದು ಉರ್ದು ಟ್ರೇನಿಂಗ್ ಕಾಲೇಜು. ಒಂದು ಟ್ರೇನಿಂಗ್ ಕಾಲೇಜನ್ನು ಬಳ್ಳಾರಿಯಲ್ಲಿ ತೆರೆಯುತ್ತೇವೆ. ಹುಬ್ಬಳ್ಳಿ ಅಥವಾ ಧಾರವಾಡದಲ್ಲಿ ಸೆಕೆಂಡರಿ ಟೀಚರ್ಸ್ ಟ್ರೇನಿಂಗ್ ಕಾಲೇಜನ್ನು ತೆರೆಯಲಿಕ್ಕೆ ಹತ್ತಿದ್ದೇವೆ. ಬೆಳಗಾವಿ ನಲ್ಲಿ ಹೆಚ್ಚು ಮಂದಿ ಟೀಚರುಗಳು ಬಿ.ಇ.ಡಿ. ಮಾಡಿ ಕೊಳ್ಳುವುದಕ್ಕೆ ಏರ್ಪಾಡುಮಾಡಿದೆ. 75 ಪರ್ಸೆಂಟ್ ಸೀಟುಗಳು ಟೀಚರುಗಳಿಗೆ, 25 ಪರ್ಸೆಂಟು ಸ್ಟೈಪೆಂಡಿ ನವರಿಗೆ ಕೊಡುತ್ತದೆ. ಈ ಪ್ರಕಾರ, ಇನ್ನು ಆರು-ಎಂಟು ವರ್ಷಗಳಲ್ಲಿ ಸರ್ವೀಸಿನಲ್ಲಿರತಕ್ಕಂಥ ಟೀಚರು ಗಳಿಗೆಲ್ಲಾ ಟ್ರೇನಿಂಗ್ ಕೊಡಬೇಕೆಂದು ಪ್ರೋಗ್ರಾಂ ಹಾಕಲಿಕ್ಕೆ ಹತ್ತಿದ್ದೇವೆ.

ಸಾಧಾರಣವಾಗಿ ಎಲ್ಲಾ ಪಾಯಿಂಟುಗಳನ್ನೂ ಕವರ್ ಮಾಡಿದ್ದೇನೆಂದು ಹೇಳಬಹುದು.

ಉರ್ದುವಿನಲ್ಲಿ ಅಡಲ್ಟ್ ಎಜುಕೇಷನ್ ಏರ್ಪಾಡು ಮಾಡಬೇಕೆಂದು ಒಂದು ಸೂಚನೆ ಬಂದಿದೆ. ಈ ಸಲಹೆ ಯನ್ನು ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿಗೆ ತಿಳಿಸಿ, ಅದರ ಮೇಲೆ ಏನು ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕೆನ್ನುವುದನ್ನು ಪರಿಶೀಲನೆ ಮಾಡು ತ್ತೇನೆ.

Sri Y. VEERAPPA.—What about promotions of Assistant Masters, and clerks borne in the Municipal High Schools, making Headmasters drawing officers, extension of pension scheme, confirmation of teachers who have put in two years or more service, extension of free medical aid and also about pay structure?

ಶ್ರೀ ಅಣ್ಣಾರಾವ್ ಗಣಮುಖಿ.—Pay structure ನಲ್ಲಿ ಆಗಲೇ uniformity ಬಂದು ಬಿಟ್ಟಿದೆ. Private Aided ಸ್ಕೂಲುಗಳಿಗೆ 300-400 ರ ಗ್ರೇಡ್ ಕೊಟ್ಟರೆ, financial commitment ಎಷ್ಟಾಗುತ್ತದೆ ಎನ್ನುವ ಬಗ್ಗೆ figures work out ಮಾಡಿ, ಪರಿಶೀಲನೆ ಮಾಡಲು ಹತ್ತಿದ್ದೇವೆ. ಇದಕ್ಕೆ Cabinet approval ಆಗಬೇಕು.

11 A.M.

Sri Y. VEERAPPA.—Why this disparity between the scales of pay of Head Masters of Municipal High Schools and those of Head Masters of Government High Schools? ಎರಡುವರ್ಷಗಳಿಗಿಂತ ಹೆಚ್ಚಾಗಿ ಸ್ಥಳೀಯಸಂಸ್ಥೆಗಳ ಸ್ಕೂಲುಗಳಲ್ಲಿರತಕ್ಕ ಉಪಾಧ್ಯಾಯರನ್ನು ಕನ್ಫರ್ಮ್ ಮಾಡಿ ಮದರಾಸ್ ಸರ್ಕಾರದವರು ಫ್ರೀ ಮೆಡಿಕಲ್ ಏಡನ್ನು ಕೊಟ್ಟಿರುವಂತೆ ಇಲ್ಲಿಯೂ ಅವರಿಗೆ ತಕ್ಕ ಸೌಕರ್ಯಗಳನ್ನು ಕೊಡಬೇಕು. ಅಲ್ಲಿನ ಹೆಡ್‌ಮಾಸ್ಟರುಗಳನ್ನು ಡ್ರಾಯಿಂಗ್ ಆಫೀಸರುಗಳಾಗಿ ಮಾಡಿ. We are experiencing dearth of trained teachers and when teachers are there, is it not the duty of the Government to see that they are confirmed and continued?

ಶ್ರೀ ಅಣ್ಣಾರಾವ್ ಗಣಮುಖಿ.—ಟ್ರೈನಿಂಗ್ ಕೋರ್ಸ್ ಇಲ್ಲದೆಇರುವವರು 180 ರೂಪಾಯಿಗಳವರೆಗೂ ಹೋಗಬಹುದು. ಟ್ರೈನಿಂಗ್ ಆದವರು 200 ರೂಪಾಯಿಗಳವರೆಗೂ ಹೋಗಬಹುದು. ಅದರಿಂದಲೇ ಡಿಸ್‌ಪ್ಯಾರಿಟಿ ಆಗುತ್ತಿದೆ. ಅದಕ್ಕೆ ನಾವು ನೀವು ಏನುಮಾಡೋಣ? ಈಗಾಗಲೇ ಲೋಕಲ್ ಬಾಡಿ ಪಾಠಶಾಲೆಯಲ್ಲಿರುವ ಉಪಾಧ್ಯಾಯರುಗಳನ್ನು ಮತ್ತು ಡಿಸ್ಟ್ರಿಕ್ಟ್‌ಬೋರ್ಡ್‌ಸ್ಕೂಲುಗಳ ಉಪಾಧ್ಯಾಯರುಗಳನ್ನು ಇರೆಗ್ಯುಲರ್ ಆಗಿ ನೇಮಕ ಮಾಡಿದ್ದಾರೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಏನು ಶಿಫಾರ್ಸು ಮಾಡುತ್ತಾರೋ ಅದನ್ನು ಬಿಟ್ಟು ತಮಗೆ ತಾವೇ ನೇಮಕಮಾಡುತ್ತಾರೆಂಬ ಒಂದು ಕೂಗು ಮೂರು ನಾಲ್ಕು ವರ್ಷಗಳಿಂದಲೂ ಇದೆ. ಎಷ್ಟೋ ಉಪಾಧ್ಯಾಯರನ್ನು ನಾಲ್ಕೈದು ವರ್ಷಗಳಿಂದಲೂ ಕನ್ಫರ್ಮ್ ಮಾಡಿಲ್ಲ. ಪಿ. ಎಸ್. ಸಿ. ಯವರಿಗೆ ರೆಫರ್ ಮಾಡಿದರೆ ಅವರು ಎ. ಬಿ. ಸಿ. ಕ್ಲಾಸಿಫೈಮಾಡುತ್ತಾರೆ. ಆದ್ದರಿಂದ ಇಲ್ಲಿ ಅವರ ಕನ್ಫರ್ಮೇಷನ್ ಪ್ರಶ್ನೆ ಬರುವುದಿಲ್ಲ. ಪಿ. ಎಸ್. ಸಿ. ಸ್ಟ್ಯಾಚುಟರಿ ಬಡಿಯಾಗಿ ಕುಳಿತಿರುವಾಗ ನಾವೇನು ಮಾಡೋಣ? ಕನ್ಫರ್ಮ್ ಮಾಡೋಣ ಎಂದರೆ ಅದು ಪಿ. ಎಸ್. ಸಿ. ಗೆ ಬರುವುದಿಲ್ಲವೇ ಎಂಬುದನ್ನು ತಾವೇ ಕೇಳುತ್ತೀರಿ. Is it not within the purview of the Public Service Commission? There is a statutory body and it has got the power. It is not left to us. Left to ourselves, we could have done something in this matter. We have recommended already. If it does not agree we cannot do anything.

ಶ್ರೀ ಜಿ. ವೆಂಕಟೇಗೌಡ.—ಒಂದುಕಡೆ 30 ಪಾಠಶಾಲೆಗಳಿಗೆ ಒಬ್ಬ ಇನ್ಸ್‌ಪೆಕ್ಟರ್. ಇನ್ನೊಂದು ಕಡೆ 100 ಪಾಠಶಾಲೆಗಳಿಗೆ ಒಬ್ಬ ಇನ್ಸ್‌ಪೆಕ್ಟರನ್ನು ಇಟ್ಟಿದ್ದೀರಿ. ಈ ರೀತಿ ವ್ಯತ್ಯಾಸ ಇರುವುದು ಅನ್ಯಾಯವಲ್ಲವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಮುಂದ ಅವೆಲ್ಲಾ ರ್‍ಯಾಷನಲೈಜ್ ಆಗಬೇಕಾಗಿದೆ. ಈಗಾಗಲೇ ಒಳ್ಳೆಯ ಸಮಯವಾಗಿದೆ. ಕೆಲವು ಮಾನ್ಯ ಸದಸ್ಯ ಸಲಹೆಗಳನ್ನು ಜಾರಿಮಾಡಲಿಕ್ಕಾಗುವುದಿಲ್ಲ. ಒಟ್ಟಿ ನಲ್ಲಿ ಸದಸ್ಯರು ಏನೇನು ಸಲಹೆಗಳನ್ನು ಸರ್ಕಾರಕ್ಕೆ ತಿಳಿಸಿದ್ದಾರೋ, ಅವನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಅವೆಲ್ಲವನ್ನೂ ಸರಿಮಾಡುವುದಕ್ಕೆ ಯಾವಯಾವ ಪ್ರಯತ್ನಗಳನ್ನು ಮಾಡಬೇಕೋ ಅವನ್ನು ಮಾಡುತ್ತೇ ವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The question is:

"That a sum not exceeding Rs. 11,32,90,700 be granted to the Government to defray the charges which will come in course of payment during the year ending 31st day of March 1960 in respect of 'Education'."

The motion was adopted.

Demand No. 21—Medical.

38. *Medical.*

and

Demand No. 22—Public Health.

39. *Public Health.*

Sri K. K. HEGDE (Minister for Health).—Sir, on the recommendation of the Governor, I beg to move:

"That a sum not exceeding Rs. 2,92,53,000 be granted to the Government to defray the charges which will come in course of payment during the year ending 31st day of March 1960 in respect of 'Medical'.

"That a sum not exceeding Rs. 2,35,87,000 be granted to the Government to defray the charges which will come in course of payment during the year ending 31st day of March 1960 in respect of 'Public Health'."

Mr. SPEAKER.—Motion moved:

"That a sum not exceeding Rs. 2,92,53,000 be granted to the Government to defray the charges which will come in course of payment daring the year ending 31st day of March 1960 in respect of 'Medical'.

"That a sum not exceeding Rs. 2,35,87,000 be granted to the Government to defray the charges

which will come in course of payment during the year ending 31st day of March 1960 in respect of 'Public Health'."

Sri C. M. ARUMUGHAM (Kolar Gold Fields.—Sir, have you got any list to follow as to who should speak first on this demand?

Mr. SPEAKER.—Somebody on behalf of the Opposition.

Sri C. M. ARUMUGHAM.—The Opposition includes whom ?

Mr. SPEAKER.—There is only one Opposition. You are part and parcel of the Opposition. Somebody on behalf of the Opposition Party will be given the opportunity to speak first. Then I will give chance to others.

Sri C. M. ARUMUGHAM.—You can classify the P.S.P. as an Opposition Group but not as an Opposition Party. You treat them as Opposition Party and give them preference. They have also an agreement with the Leader of the House. We are also 38 members and you must tell us whether we should sit here or sit outside omewhere else.

Mr. SPEAKER.—I have already said that the Independents also form part of the Opposition. The only recognised Opposition Party is the P.S.P. and on every demand they get the first opportunity to open the debate.

Sri C. M. ARUMUGHAM.—I am taking serious objection to it. We, Independents, are 38 in number and so we must be given the first chance to speak. They are only 18 members.

Mr. SPEAKER.—I can only tell you that Independents are independents. They are not a party. I have got a whole statement before me regarding the members who have taken part in the debate on demands for grants. I have done justice not only to the P.S.P. but also to the Independents. I cannot give the first chance to the Independents. That is not done anywhere. The P.S.P. is only the party in the Opposition which is recognised as a party that gets the first chance to speak. It is only that party which has a right to open the debate.

Sri C. M. ARUMUGHAM.—So far as I am concerned, I may say that I am not an Independent. I represent a party and my party is recognised. There are also other members who are not Independents. For example, Sri Narasimhan is not an Independent. His party rules a State in this country. You cannot classify us as Independents and neglect us here. I want to submit with great respect that you cannot classify me and my 37 friends as Independents. We are not speaking as Independents but we are speaking on party basis here.

Mr. SPEAKER.—I am not concerned with what exists outside. I know that Sri C. M. Arumugham belongs to the Republican Party outside but it is not a party recognised in the House. Sri M. C. Narasimhan, of course, belongs to a powerful party outside the House, but even then he is only one individual here and he is not in a party recognised in this House.

Sri B. D. JATTI.—He is only one and he does not belong to a powerful party here.

Mr. SPEAKER.—I said, outside the House. No other party except the P.S.P. has been recognised as a party in this House. Of course Sri M. C. Narasimhan claims to belong to a powerful party but that party is outside the House. Hon'ble Members cannot take one sentence; they must take the whole context and read. The Hon'ble Member Sri M. C. Narasimhan does not belong to a party recognised in the House.

Sri G. VENKATAI GOWDA.—At least in respect of this Demand, please allow some one of us to open the debate.

Mr. SPEAKER.—I appreciate your views but generally that is not done. It is always the recognised Opposition party that will open the debate in the House. I have always kept in mind the demands of other members. I have given chances to other members belonging to Opposition. I will read the number of persons belonging to different parties and the number of individuals who have already taken part in the debate.

Congress	...	32
P.S.P.	...	20
Independents	...	18

Sri C. M. ARUMUGHAM.—I want to submit one thing. The Speaker might be knowing that in Madras and Andhra and also at Delhi, which places I have visited, the Leader of the Opposition will initiate the debate and not any member in the Opposition group. Another thing is, in the Parliament there are three or four groups and each group will be given chances to open the debate. How is it here you do not allow such a thing ?

Mr. SPEAKER.—I have always sympathy for the Opposition and that sympathy should not be misunderstood this way. I am not aware of any such instance where other members open the debate on behalf of the Opposition. I understand that the Leader of the Opposition is going to open the debate. If he gives chance to any member of his party, there can be no objection. I have always kept and will always keep in mind the claims of other members. I have always done justice and I shall try to do justice to all.

Sri C. M. ARUMUGHAM.—Let us know our position. We are about 38 members. Do you want to give preference to a party of 18 members instead of 38 members ?

Mr. SPEAKER.—The Independents are always independents and they do not form any party. That point must be borne in mind. The Independents cannot claim the same right as are claimed by the recognised Opposition party because that would be very difficult.

Sri C. J. MUCKANNAPPA (Gubbi). May we know what is that right ?

Mr. SPEAKER.—The first right is the recognition of the party in the House. That goes a long way in giving the rights to Opposition Party members. Only the P.S P. is the recognised party.

Sri C. J. MUCKANNAPPA.—I think they are also entitled to open the debates. My friend's plea is that we must all be treated alike. Let the recognised Opposition party open the debate. At the same time the Interests of 38 members should not be neglected. You were pleased to say that Independents are independents. Supposing there are only 20 or 25 Congress members and a demand is to be put to vote. If the Independent members are not present, the demand will be defeated. Therefore we are also important members. As independent members we are under the mercy of the Speaker and at every time we stand up and sit down. That is the only right conferred on us.

Mr. SPEAKER.—You are not under my mercy. Of course every member is under the control of the Speaker to whatever party he might belong. But, that should not be understood that one is under the mercy of the Speaker. The supposition is not correct.

*Sri V. SRINIVAS SHETTY (Coondapur).—Sir, it is a painful thing because there has been some confusion with regard to chances to the number of speakers on either side to speak. We, on this side in consultation with the Leader and Whip of the Congress Party agreed that the Opposition should be treated on an equal par and that 50 per cent of the time allowed would be given to the Opposition party. I had a talk with the Chair that time given to the Opposition party should be equally divided between my party and the Independents. I have also made clear that we do not want to take any precedence excepting perhaps the right to my party to open the debate which is a parliamentary practice. I was very anxious to come to an understanding with the Independents and consult them before I gave the list. Even now I request my friend on this side to come to an understanding so that the Chair can also assure the members on this side to speak. We do not claim any preference. The P.S.P. do not want to claim any preference.

Sri C. M. ARUMUGHAM.—We were also used to be treated as Opposition members. When Sri B. K. Puttaramiya was giving the list of members to speak he used to include the names of Independent members also. But, you were pleased to direct that Sri B. K. Puttaramiya should not include Independents.

Mr. SPEAKER.—If all the Independents are of the same kind as Sri C. M. Arumugham, it is all right. Complaints came to me that some Independent members preferred the

exclusion of their names from the list used to be given by Sri B. K. Puttaramiya. They came to me and said that they were not willing to give their names to the Whip of the P.S.P. Party. That is the reason why I suggested that he might confine himself to the members of his own party. That was the suggestion that I made.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಡಿಮ್ಯಾಂಡುಗಳ ಮೇಲೆ ಇವೊತ್ತಿನ ದಿವಸ ಕಾಲಕ್ಕೆ ಸರಿಯಾಗಿ ಚರ್ಚೆ ಪ್ರಾರಂಭವಾಗದೆ ಇದ್ದರೂ, ಇವೊತ್ತಿನ ದಿವಸ ಇವನ್ನು ಮುಗಿಸುವ ಒಂದು ಪ್ರಯತ್ನ ನಡೆಯುತ್ತದೆಯೋ ಇಲ್ಲವೋ ಎನ್ನುವ ಶಂಕೆಯ ಮೇಲೆ ಮಾತನಾಡಲು ನಾನು ಪ್ರಯತ್ನ ಮಾಡುತ್ತಿದ್ದೇನೆ.

ಅಧ್ಯಕ್ಷರು.—ಮುಗಿಸಬೇಕು ಸ್ವಾಮಿ.

Sri M. C. NARASIMHAN (Kolar Gold Fields).—I am sorry to interrupt. May I know if this Demand will be taken up on Monday also?

Mr. SPEAKER.—No, no. We will finish it today.

Sri M. C. NARASIMHAN.—Are we sitting in the afternoon?

Mr. SPEAKER.—No. We are trying to finish it now.

Sri M. C. NARASIMHAN.—By 12-30?

Mr. SPEAKER.—Let us see. I propose to sit up to 1-30 P.M.

Sri G. VENKATAI GOWDA (Palaiyam).—Then it is not possible. There is the reply.

Sri B. D. JATTI (Chief Minister).—The reply will be short.

[SRI ALUR HANUMANTHAPPA in the Chair.]

ಶ್ರೀ ಯು. ಎಂ. ಮಾದಪ್ಪ.—ನಾವು 1956-57ನೆಯ ಇಸವಿಯ ಆಡಳಿತವರದಿಯನ್ನು ನೋಡಿದ್ದೇ ಆದಲ್ಲಿ ನಮಗೆ ಕಾಣುವ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರದೆ ಇದ್ದರೆ ಅದು ಕರ್ತವ್ಯ ಲೋಪವಾಗುತ್ತದೆಂದು ನಾನು ಒಂದೆರಡು ವಿಷಯ ಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶಾಲ ಮೈಸೂರು ಆದನಂತರ ಪ್ರಜಾಸಂಖ್ಯೆ 1,94,01,193 ಮತ್ತು ಅದಕ್ಕನುಗುಣವಾಗಿ ಆಸ್ಪತ್ರೆಗಳಿಗೆ ಹೋಗಿರುವ ರೋಗಿಗಳ ಸಂಖ್ಯೆಯನ್ನು ನಾವು ನೋಡಬೇಕಾದುದು ಬಹಳ ಆವಶ್ಯಕ. ವರದಿಯ ಪ್ರಕಾರ 1,29,14,381 ಜನ ರೋಗಿಗಳು ಹೊಸ ದಾಗಿ ಆಸ್ಪತ್ರೆಗಳಿಗೆ ಹೋಗಿ ಔಷಧಿಗಳನ್ನು ತೆಗೆದು ಕೊಂಡಿದ್ದಾರೆ. ಪ್ರಜಾಸಂಖ್ಯೆಗೂ ಮತ್ತು ರೋಗಿ ಗಳ ಸಂಖ್ಯೆಗೂ ಹೋಲಿಸಿ ನೋಡಿದರೆ ರೋಗಿಗಳ ಸಂಖ್ಯೆ ಪ್ರಜಾಸಂಖ್ಯೆಯ ಸೇಕಡ ಐವತ್ತಕ್ಕೂ ಜಾಸ್ತಿ ಏರಿದೆ ಎಂದು ನಾವು ಭಾವಿಸಿಕೊಳ್ಳಬಹುದು. ನಾನು 1954-55, 1955-56 ಮತ್ತು 1956-57ನೆಯ ವರ್ಷಗಳ ವರದಿಯನ್ನು ನೋಡಿದ್ದೇನೆ. ಇದರಿಂದ ನಮಗೆ ಏನು ಗೊತ್ತಾಗುತ್ತದೆಂದರೆ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆಸ್ಪತ್ರೆ ಗಳಿಗೆ ಹೋಗತಕ್ಕ ರೋಗಿಗಳ ಸಂಖ್ಯೆಯೂ ಸಹ ಜಾಸ್ತಿಯಾಗುತ್ತಿದೆ. ಇದು ಸರ್ಕಾರದ ಹತೋಟಿ ಯಲ್ಲಿರತಕ್ಕ ರೋಗಿಗಳ ಸಂಖ್ಯೆ, ಖಾಸಗಿ ಆಸ್ಪತ್ರೆ ಗಳು, ಪ್ರೈವೇಟ್ ಪ್ರಾಕ್ಟೀಷನರ್ಸ್, ಮತ್ತು ಇತರ ಡಾಕ್ಟರುಗಳ ಹತ್ತಿರ ಹೋಗತಕ್ಕ ರೋಗಿಗಳ ಸಂಖ್ಯೆ ಎಷ್ಟಿರಬಹುದು ಎಂದು ಯೋಚನೆ ಮಾಡಿದರೆ ಬಹಳ ಭಯವಾಗುತ್ತದೆ. ಮೈಸೂರಿನಲ್ಲಿ ಇರುವ ಜನರೆಲ್ಲ ಅನಾರೋಗ್ಯದಿಂದ ತುಂಬಿದ್ದಾರೆಂದರೆ ತಪ್ಪಾಗ ಲಾರದು. ಇದರಿಂದ ನಮ್ಮ ರಾಜ್ಯ Welfare State ಆಗುತ್ತದೆಯೋ Illfare State ಆಗುತ್ತದೆಯೋ ಎಂಬ ಭಯೋತ್ಪಾದನೆ ಯಾಗುತ್ತದೆ. ಇದಕ್ಕೆ ಕಾರಣಗಳೇನು ಎನ್ನುವುದನ್ನು ನಾನು ಈಗ ಒಂದೆರಡು ಮಾತಿನಲ್ಲಿ ಹೇಳಬೇಕಾಗಿದೆ. ಡಾಕ್ಟರು ಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೇ ಔಷಧಿಗಳು ಸಪ್ಲೈ ಆಗುವುದಿಲ್ಲವೇ ಸರಿಯಾದ ಆಹಾರ ಸಿಕ್ಕುವು ದಿಲ್ಲವೇ ಎಂದು ಯೋಚನೆ ಮಾಡಬೇಕಾಗಿ ಬರುತ್ತದೆ. ನಾನಾದರೂ ಈ ಮೂರು ಕಾರಣಗಳೂ ಇವೆ ಎಂದು ತಿಳಿದುಕೊಂಡಿದ್ದೇನೆ. ಇವು ಮೂರೂ ಒಟ್ಟು ಗೂಡಿರುವುದರಿಂದ ಇಷ್ಟೊಂದು ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದನ್ನು ತಡೆಗಟ್ಟತಕ್ಕ ಒಂದು ಯಂತ್ರವನ್ನಿಟ್ಟಿದ್ದೀರಿ. ಅದು ಆರೋಗ್ಯ ಇಲಾಖೆ. ಈ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ, ರೋಗಿಗಳ ಸಂಖ್ಯೆಯನ್ನು ಕಡಮೆ ಮಾಡಲು, ರೋಗವನ್ನು ತಡೆಗಟ್ಟುವ ಪಬ್ಲಿಕ್ ಹೆಲ್ತ್ ಇಲಾಖೆ ಬಹಳ ತೀಕ್ಷ್ಣವಾಗಿ ಕೆಲಸಮಾಡಬೇಕು. ಅಲ್ಲದೆ curative sideನಲ್ಲಿ ವೈದ್ಯಕೀಯ ಇಲಾಖೆ ಸಹ ಚುರುಕಾಗಿ ಕೆಲಸ ಮಾಡಬೇಕು. ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳು ತಿಂಗಳಾನುಗಟ್ಟಲೆ ತಮ್ಮ ಮುಂದೆ ಬರತಕ್ಕ ಸಂಪ್ರದಾಯವನ್ನು ಕಡಮೆಮಾಡ ಬೇಕು. ಆದಷ್ಟು ಜಾಗ್ರತೆ ರೋಗಿಗಳು ಆಸ್ಪತ್ರೆ ಯಿಂದ ಹೊರಗೆ ಹೋಗುವಂತೆ ಮಾಡಬೇಕು ಎಂದು ಒತ್ತಿ ಹೇಳಬೇಕಾಗಿದೆ. ತಲೆನೋವು ಎಂದು ಆಸ್ಪತ್ರೆಗೆ ಹೋದವರಿಗೆ ಒಂದು ತಿಂಗಳಾದರೂ ಸಹ ತಲೆನೋವು ಹೋಗುವುದಿಲ್ಲ. ಅಂಥ ಮಿಕ್ಸ್‌ಚರನ್ನು ತಯಾರುಮಾಡುವ ಕಾಂಪೌಂಡರುಗಳಾದವರಿಗೆ ಸರಿಯಾದ ತರಬೇತಿಯನ್ನು ಕೊಡಬೇಕು. ಈ ಮಿಶ್ರಣಗಳನ್ನು ತಯಾರುಮಾಡುವ ಇಲಾಖೆಯಲ್ಲಿ ಸರಿಯಾಗಿ, efficient ಆಗಿರತಕ್ಕವರು ತಯಾರು ಮಾಡಬೇಕು. ಔಷಧಿಗಳು ಸರಿಯಾಗಿ ಬೆರಕೆ ಯಾಗುತ್ತವೆಯೇ, ಬೇರೆ ಕಡೆ ಹೋಗುತ್ತವೆಯೇ ಎಂದು ನೋಡಬೇಕು. ಆಸ್ಪತ್ರೆಗಳಲ್ಲಿ effective medicine ಸಿಕ್ಕದೆ, dilute ಮಾಡಿ ಕೊಡುವುದ ರಿಂದ ರೋಗಿಗಳ ಅವಾಂತರ ಜಾಸ್ತಿಯಾಗುತ್ತಿದೆ ಎಂದು ಒತ್ತಿ ಹೇಳಬೇಕಾಗಿದೆ. ಇದಕ್ಕೆ ಒಂದು ಕಾರಣವನ್ನು ಹೇಳುತ್ತೇನೆ. ಸಾರ್ವಜನಿಕ ಕ್ಷೇತ್ರ ದಲ್ಲಿ ಹೆಚ್ಚಿಗೆ contact ಇರತಕ್ಕ ಪ್ರಜೆ ಹೇಳುತ್ತಾನೆ, ಪ್ರೈವೇಟ್ ಆಸ್ಪತ್ರೆಗಳಿಗೆ ಹೆಚ್ಚಿಗೆ ಹೋಗಬೇಕು ಎಂದು. ಸರ್ಕಾರದ ದೊಡ್ಡದೊಡ್ಡ specia-lists ಇರುವಂಥ ದೊಡ್ಡದೊಡ್ಡ ಆಸ್ಪತ್ರೆಗಳಿವೆ, ಅಲ್ಲಿ ವಿಶೇಷ ರೀತಿಯ ಯಂತ್ರೋಪಕರಣಗಳನ್ನಿಟ್ಟಿದ್ದಾರೆ, ಅಲ್ಲಿ ದೊಡ್ಡ ಡಾಕ್ಟರುಗಳನ್ನು assist ಮಾಡಲು ಸಹಾಯಕ ಡಾಕ್ಟರುಗಳಿದ್ದಾರೆ. ಇಷ್ಟಿದ್ದರೂ ಕೂಡ ಜನಗಳ ಮನಸ್ಸಿನಲ್ಲಿ ಪ್ರೈವೇಟ್ ಆಸ್ಪತ್ರೆ ಗಳಿಗೆ ಹೋಗಬೇಕು ಎಂಬ ಭಾವನೆ ಇದೆ. ಇದಕ್ಕೆ

(ಶ್ರೀ ಯು. ಎಂ. ಮಾದಪ್ಪ)

ಕಾರಣವೇನೆಂಬುದನ್ನು ತಿಳಿದುಕೊಳ್ಳಬೇಕು. ಮಂತ್ರಿಗಳು ಪ್ರವಾಸ ಮಾಡುವಾಗ ನಮ್ಮಂಥ ಆರೋಗ್ಯವಂತರಾಗಿರುವವರನ್ನು ನೋಡದೆ ಅನಾರೋಗ್ಯವಂತರಾಗಿ ನರಳುತ್ತಿರುವವರನ್ನು ಆಕಸ್ಮಿಕವಾಗಿ ಹೋಗಿ ನೋಡಬೇಕು, ಜನರಲ್ ಆಸ್ಪತ್ರೆಗಳಿಗೆ ಹೋಗಿ ನೋಡಬೇಕು. ಅವರ ಪರಿಸ್ಥಿತಿ, ಅವರ ಬಾಳ್ವೆ ಕಣ್ಣಾರೆ ನೋಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇಂಥದ್ದನ್ನು ಮಂತ್ರಿಗಳು ಪ್ರವಾಸ ಕಾಲದಲ್ಲಿ ನೋಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮಲ್ಲಿ ಎಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶ ಹಳ್ಳಿಗಳ ರಾಜ್ಯ. ಆದರೆ ಡಾಕ್ಟರುಗಳ ಹಂಚಿಕೆ ಹೇಗಿದೆ ಎಂದು ನೋಡಿದರೆ, ಸರ್ಕಾರದವರು ಕೊಟ್ಟಿರುವ ವರದಿಯ ಪ್ರಕಾರ urban area ದಲ್ಲಿರುವ ಡಾಕ್ಟರುಗಳ ಸಂಖ್ಯೆ 649, rural area ದಲ್ಲಿರುವವರ ಸಂಖ್ಯೆ 662, ಒಟ್ಟು 1,311. ಇದು equitable distribution of doctors! ಗ್ರಾಮಾಂತರ ಪ್ರದೇಶಗಳಿಗೆ ಎಷ್ಟು ಸೌಕರ್ಯ ಸೌಲಭ್ಯಗಳನ್ನು ಒದಗಿಸಿದ್ದಾರೆಂಬುದು ಅರ್ಥವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳಿರಬಹುದು. ಆಸ್ಪತ್ರೆಗಳಿದ್ದ ಮಾತ್ರಕ್ಕೆ ಡಾಕ್ಟರುಗಳಿಲ್ಲದೆ ಇದ್ದರೆ ಅದರಿಂದ ಪ್ರಯೋಜನವೇನು? ಜನಸಂಖ್ಯೆಯ ಆಧಾರದ ಮೇಲೆ ಹಳ್ಳಿಗಾಡಿನಲ್ಲಿ ಕೆಲಸಮಾಡುವ ಡಾಕ್ಟರುಗಳ ಸಂಖ್ಯೆ ಎಷ್ಟು ಎಂಬುದನ್ನು ನಾವು ತಿಳಿಯಬಹುದು. ಒಬ್ಬ ಡಾಕ್ಟರು ಎಷ್ಟು ಜನ ರೋಗಿಗಳನ್ನು ನೋಡತಕ್ಕ ಶಕ್ತಿಯನ್ನು ಹೊಂದಿದ್ದಾನೆ? ಕೆಲವು ಪಟ್ಟಣಗಳಲ್ಲಿರುವ ಆಸ್ಪತ್ರೆಗಳಲ್ಲಿನ ಡಾಕ್ಟರುಗಳಿಗೆ ಹೆಚ್ಚಿಗೆ ಕೆಲಸವೇ ಇಲ್ಲವೆಂದು ಹೇಳುತ್ತೇನೆ. ಈ ಡಾಕ್ಟರುಗಳು ಹಳ್ಳಿಯ ವಾಸಕ್ಕೆ ಹೋಗಲು ಇಚ್ಛಿಸುವುದಿಲ್ಲ, ಅಲ್ಲಿಗೆ ಹೋಗಲು ತಯಾರಾಗಿಲ್ಲ. ಹಳ್ಳಿಗಳಿಗೆ ಹೋದರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಹೋಗುತ್ತದೆಂದು ಹೇಳುತ್ತಾರೆ. ನಮ್ಮ ಮಕ್ಕಳಿಗೆ ಆರೋಗ್ಯ ಸಿಕ್ಕಿದರೆ ಸಾಕು, ಅವರು ಆರೋಗ್ಯದಿಂದಿದ್ದರೆ ಸಾಕು ಎಂದು ಹೇಳುತ್ತೇವೆ. ನಮ್ಮ ಮಕ್ಕಳಿಗೆ ಆರೋಗ್ಯಸಿಕ್ಕುವ ಹಾಗೂ ಇಲ್ಲ; ವಿದ್ಯಾವಂತರಾಗುವ ಹಾಗೂ ಇಲ್ಲ. ಆರೋಗ್ಯವಿದ್ದರೆ ತಾನೇ ವಿದ್ಯಾವಂತರಾಗುವುದು? ಇಂಥ ಪರಿಸ್ಥಿತಿ ಹಳ್ಳಿಗಾಡಿನವರಿಗೆ ಒದಗಿದೆ ಎಂದು ಅಂಕಿಅಂಶಗಳ ಮೂಲಕ ತೋರಿಸುತ್ತೇನೆ. ಏತಕ್ಕಾಗಿ ಹೀಗಾಗುತ್ತಿದೆ ಎಂದರೆ ಡಾಕ್ಟರುಗಳಿಗೆ ವಾಸಮಾಡಲು ಕ್ವಾರ್ಟರ್ಸ್ ವಗೈರೆ ಅನುಕೂಲಗಳಿಲ್ಲ. ಹಳ್ಳಿಗಳಲ್ಲಿ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡುವ ಏರ್ಪಾಡನ್ನು ಮಾಡಬೇಕು; ಮತ್ತು ಡಾಕ್ಟರುಗಳು ಹಳ್ಳಿಗಳಿಗೆ ಹೋಗಲು ಆಕರ್ಷಣೀಯವಾಗಿರುವಂತೆ ಇತರ ಸೌಲಭ್ಯಗಳನ್ನೂ ಹೆಚ್ಚಾಗಿ ಒದಗಿಸಬೇಕೆಂದು ಒತ್ತಾಯ ಪಡಿಸುತ್ತೇವೆ.

ಕಾಂಪೌಂಡರುಗಳ ವಿಷಯ ಸ್ವಲ್ಪ ಮಾತನಾಡಬೇಕು. ಇವರಿಗೆ ಕೊಡತಕ್ಕ ಸಂಬಳ ನಲವತ್ತು ರೂಪಾಯಿನಿಂದ ಪ್ರಾರಂಭವಾಗುತ್ತದೆ. ಆತನು S.S.L.C. ಪಾಸ್ ಮಾಡಿಕೊಂಡು ಈ ಒಂದು ಕ್ಷೇತ್ರದಲ್ಲಿ ಟ್ರೈನಿಂಗ್ ಪಡೆದಿರುತ್ತಾರೆ. ಜನರ ಜೀವನ ಸಮಸ್ಯೆಯನ್ನು ಈತನ ಕೈಯಲ್ಲಿ ಕೊಟ್ಟಿದ್ದೀರಿ. ಕಾಂಪೌಂಡರುಗಳೇ ಮಿಕ್ಸ್‌ಚರ್ ತಯಾರುಮಾಡುವವರು. ಆತನು ತಯಾರುಮಾಡಿದ ಔಷಧಿಯನ್ನು ಡಾಕ್ಟರು ಕೊಡುತ್ತಾರೆ. ಇಂಥ ಕಾಂಪೌಂಡರುಗಳಿಗೆ ಕೇವಲ ನಲವತ್ತು ರೂಪಾಯಿ ಸಂಬಳದಿಂದ ಪ್ರಾರಂಭ ಮಾಡುತ್ತೀರಿ. ಅದೇ ಪ್ರಕಾರ ನೋಡಿದರೆ,

11-30 A.M.

ಪ್ರೈಮರಿ ಸ್ಕೂಲ್‌ನಲ್ಲಿ ಟ್ರೈನಿಂಗ್ ಆಗಿರುವವನಿಗೆ ನೂರು ರೂಪಾಯಿ ತಾವು ಕೊಡುತ್ತಿದ್ದೀರಿ. ಇದನ್ನು ತಾವು ಯೋಚನೆ ಮಾಡಬೇಕು. ಇಂಥ ಮುಖ್ಯವಾದ spending ಇಲಾಖೆಗಳಲ್ಲಿ ಈ ವಿಷಯಗಳಿಗೆ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಆಸ್ಪತ್ರೆಗಳು ದೇಶದಲ್ಲಿ ಎಷ್ಟರ ಮಟ್ಟಿಗೆ equitable ಆಗಿ ಹಂಚಲ್ಪಟ್ಟಿವೆ, ನೋಡೋಣ. ಮಂತ್ರಿಗಳು ತಮ್ಮ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಬಹಳ ಕಷ್ಟಪಟ್ಟು ಕೆಲವು ಅಂಶಗಳನ್ನು ಎತ್ತಿ ತೋರಿಸಿದ್ದಾರೆ. ಅದನ್ನೇ ಅವರು ತಾಲ್ಲೂಕಾವಾರಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಅವರು ಹಳೆಯ ಮೈಸೂರಿನ ಹಾಗೂ ಹೊಸ ಮೈಸೂರಿನ ಡಿಸ್ಟ್ರಿಕ್ಟ್‌ಗಳನ್ನು ಹೋಲಿಕೆಮಾಡಿ ನೋಡಿರುವಂತೆ, ತಾಲ್ಲೂಕು-ತಾಲ್ಲೂಕುವಾರು ಪರಿಶೀಲನೆಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎಷ್ಟು ಹೆಲ್ತ್ ಯೂನಿಟ್ಟುಗಳು' ಡಿಸ್ಪೆನ್ಸರಿಗಳು ಇವೆಯೆಂದು ನೋಡಿದ್ದರೆ, ಅಗ್ಗೆ ಹೇಗೆ inequitable ಆಗಿ ಹಂಚಲ್ಪಟ್ಟಿವೆಯೆಂಬುದು ವೇದ್ಯವಾಗುತ್ತಿತ್ತು. ಒಂದು ಕಡೆ ಹೆಚ್ಚಿಗೆ ಆಸ್ಪತ್ರೆಗಳನ್ನು ಕಟ್ಟಿದ್ದೀರಿ. ಮತ್ತೊಂದು ಕಡೆ ಅವು ಕೇವಲ ಕಡಮೆ ಸಂಖ್ಯೆಯಲ್ಲಿವೆ. ಆದ್ದರಿಂದ ಇನ್ನುಮೇಲೆ ಅರ್ಜಿ ಬಂದಿದೆ, ಜನಸಂಖ್ಯೆ ಜಾಸ್ತಿಯಿದೆಯೆಂದು ಹೇಳಿ ಆಸ್ಪತ್ರೆಗಳನ್ನು ಕೊಡುವುದನ್ನು ಬಿಡಿ. ಒಂದು ಯೋಜನೆಯನ್ನು ಹಾಕಿಕೊಂಡು, ಅಂಕಿ ಸಂಖ್ಯೆಗಳ ಶಾಖೆಯಿಂದ ಹೊರಪಟ್ಟಂತೆ ರೋಗಗಳ ಸಂಖ್ಯೆ ಎಲ್ಲಿ ಹೆಚ್ಚಿಗೆ ಇದೆಯೋ ಅಲ್ಲಿಗೆ ಕೊಡುವ ಯೋಜನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ತಮ್ಮ ಸೂಚನೆಯಂತೆಯೇ ಈಗಾಗಲೇ work out ಮಾಡುವುದಕ್ಕೆ ಷುರು ಮಾಡಿದ್ದಾರೆ. We are going to get the report shortly.

Sri U. M. MADAPPA.—Let there not be any partiality.

Sri V. S. PATIL (Belgaum).—There cannot be any partiality. The question is one of making equitable distribution.

ಶ್ರೀ ಯು. ಎಂ. ಮಾದಪ್ಪ.—ಈ ವಿಷಯದಲ್ಲಿ ಹಾಗೆ equitable distribution ಮಾಡುವಾಗ ಸಾರ್ವಜನಿಕರಿಂದ ಡೊನೇಷನ್ ಬಂದಿರುವುದನ್ನೂ ಬಡ್ಡಿಯಿಲ್ಲದೆ ಬಹಳ ಕಾಲದಿಂದ ತಮ್ಮಲ್ಲಿ ಅದನ್ನೂ ಬಿಟ್ಟಿರುವುದನ್ನೂ ತಾವು ಸ್ವಲ್ಪ ಗಮನಿಸಬೇಕು. ಬಿಲ್ಡಿಂಗ್‌ಗಳನ್ನು ಕಟ್ಟಿಕೊಡಿ ಎಂದು ಹೇಳಿ ಸಾರ್ವಜನಿಕರು ತಮ್ಮ ಭಾಗದ ಕಂಟ್ರಿಬ್ಯೂಷನ್ ಕೊಟ್ಟಿರುವುದನ್ನು ತಾವು ನೋಡದೆ—ಮಾಡದೆ ಅನೇಕ ವರ್ಷಗಳಿಂದ ಹಾಗೆಯೇ ಬಿಟ್ಟಿದ್ದೀರಿ. ಒಂದು ಕಡೆ ನೀವು ಸಾರ್ವಜನಿಕರ ಸಹಕಾರ ಬೇಕೆಂದು ಹೇಳುವುದು, ಇನ್ನೊಂದು ಕಡೆ ನೀವೇ ಅಸಹಕಾರ ಮಾಡುತ್ತಿರುವುದಾದರೆ ಹೇಗೆ!

Sri K. K. HEGDE (Minister for Public Health).—It is for the simple reason of making an equitable distribution of all hospitals, Government have been withholding sanction in regard to these hospitals.

ಶ್ರೀ ಯು. ಎಂ. ಮಾದಪ್ಪ.—ಸ್ಯಾಂಕ್ಷನನ್ನು ಹಿಡಿದು ಇಟ್ಟಿರುವುದನ್ನು ನಾನು ಹೇಳುವುದಿಲ್ಲ. ಆಸ್ಪತ್ರೆಗಳಿದ್ದೂ ಅವು ಖಾಸಗಿ ಕಟ್ಟಡಗಳಲ್ಲವೆ. ಅವುಗಳಿಗೆ ಆಸ್ಪತ್ರೆಗೆ ತಕ್ಕಂತೆ ಲಾಯಖ್ಖಾದ ಕಟ್ಟಡ ವನ್ನು ಕಟ್ಟಿಸಬೇಕೆಂದು ಸಾರ್ವಜನಿಕರು ಮುಂದೆ ಬಂದು ಹತ್ತಾರು ಸಾವಿರ ರೂಪಾಯಿಗಳನ್ನು ಕೊಟ್ಟರೂ ತಾವು ಅದರ ಕಡೆ ಗಮನಕೊಟ್ಟಿಲ್ಲ. ಸೆಕ್ರೆಟೇರಿಯಟ್ಟಿಗೆ ಅಂದಾಜುಗಳು ಬಂದು ಆರೇಳು ವರ್ಷಗಳಾದರೂ ತಾವು ಆರ್ಡರ್ ಮಾಡುತ್ತಿಲ್ಲ. ಆ ಬಗ್ಗೆ ನಾವು ಪ್ರಶ್ನೆಗಳನ್ನು ಕೇಳಿದರೆ, ಆ ಫೈಲು ಸೆಕ್ರೆಟೇರಿಯಟ್ಟಿನಿಂದ ತಾಲ್ಲೂಕ್ ಲೆವೆಲ್ಲಿಗೆ ಹೋಗಿ ಅಲ್ಲಿಂದ ಬಂದು ಏನೋ ಒಂದು information ತಾವು ಕೊಟ್ಟುಬಿಡುತ್ತೀರಿ.

ಶ್ರೀ ಕೆ. ಕೆ. ಹೆಗ್ಗಡೆ.—ದಯವಿಟ್ಟು ಅಂಥ ಒಂದು instance ಹೇಳುತ್ತೀರಾ?

ಶ್ರೀ ಯು. ಎಂ. ಮಾದಪ್ಪ.—ತಮ್ಮ ಚೇಂಬರಿನಲ್ಲೇ ಬಂದು ಅದೆಲ್ಲವನ್ನೂ ನಾನು ಚರ್ಚೆ ಮಾಡಿದ್ದೇನೆ. ಚಾಮರಾಜನಗರದ ಕುದೇರುವಿಗೆ ಸಂಬಂಧಪಟ್ಟ ವಿಚಾರ ತೆಗೆದುಕೊಳ್ಳಿ. 1957ನೆಯ ಇಸವಿಯಲ್ಲಿ 5,500 ರೂಪಾಯಿಗಳನ್ನು ಡಿಪಾಜಿಟ್ ಮಾಡಿದ್ದಾರೆ. 1948-49ರಲ್ಲಿ 5,000 ರೂಪಾಯಿಗಳನ್ನು ಮೆಟರ್ನಿಟಿ ಹಾಸ್ಪಿಟಲ್ ಕಟ್ಟಡಕ್ಕೆಂದು ಡಿಪಾಜಿಟ್ ಮಾಡಿತ್ತು. ಇವೆರಡನ್ನು ಸೇರಿಸಿಕೊಂಡರೆ 10,500 ರೂಪಾಯಿ ಗಳಾಗುತ್ತವೆ. 19,500 ರೂಪಾಯಿಗಳ ಅಂದಾಜು ತಯಾರಾಗಿತ್ತು. ಅಗ್ರಿಮೆಂಟ್ ಪ್ರಕಾರ ಮೆಟರ್ನಿಟಿ ಹೋಮ್ ಒಂದನ್ನು ಕಟ್ಟಿಸಬೇಕೆಂದಿತ್ತು. ಆಮೇಲೆ ಡಿಸ್ಟ್ರಿಕ್ಟ್ ಬೋರ್ಡಿನವರು ಮುಂದೆ ಬಂದು ಮೆಟರ್ನಿಟಿ ಹಾಸ್ಪಿಟಲ್ ಮಾಡಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆಲ್ಲಾ ಇರುವ ಎಸ್ಟಿಮೇಟು 30,000 ರೂಪಾಯಿ ಗಳು. ರೂಲ್ಸ್ ಪ್ರಕಾರ ಮೂರನೆ ಎರಡು ಭಾಗವನ್ನು ಸರ್ಕಾರದವರೂ, ಮತ್ತು ಮೂರನೆ ಒಂದು ಭಾಗ ವನ್ನು ಸಾರ್ವಜನಿಕರೂ ಕೊಡಬೇಕಾಗಿದೆ. ಈಗಾಗಲೇ ಸಾರ್ವ ಜನಿಕರು ಕೊಟ್ಟಿರುವ ಹಣವನ್ನೂ, ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿರುವ ರೆಸಲ್ಯೂಷನ್ ಪ್ರಕಾರ 7,500 ರೂಪಾಯಿಗಳು ಬರುವುದನ್ನೂ ಸೇರಿಸಿದರೆ, ಇನ್ನೆಲ್ಲಾ ಬೇಕಾಗಿರುವ ಹಣ ಕೇವಲ ಸ್ವಲ್ಪ.

ಶ್ರೀ ಕೆ. ಕೆ. ಹೆಗ್ಗಡೆ.—ಸರ್ಕಾರದವರು ಮೂರನೆ ಎರಡು ಭಾಗ, ಸಾರ್ವಜನಿಕರು ಮೂರನೆ ಒಂದು ಭಾಗ ಎಂಬುದು ಇಲ್ಲಿ ಬರುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—19,000 ರೂಪಾಯಿ ಗಳ ಎಸ್ಟಿಮೇಟಿಗೆ ತಾವು ಆಗಲೇ ಒಪ್ಪಿದ್ದೀರಿ. ಇನ್ನೆಲ್ಲಾ ತಾವು ಹೆಚ್ಚಿಗೆ ಕೊಡಬೇಕಾದದ್ದು ಐದು ಆರುಸಾವಿರ ರೂಪಾಯಿಗಳು ಮಾತ್ರ. ಇಷ್ಟು ಸ್ವಲ್ಪದ ವಿಚಾರವನ್ನು ಸೆಕ್ರೆಟೇರಿಯಟ್ಟಿನಲ್ಲಿ confuse ಮಾಡಿ ಬಿಟ್ಟಿದ್ದಾರೆ. ಏಕೆಂದರೆ, ಅವರಿಗೆ work ಮಾಡು ವುದಕ್ಕೆ ಮನಸ್ಸಿಲ್ಲ.

ಇನ್ನೊಂದು ವಿಷಯ. ಚಾಮರಾಜನಗರದಲ್ಲಿ ಒಂದು ಹೆಲ್ತ್ ಯೂನಿಟ್ ಇದೆ. ಅಲ್ಲಿ ರೋಗಿಗಳು ಮಲಗಿಕೊಳ್ಳುವುದಕ್ಕೂ ಸಹ ಸರಿಯಾದ ವ್ಯವಸ್ಥೆಯಿಲ್ಲ ದಿರುವಂಥ ಪರಿಸ್ಥಿತಿಯನ್ನು ನೋಡಿ, ಅಲ್ಲಿಗೆ ಮಂತ್ರಿ ಗಳು ಬಂದಾಗ ಒಬ್ಬರನ್ನು ಕರೆಸಿ ಏನಾದರೂ ಧನ ಸಹಾಯ ಮಾಡಬೇಕೆಂದು ಕೇಳಿದರು. ಅವರು 5,000 ರೂಪಾಯಿಗಳನ್ನು ಕೊಡುವುದಾಗಿ ಹೇಳಿದರು. ಮುನಿಸಿಪಾಲಿಟಿಯವರು ಬೇರೆ 5,000 ರೂಪಾಯಿ ಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಅದರ ಎಸ್ಟಿಮೇಟ್ ಇರುವುದೆಲ್ಲಾ 8,000 ರೂಪಾಯಿ ಈ ಎಸ್ಟಿಮೇಟು ಸೆಕ್ರೆಟೇರಿಯಟ್ಟಿಗೆ ಬಂದು ಮೂರು ನಾಲ್ಕು ತಿಂಗಳಾಯಿತು. ಕೇವಲ ಎಂಟು ಹತ್ತು ದಿವಸದಲ್ಲಿ ತೀರ್ಮಾನವಾಗಬೇಕಾಗಿದ್ದುದು ಈಗ ತಿಂಗಳಾನುಗಟ್ಟಳೆ ಕೊಳೆಯುತ್ತಿದೆ. ಹೀಗಾದರೆ ಸಾರ್ವಜನಿಕರು ಹೇಗೆತಾನೆ ಇನ್ನು ಹಣಕೊಡುವುದಕ್ಕೆ ಮುಂದೆ ಬರುತ್ತಾರೆ? ಜನರಲ್ಲಿ ನಂಬಿಕೆಯುಂಟಾಗು ವಂತೆ ತಾವು ಕೆಲಸಮಾಡಬೇಕೆಂದು ನಾನು ಹೇಳು ತ್ತೇನೆ.

ಗ್ರಾಮಾಂತರಗಳಲ್ಲಿ ರೋಗಗಳನ್ನು ತಡೆಗಟ್ಟ ಬೇಕಾದರೆ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿರ ಬೇಕು. ಇದಕ್ಕಾಗಿ Protected Water Supply ಮಾಡುತ್ತಿದ್ದೇವೆಂದು ತಾವು ಬೆನ್ನು ತಟ್ಟಿಕೊಳ್ಳು ತ್ತಿದ್ದೀರಿ. ಈ ವಿಷಯದಲ್ಲಿ ತಾವೇನಾದರೂ equitable ಆಗಿ ಕಾರ್ಯಕ್ರಮ ಕೈಕೊಂಡಿದ್ದೀರಾ? ಕೋಲಾರ, ತುಮಕೂರು, ಹಾಸನ ಈ ಮೂರು ಡಿಸ್ಟ್ರಿಕ್ಟ್‌ಗಳಲ್ಲಿ ಮಾತ್ರ ತಾವು ಕೇಂದ್ರೀಕರಿಸಿಕೊಂಡು ಕೆಲಸ ಮಾಡಿದರೆ ದೇಶಾದ್ಯಂತವೂ ಆದಂತಾಯಿತೇ? ಸರ್ಕಾರದ ಹಣ equitable ಆಗಿ distribute ಮಾಡಿದಂತಾಯಿತೇ? ಎಲ್ಲರೂ ಮಾನವ ವರ್ಗಕ್ಕೆ ಸೇರಿದವರಲ್ಲವೇ? ಅಲ್ಲದೆ, ತಾವೀಗ ಏರ್ಪಡಿಸಿರುವ ಕಡೆಯಲ್ಲಾದರೂ ಅದು ಸರಿಯಾಗಿ ಕೆಲಸ ಮಾಡುತ್ತಿ ದೆಯೇ? Bore well section ಎಂದು P.W.D. ನಲ್ಲಿ ಸೇರಿಕೊಂಡಿದೆ. 1938ನೆಯ ಇಸವಿಯಲ್ಲಿ ಶ್ರೀ ಗುಂಡಪ್ಪಗೌಡರ ಕಾಲದಲ್ಲಿ ಈ ಯೋಜನೆ ಪ್ರಾರಂಭವಾಗಿ ಕೆಲವು ಬಾವಿಗಳನ್ನು ಅಗೆ ತೆಗೆಸಿ ದರು. 20 ವರ್ಷಗಳ ಕೆಳಗೆ ಬೋರ್‌ವೆಲ್‌ಗಳನ್ನು seal ಮಾಡಿದ್ದನ್ನು ಇದುವರೆಗೂ open ಮಾಡಿಲ್ಲ. ಇಂಥವು ನೂರಾರು ಬೋರ್‌ವೆಲ್‌ಗಳಿವೆ. ಪಿ.ಡಬ್ಲ್ಯು.ಡಿ. ನಲ್ಲಿರುವ ಈ ಬೋರ್‌ವೆಲ್ ಸೆಕ್ಷನ್ನನ್ನು ಹೆಲ್ತ್ ಡಿಪಾರ್ಟ್‌ಮೆಂಟಿಗೆ ಕೊಟ್ಟು ಒಬ್ಬ ಅಸಿಸ್ಟೆಂಟ್ ಎಂಜಿನಿಯರನ್ನು ಕಳುಹಿಸಿಕೊಟ್ಟರೆ ಕೆಲಸ ಸರಿಯಾಗಿ ನಡೆಯುತ್ತದೆಂದು ನಾನು ಹೇಳುತ್ತೇನೆ.

ಸರ್ಕಾರದವರು ತಮ್ಮ ರಿಪೋರ್ಟಿನಲ್ಲಿ ಬೋರ್‌ವೆಲ್ ಗಳನ್ನು ತೆಗೆಯಿಸುವುದು ಕಷ್ಟವೆಂದು ಹೇಳಿದ್ದಾರೆ. ಹಳೆಯ ಮೈಸೂರಿನಲ್ಲಿಯೇ 13 ಬೋರ್‌ವೆಲ್ ಮೆಷೀನ್ ಗಳಿದ್ದುವ. ಹೊಸ ಮೈಸೂರಿನಲ್ಲಿ ಎಷ್ಟಿವೆಯೋ ಗೊತ್ತಿಲ್ಲ. ಆದರೂ ಈಗಿರುವ 13 ಬೋರ್‌ವೆಲ್ ಮೆಷೀನ್‌ಗಳನ್ನು ಸರಿಯಾಗಿ organise ಮಾಡಿ work ಮಾಡಿಸಿದರೆ ಐದು ವರ್ಷಗಳಲ್ಲಿ ಎಲ್ಲಾ ಕಡೆಯಲ್ಲೂ ಹಾಕಿಸುವುದಕ್ಕೆ ಸಾಧ್ಯವಿದೆ. ಆದರೆ, ಸ್ವಲ್ಪಮಟ್ಟಿಗೆ ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು; ಪಂಚಾಯಿತ್ತಿಯವರು ಅರ್ಧ ಕೊಡಬೇಕು, ಸರ್ಕಾರ ದವರು ಅರ್ಧ ಕೊಡಬೇಕು ಎಂದಿರುವುದನ್ನು ತಪ್ಪಿಸಿ ರೂರಲ್ ಡೆವಲಪ್‌ಮೆಂಟಿಗೆಂದು ತಾವು ಒದಗಿಸಿರುವ ಹಣದಿಂದಲೇ ಹೆಲ್ತ್ ಡಿಪಾರ್ಟ್‌ಮೆಂಟಿನವರು ತೆಗೆದು ಕೊಂಡು ಖರ್ಚು ಮಾಡಬೇಕೆಂದು ಹೇಳುತ್ತೇನೆ. ಈಗ ರೂರಲ್ ಡೆವಲಪ್‌ಮೆಂಟಿನಿಂದ ಒಂದಿಷ್ಟು ಹಣ, N.E.S. ನಿಂದ ಒಂದಿಷ್ಟು ಹಣ ಎಂದು ಚೌಚೌ ವ್ಯವಸ್ಥೆ ಮಾಡುವುದನ್ನು ಬಿಟ್ಟು ಎಲ್ಲವನ್ನು ಒಟ್ಟು ಸೇರಿಸಿ ಸರಿಯಾಗಿ ನೀರಿನ ಸರಬರಾಜಿಗೆ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ರೀತಿ ಮಾಡದೇಯಿದ್ದ ಪದಕ್ಷಲ್ಲ ಎಲ್ಲಾ ಕಡೆಯೂ ಚಂದಿಯಾಗಿ ಒಂದು ಕಡೆಯೂ ನೀರು ಬರುವುದಕ್ಕೆ ಅವಕಾಶವಾಗು ವುದಿಲ್ಲ. ಬಂದರೆ ಬಂತು, ಇಲ್ಲದಿದ್ದರೆ ಇಲ್ಲ. ಕೇಳಿದರೆ ಒಂದು ಕಡೆ ಗೋಡೆ ಕುಸಿಯಿತು, ಇನ್ನೊಂದು ಕಡೆ ಬಾವಿ ಕುಸಿಯಿತು ಎಂದು ಏನಾದರೂ ನೆಪ ಹೇಳು ತ್ತಾರೆ. ಹೀಗಾಗಿ ಒಂದು ಬಾವಿಯೂ ಕೂಡ ಆಗಿಲ್ಲ.

(ಶ್ರೀ ಯು. ಎಂ. ಮಾದಪ್ಪ)

ಇನ್ನು ಕೆಲವು ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಸ್ಕೀಮ್ಸ್ ಪ್ರಾರಂಭಿಸಬೇಕು. ಸುಮಾರು 75 ಬಾವಿಗಳಿವೆ ಎಂದು ವರದಿಯಲ್ಲಿ ಹೇಳಿದೆ. ಆ 75 ಈ ದಿವಸ ಕೆಲಸ ಮಾಡುತ್ತಿವೆಯೇ, ಮಾಡದಿದ್ದರೆ ಕಾರಣವೇನು ಎಂದು ಸರ್ಕಾರ ಹುಡುಕಿ ತಕ್ಕ ಏರ್ಪಾಡು ಮಾಡಬೇಕು.

ಮೆಂಟಲ್ ಆಸ್ಪತ್ರೆ ವಿಷಯ ಬಹಳ ವಿಚಿತ್ರವಾಗಿದೆ. ಅಲ್ಲಿಗೆ ಹುಚ್ಚರಾದವರು ಮ್ಯಾಜಿಸ್ಟ್ರೇಟರ ಹತ್ತಿರ ಹೋಗಿ ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಕೊಟ್ಟರೆ ಮಾತ್ರ ಪ್ರವೇಶವಿದೆ.

Sri B. D. JATTI.—That is not correct. It is not the mad man who is to go and get the certificate.

ಶ್ರೀ ಯು. ಎಂ. ಮಾದಪ್ಪ.—ಗಾರ್ಡಿಯನ್ ಸರ್ಟಿಫಿಕೇಟ್ ತರುತ್ತಾರೆ ಎಂದೇ ಇಟ್ಟುಕೊಳ್ಳೋಣ. ಮ್ಯಾಜಿಸ್ಟ್ರೇಟರೇ ಮೆಂಟಲ್ ಡಿಫೆಕ್ಟ್ ಇದೆಯೆಂದು ಸರ್ಟಿಫಿಕೇಟ್ ಕೊಡುವುದಾದರೆ ಡಾಕ್ಟರೇಕಿರಬೇಕು ? ಡಾಕ್ಟರು ಸರ್ಟಿಫಿಕೇಟ್ ಕೊಡಬೇಕೇ ಅಥವಾ ಮ್ಯಾಜಿಸ್ಟ್ರೇಟ್ ಕೊಡಬೇಕೇ ಎಂಬುದು ತರ್ಕಕ್ಕೆ ಎಡೆ ಕೊಟ್ಟಿದೆ. ನಾನು ಒಂದು ಸೊಲ್ಯೂಷನ್ ಸಜೆಸ್ಟ್ ಮಾಡುತ್ತಿದ್ದೇನೆ. ಗಾರ್ಡಿಯನ್ ಹೋಗಿ ಸರ್ಟಿಫಿಕೇಟ್ ತರಲು ಕಷ್ಟವಾಗುತ್ತದೆ.

Sri K. K. HEGDE.—The concerned parties or members who are affected by this mad man will approach the Magistrate. He will direct the hospital authorities to keep him under observation. Only after the observation period is over the doctor certifies that he is to be kept in the Mental Hospital. This is reported to the concerned authority. The Magistrate then issues the certificate.

ಶ್ರೀ ಯು. ಎಂ. ಮಾದಪ್ಪ.—ನಾನು ಹೇಳುವವರೆಗೆ ಸ್ವಲ್ಪ ಅವಕಾಶಕೊಡಿ. ತಾವು ಮ್ಯಾಜಿಸ್ಟ್ರೇಟರಿಗೆ ರೆಫರ್ ಮಾಡುತ್ತೇವೆಂದು ಹೇಳಿದರೂ ಮೊದಲು ಸರ್ಟಿಫಿಕೇಟ್ ಆದಮೇಲೆ ಮ್ಯಾಜಿಸ್ಟ್ರೇಟರು ಅವರ ಕೆಲಸ ಮಾಡಬಹುದು. ತಾವು ಆಸ್ಪತ್ರೆಯವರಿಂದಲೇ ಒಂದು ವ್ಯವಸ್ಥೆ ಮಾಡಿಸಿ. ಕೆಲವು ಹುಚ್ಚರಿದ್ದಾರೆ. ಗಾರ್ಡಿಯನ್ ಇಲ್ಲದಿರುವವರು ಬೀದಿಗಳಲ್ಲಿ ತಿರುಗಾಡುವ ಬೇರೆ ಮನುಷ್ಯರಿಗೆ ತೊಂದರೆ ಮಾಡುತ್ತಾರೆ. ಅಂಥವರಿಗೆ ಏನು ರಕ್ಷಣೆಯಿದೆ ?

Sri B. D. JATTI.—That is what I am saying. In such a case it is the police or any person who is interested in the man who will go and inform the Magistrate and then this procedure will follow.

ಶ್ರೀ ಯು. ಎಂ. ಮಾದಪ್ಪ.—ಪೋಲೀಸು ಇಲಾಖೆ ಮಂತ್ರಿಗಳು ಇಲ್ಲಿ ಹಾಜರಿರುವುದರಿಂದ ಈ ವಿಷಯದಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಸಿ ಎಂದು ಹೇಳುತ್ತಿದ್ದೇನೆ. ಬೀದಿಗಳಲ್ಲಿ ಅಂಥ ಹುಚ್ಚರು ತಿರುಗಾಡುತ್ತಿದ್ದರೂ ಪೋಲೀಸರು ಆ ಕಡೆ ಗಮನ ಕೊಡುತ್ತಿಲ್ಲ. ಪೋಲೀಸಿನವರು ಸರ್ಟಿಫಿಕೇಟ್ ಕೊಡುವವರು ಯಾರೂ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ಇದಕ್ಕೆ ಸರಿಯಾಗಿ ನಿಗಾ ಕೊಡಿ ಎಂದು ಹೇಳುತ್ತೇನೆ.

Sri K. K. HEGDE.—Even the police have got a right to take them to the hospital.

ಶ್ರೀ ಯು. ಎಂ. ಮಾದಪ್ಪ.—ಇನ್ನು ಕೆಲವು ಕಡೆ ರಿವೈಜ್ಡ್ ಎಸ್ಟಿಮೇಟಿನಲ್ಲಿ ಕಡಮೆಯಾಗಿದೆಯೆಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಸೆಂಟ್ರಲ್ ಗ್ರಾಂಟು ಪೂರ್ಣವಾಗಿ ಉಪಯೋಗಿಸುವುದಕ್ಕಾಗಿಲ್ಲವೆಂದು ಏನೋ ಕಾರಣ ಹೇಳುತ್ತಾರೆ. ಇದನ್ನು ನೋಡಿದರೆ ದಕ್ಷತೆ ಎಷ್ಟರಮಟ್ಟಿಗಿದೆಯೆಂಬುದು ಗೊತ್ತಾಗುತ್ತಾ ಇದೆ. ಗ್ರಾಂಟಿಲ್ಲದೆ ಸುಮ್ಮನೆ ಅಂದಾಜು ಮಾಡಿದರೇ ಅಥವಾ ದಕ್ಷತೆಯಿಲ್ಲದೆ ಇದಕ್ಕೆ ಅವಕಾಶವಾಯಿತೇ ಈ ಎರಡರಲ್ಲಿ ಯಾವುದರಿಂದ ಆಯಿತು ಎಂದು ಮಂತ್ರಿಗಳು ಹೇಳಬೇಕು. ಇದಕ್ಕೆ ಜವಾಬಾಗಿ ಸೈಟ್ ಇರಲಿಲ್ಲ, ಅಕ್ವಿಜಿಷನ್ ಆಗಬೇಕಾಗಿತ್ತು ಅಥವಾ ಮೆಟೀರಿಯಲ್ಸ್ ಬರಲಿಲ್ಲ ಎಂದು ಏನಾದರೂ ಹೇಳಬಹುದು. When an estimate is sanctioned, is it not the duty of the concerned officer to look to all this ?

Sri K. K. HEGDE.—The member should know that it is only an estimate.

ಶ್ರೀ ಯು. ಎಂ. ಮಾದಪ್ಪ.—ಅಂದಾಜು ಮಾಡುವಾಗ ಅದನ್ನು ಪೂರ್ಣವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಕಾರ್ಯಗತ ಮಾಡಬೇಕೆಂದು ಅಂದಾಜು ಮಾಡಿದಮೇಲೆ ಸಕಾಲದಲ್ಲಿ ಕೆಲಸ ಮಾಡಬೇಕು. ಹಾಗೆ ಮಾಡದಿರುವಾಗ ಅದಕ್ಕೆ ಸಕಾರಣವಿದೆಯೆ, ಅದು ಎಷ್ಟುಮಟ್ಟಿಗೆ ನಿಜ ಎಂಬುದನ್ನು ಪರಿಶೀಲಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ನಮ್ಮಲ್ಲಿರುವುದು ಎರಡು ಔಷಧಿ, ಒಂದು ಅಲೋಪತಿಕ್, ಇನ್ನೊಂದು ಆಯುರ್ವೇದ. ಈಗ ಹೆಚ್ಚು ಹೆಚ್ಚಾಗಿ ಆಯುರ್ವೇದ ಔಷಧಿಗಳನ್ನು ಉಪಯೋಗಿಸಬೇಕೆಂಬುದು ನನ್ನ ಸಲಹೆ. ಹಾಗೆ ಮಾಡಿದರೆ ಹೊರಗಡೆಯಿಂದ ಅಲೋಪತಿಕ್ ಔಷಧಿಯನ್ನು ಹೆಚ್ಚಾಗಿ ತರಿಸಬೇಕಾಗಿಲ್ಲ, ತರಿಸಲು ಎಷ್ಟೋ ತೊಂದರೆಯೆಂದು ಕೇಂದ್ರ ಸರ್ಕಾರದವರೂ ಮತ್ತು ನೀವೂ ಹೇಳುತ್ತಿದ್ದೀರಿ. ಆದರೆ ನೀವು ಮಾಡಿರುವ ಕೆಲಸವೇನು ? ಹೊರಗಡೆಯಿಂದ ಬರುವ ಔಷಧಿ ತಡೆಗಟ್ಟಿ ದೇಶೀಯ ಔಷಧಿ ಉಪಯೋಗಿಸಲು ಹೆಚ್ಚಾಗಿ ಏನೂ ಕಾರ್ಯಕ್ರಮ ಕೈಗೊಂಡಿಲ್ಲ.

ಶ್ರೀ ಕೆ. ಕೆ. ಹೆಗ್ಗಡೆ.—ಈಗ ಹೊರಗಿನಿಂದ ತರಿಸುವುದು ಬಹಳ ಕಡಮೆ.

ಶ್ರೀ ಯು. ಎಂ. ಮಾದಪ್ಪ.—ಆಯುರ್ವೇದ ಆಸ್ಪತ್ರೆ ವಿಷಯವನ್ನು ಕಡೆಗಣ್ಣಿನಿಂದ ನೋಡುತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡಲು ಆಯುರ್ವೇದ ಇಲಾಖೆಗೆ ಒಬ್ಬ ಮುಖ್ಯಾಧಿಕಾರಿಯನ್ನು ಅಂದರೆ ಡೈರೆಕ್ಟರನ್ನು ಪ್ರತ್ಯೇಕವಾಗಿ ನೇಮಿಸಬೇಕು. ಅಲ್ಲದೆ ಆ ಹುದ್ದೆಗೆ ನೇಮಿಸಲ್ಪಡುವವರಿಗೆ ತಕ್ಕ ಕ್ವಾಲಿಫಿಕೇಷನ್ ಇರಬೇಕು, ಆಯುರ್ವೇದವನ್ನು ಕಲಿತವರನ್ನೇ ಹಾಕಬೇಕು. ಹಾಗೆ ಮಾಡುವುದಾದರೆ ಆಯುರ್ವೇದದವರಿಗೆ ನ್ಯಾಯ ದೊರಕುತ್ತದೆಂದು ಹೇಳಬಲ್ಲೆ. ಇಲ್ಲದಿದ್ದರೆ ಸ್ವಾರ್ಥಮನೋಭಾವನೆಯಿಂದ ಅವರಿಗೆ ನ್ಯಾಯ ದೊರೆಯುವುದಿಲ್ಲ.

Sri K. K. HEGDE.—We have got an Adviser who is qualified in Ayurveda to the Director of Medical Services.

ಶ್ರೀ ಯು. ಎಂ. ಮಾದಪ್ಪ.—ನಾನು ಹೇಳುತ್ತಿರುವುದು ಈ ಇಲಾಖೆಯ ಮೇಲಧಿಕಾರಿ ಡೈರೆಕ್ಟರ್ ಆಫ್ ಮೆಡಿಸಿನ್ ಇರುವ ಹಾಗೆ ಡೈರೆಕ್ಟರ್ ಆಫ್ ಆಯುರ್ವೇದ ಒಬ್ಬರನ್ನು ಮಾಡಿ ಎಂದು.

Sri K. K. HEGDE.—We have got an Adviser who is qualified in Ayurveda.

ಶ್ರೀ ಯು. ಎಂ. ಮಾದಪ್ಪ.—ಅದಲ್ಲ ನಾನು ಹೇಳುವುದು. ಆ ರೀತಿ ಮಾಡಿ, ಒಪ್ಪುತ್ತೇನೆ.

ನಮ್ಮಲ್ಲಿ ಲೇಡಿ ಡಾಕ್ಟರುಗಳ ಸಂಖ್ಯೆ ಕಡಮೆ. ಅವರು ಹೆಚ್ಚಾಗಿ ಬರಬೇಕಾದರೆ ಆಕರ್ಷಣೀಯವಾಗಿ ಮಾಡಬೇಕು. ಹೆಚ್ಚು ಮಂದಿ ಲೇಡಿ ಡಾಕ್ಟರುಗಳನ್ನು ನೇಮಿಸಬೇಕು.

ಅದಲ್ಲದೆ ಗ್ರಾಮಾಂತರಗಳಲ್ಲಿರುವ ಆಸ್ಪತ್ರೆಗಳು ಆಕರ್ಷಣೀಯವಾಗಿರುವಂತೆ ಮಾಡಬೇಕು. ಈಗ ಟೌನುಗಳಲ್ಲಿರುವ ಆಸ್ಪತ್ರೆಗಳು ಆಕರ್ಷಣೀಯವಾಗಿವೆ.

ಟೌನುಗಳಲ್ಲಿ ಎಕ್ಸ್‌ರೇ ಇದೆ, ಪ್ರತಿಯೊಂದು ಎಗ್ಜಾಮಿನೇಷನ್ನಿಗೂ ಅವಕಾಶವಿದೆ. ಆ ಸೌಕರ್ಯ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೂ ಇರಬೇಕು. ಎಕ್ಸ್‌ರೇ ಮೆಷೀನ್ ಮತ್ತು ಎಕ್ಸ್‌ಪರ್ಟ್‌ಗಳು ತಾಲ್ಲೂಕು ಆಸ್ಪತ್ರೆಗಳಲ್ಲಿರಬೇಕು. ನಿಜವಾಗಿಯೂ ಕೊಡಗಿನ ರಾಜ್ಯವನ್ನು ಈ ದಿವಸ ನೋಡಬೇಕು, ಅಲ್ಲಿ 9,997 ಪ್ರಜಾಸಂಖ್ಯೆಗೆ ಒಂದು ಆಸ್ಪತ್ರೆಯಿದೆ, ಮತ್ತು ಪ್ರತಿಯೊಂದು ಹೆಡ್‌ಕ್ವಾರ್ಟರಿನಲ್ಲಿರುವ ಆಸ್ಪತ್ರೆಯಲ್ಲೂ ಈಗ ಒಂದು ಎಕ್ಸ್‌ರೇ ಮೆಷೀನ್ ಇದೆ ಅಂಥ ಒಂದು ಸೌಕರ್ಯ ನಮ್ಮ ದೇಶದ ಜನರಿಗೆ ಮುಟ್ಟಿಲ್ಲ. ಈಗಲಾದರೂ ಇಡೀ ಸಂಸ್ಥಾನದಲ್ಲಿ ಆ ಸೌಕರ್ಯ ಒದಗಿಸಬೇಕು, ಕೊಡಗಿನವರು ಮಾಡಿರುವ ವ್ಯವಸ್ಥೆ ಇಡೀ ಸಂಸ್ಥಾನಾಮುಳೆ ಮಾಡಲೇಬೇಕು ಎಂದು ಒತ್ತಾಯ ಮಾಡಿ ಈ ದಿವಸ ನನಗೆ ಸ್ವಲ್ಪ ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

*ಶ್ರೀಮತಿ ಅಲ್ಲಮ್ ಸುಮಂಗಲಮ್ಮ (ಕುರುಗೋಡ್).—ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ಸಮರ್ಥಿಸುತ್ತಾ ನಮ್ಮ ಬಳ್ಳಾರಿ ಜಿಲ್ಲೆಯ ವಿಚಾರದಲ್ಲಿ ಒಂದೆರಡು ಸೂಚನೆಗಳನ್ನು ಮಾಡಲು ಬಯಸುತ್ತೇನೆ. ನಮ್ಮ ಬಳ್ಳಾರಿ ಜಿಲ್ಲೆಯ ಹಳ್ಳಿಗಳನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ. ಅಲ್ಲಿ ವೈದ್ಯಕೀಯ ಸೌಲಭ್ಯ ಜನರಿಗೆ ಸರಿಯಾದ ರೀತಿಯಲ್ಲಿ ದೊರೆಯುವ ವ್ಯವಸ್ಥೆಯಿಲ್ಲ. ಅದರಲ್ಲಿಯೂ ವಿಶೇಷವಾಗಿ ಹಳ್ಳಿಗಾಡಿನಲ್ಲಿರತಕ್ಕ ಹೆಂಗಸರಿಗೆ ವೈದ್ಯಕೀಯ ಸೌಲಭ್ಯವಿಲ್ಲದೆ ಅವರು ಜೀವನಮಾಡುವುದು ಬಹಳ ಕಷ್ಟವಾಗಿದೆ. ಹೆರಿಗೆಯ ಕಾಲದಲ್ಲಿ ಬೇಕಾಗುವ ವೈದ್ಯಕೀಯ ಸಹಾಯ ಸೌಲಭ್ಯ ಹಳ್ಳಿಗಳಲ್ಲಿರತಕ್ಕ ಹೆಂಗಸರಿಗೆ ದೊರೆಯುತ್ತಿಲ್ಲ. ಅಲ್ಲ ಮಿಡ್‌ವೈಫ್ ಮತ್ತು ನರ್ಸ್ ಯಾರೂ ಇಲ್ಲ. ಆದುದರಿಂದ ನಾಲ್ಕೈದು ಹಳ್ಳಿಗಳಿಗೆ ಒಂದು ಸೆಂಟರ್‌ಮಾಡಿ ಅಲ್ಲಿ ವೈದ್ಯಕೀಯ ಸೌಲಭ್ಯ ಮತ್ತು ನರ್ಸ್ ಹಾಗೂ ಮಿಡ್‌ವೈಫ್ ಇವರ ಸಹಾಯ ದೊರಕುವ ಹಾಗೆ ತಕ್ಕ ಏರ್ಪಾಡು ಮಾಡಬೇಕಾದುದು ಅಗತ್ಯ. ಬಳ್ಳಾರಿ ಜಿಲ್ಲೆಯಲ್ಲಿ ಹೆಂಗಸರ ಸಲುವಾಗಿ ಒಂದೇ ಒಂದು ಹೆರಿಗೆಯ ಆಸ್ಪತ್ರೆ ಇದೆ. ಆದಕಾರಣ ಹಳ್ಳಿಗಳಲ್ಲಿ ಒಂದೊಂದು ಸೆಂಟರ್‌ಮಾಡಿ ಅಲ್ಲಿ ವೈದ್ಯಕೀಯ ಸೌಕರ್ಯ ಮತ್ತು ಬಳ್ಳಾರಿಯಲ್ಲಿ ಒಂದು ಹೆರಿಗೆಯ ಆಸ್ಪತ್ರೆ ತೆರೆಯಬೇಕೆಂದು ತಮ್ಮಲ್ಲಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಶಿರಗುಪ್ಪ, ಹೊಸಪೇಟೆ, ಸಂಡೂರ ತಾಲ್ಲೂಕುಗಳಿಂದ ಬಳ್ಳಾರಿಗೆ ಬರತಕ್ಕ ಜನರಿಗೆ ಯಾವ ಸೌಲಭ್ಯವಿಲ್ಲ. ಈ ಜನರು ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಒಂದು ಮೆಡಿಕಲ್ ಕಾಲೇಜನ್ನು ಬಳ್ಳಾರಿಯಲ್ಲಿ ಸ್ಥಾಪನೆಮಾಡಬೇಕು. ಎಷ್ಟೋ ಹೆಂಗಸರಿಗೆ ಬಳ್ಳಾರಿ ಜಿಲ್ಲೆಯಿಂದ ಹೊರಗೆ ಹೋಗಿ ಕಲಿಯುವುದಕ್ಕೆ ಆಗುವುದಿಲ್ಲ. ಬಳ್ಳಾರಿಯಲ್ಲಿ ಒಂದು ಮೆಡಿಕಲ್ ಕಾಲೇಜು ಆದರೆ ಅಲ್ಲಿ ಕಲಿಯುವುದಕ್ಕೆ ಸಿದ್ಧರಿರುತ್ತಾರೆ. ಅವರಿಗೆ ಬಳ್ಳಾರಿಯಲ್ಲಿ ಶಿಕ್ಷಣ ಕೊಟ್ಟು ನಮ್ಮ ಹಳ್ಳಿಗಾಡಿನಲ್ಲಿ ಅವರ ಸೇವೆ ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಬಳ್ಳಾರಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪನೆಮಾಡಬೇಕೆಂದು ನಾನು ಬಹಳ ಒತ್ತಾಯ ಪೂರ್ವಕವಾಗಿ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಆ ರೀತಿ ಮಾಡುವರೆಂದು ನಂಬಿಕೊಂಡು ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎ. ಆರ್. ಕರಿಸಿದ್ದಪ್ಪ (ಅರಸೀಕೆರೆ).—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಮ್ಮ ಆರೋಗ್ಯ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಡಿಮ್ಯಾಂಡನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಈ ಬೇಡಿಕೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ನಮ್ಮ ದೇಶದಲ್ಲಿ ಜನರಿಗೆ ವೈದ್ಯಕೀಯ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೂ, ಜನರ ಆರೋಗ್ಯವನ್ನು ಉತ್ತಮಪಡಿಸುವುದಕ್ಕೂ ಸರ್ಕಾರದವರು ವೈದ್ಯಕೀಯ ಸಂಸ್ಥೆಗಳನ್ನು ಒದಗಿಸಿದ್ದಾರೆ. ನಮ್ಮ ದೇಶದಲ್ಲಿ ಒಟ್ಟು ಇಂಥ 887 ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಈ 887 ಸಂಸ್ಥೆಗಳ ಪೈಕಿ 737 ಸಂಸ್ಥೆಗಳು ಗ್ರಾಮಗಳಲ್ಲಿವೆ. ಸುಮಾರು 150ರಷ್ಟು ಪಟ್ಟಣಗಳಲ್ಲಿವೆ. ಆದಷ್ಟು ಜನಸಂಖ್ಯೆ ಹೆಚ್ಚಾಗಿರುವ ಪ್ರದೇಶದಲ್ಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿದ್ದಾರೆ ಎಂಬುದು ಕಂಡುಬರುತ್ತದೆ. ಆದರೆ ನಮ್ಮ ದೇಶದಲ್ಲಿನ ಜನ ಸಂಖ್ಯೆಯ ಪ್ರಮಾಣಕ್ಕೆ ಆ ಸಂಸ್ಥೆಗಳು ತೀರ ಕಡಿಮೆ ಪ್ರಮಾಣದಲ್ಲಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇವತ್ತಿನ ದಿವಸ ವೈದ್ಯಕೀಯ ಸೌಲಭ್ಯ, ಶಸ್ತ್ರಚಿಕಿತ್ಸೆಯ ಸೌಕರ್ಯ ಒದಗಿಸಿಕೊಡುತ್ತಿದ್ದರೂ ಅದು ಅಷ್ಟು ಉತ್ತಮ ಮಟ್ಟದಲ್ಲಿ ದೊರೆಯುವುದಿಲ್ಲವೆಂದು ಹೇಳಬಹುದು. ವೈದ್ಯಕೀಯ ಸೌಲಭ್ಯವನ್ನು ಉತ್ತಮ ಮಟ್ಟದಲ್ಲಿ ಈಗಿನ ಕಾಲಕ್ಕೆ ಅನುಸಾರವಾಗಿ ಹೇಗೆ ಒದಗಿಸಬೇಕು ಎಂಬುವುದಕ್ಕೆ ಒಂದು ನಿರ್ದಿಷ್ಟವಾದ ಯೋಜನೆ ಸರ್ಕಾರದಲ್ಲಿಲ್ಲ. ಸುಮಾರು 150 ಆಸ್ಪತ್ರೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೇ ಇವೆ. ಸಿಟಿಗಳಲ್ಲಿರತಕ್ಕಂಥ ಆಸ್ಪತ್ರೆಗಳು ದೊಡ್ಡ ಆಸ್ಪತ್ರೆಗಳು ಅಂದರೆ ಮೇಜರ್ ಹಾಸ್ಪಿಟಲ್ಸ್ ಆಗಿವೆ. ಇವುಗಳ ಮೂಲಕ ಶಸ್ತ್ರಚಿಕಿತ್ಸೆ, ಔಷಧೋಪಚಾರ ಜನಗಳಿಗೆ ದೊರಕುತ್ತದೆ. ನಮ್ಮ ಮೈಸೂರು ದೇಶ ಒಂದು ಮಾದರಿ ಸಂಸ್ಥಾನವಾಗಿದೆ. ಇಲ್ಲಿ ನಾವು ರಾಮರಾಜ್ಯ ಕಟ್ಟಬೇಕು ಎಂದು ಹೇಳುತ್ತೇವೆ. ಆದರೆ ಈಗ ಜನಗಳಿಗೆ ದೊರೆಯತಕ್ಕಂಥ ಶಸ್ತ್ರಚಿಕಿತ್ಸೆಯ ಸೌಲಭ್ಯ ಹೇಗೆ ಇದೆ ಎಂದರೆ, ವೈದ್ಯಕೀಯ ಸೌಲಭ್ಯದ ವಿಚಾರದಲ್ಲಿ ನಮ್ಮ ಅಕ್ಕಪಕ್ಕದಲ್ಲಿರತಕ್ಕಂಥ ರಾಜ್ಯಗಳೊಂದಿಗೆ ಹೋಲಿಸಿಕೊಂಡು ನೋಡಿದರೆ, ನಮ್ಮಲ್ಲಿಯ ಶಸ್ತ್ರಚಿಕಿತ್ಸೆಯ ವಿಧಾನ ಇನ್ನೂ ಕೆಳಮಟ್ಟದಲ್ಲಿ ನಡೆಯುತ್ತಾ ಇದೆ ಎಂದು ಹೇಳಬಹುದು. ಬೊಂಬಾಯಿ, ಮದ್ರಾಸ್, ಕಲ್ಕತ್ತಾಗಳಲ್ಲಿ ದೊರೆಯುವ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು ಹೋಲಿಸಿಕೊಂಡು ನೋಡಿದರೆ ನಮ್ಮ ಸಂಸ್ಥಾನದಲ್ಲಿ ಅದು ಅಷ್ಟು ಉತ್ತಮ ಮಟ್ಟದಲ್ಲಿ ಇಲ್ಲ ಮತ್ತು ಈಗಿನ

(ಶ್ರೀ ಎ. ಆರ್. ಕರಿಸಿದ್ದಪ್ಪ)

ಕಾಲಕ್ಕೆ ಅನುಸಾರವಾಗಿ ನಡೆಯುತ್ತಾ ಇಲ್ಲ. ಸುಮಾರು 30 ವರ್ಷಗಳ ಹಿಂದೆ ಯಾವ ರೀತಿಯಲ್ಲಿ ಶಸ್ತ್ರಚಿಕಿತ್ಸೆ ನಡೆಯುತ್ತಿತ್ತೋ ಅದೇ ಮಟ್ಟದಲ್ಲಿ ಇಂದಿಗೂ ಸಹ ನಡೆಯುತ್ತಿದೆ. ವಿಕ್ಟೋರಿಯಾ ಆಸ್ಪತ್ರೆಯನ್ನು ತೆಗೆದುಕೊಂಡರೂ ಸಹ 30 ವರ್ಷಗಳ ಹಿಂದೆ ಯಾವ ರೀತಿಯಲ್ಲಿ ಸಾಮಾನ್ಯವಾದ ಸರ್ಜಿಕಲ್ ಆಪರೇಷನ್ಸ್ ನಡೆಯುತ್ತಿದ್ದವೋ ಅದೇ ರೀತಿಯಲ್ಲಿ ಈಗಿನ ಕಾಲದಲ್ಲಿ ನಡೆಯುತ್ತಿವೆಯೇ ಹೊರತು ಜನಗಳಿಗೆ ಅಷ್ಟು ಉತ್ತಮ ಮಟ್ಟದಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬುದನ್ನು ಸರ್ಕಾರ ಯೋಚನೆ ಮಾಡಿಲ್ಲ ಎಂದು ಹೇಳಬೇಕಾಗಿದೆ. ಏತಕ್ಕೆಂದರೆ ಇಲ್ಲಿ ನಡೆಯುತ್ತಿರುವ ಅಪೆಂಡಿಸೈಟಿಸ್ ಅಬ್ಡಾಮಿನಲ್ ಆಪರೇಷನ್ ಗ್ಯಾಸ್ಟ್ರಿಕ್ ಆಪರೇಷನ್ ಆಗುತ್ತಿಲ್ಲ. ಸಣ್ಣ ಸಣ್ಣ ಆಪರೇಷನ್ಸ್ ಮಾಡುತ್ತಾರೆ. 30 ವರ್ಷಗಳ ಹಿಂದೆ ನಡೆಯುತ್ತಾ ಇದ್ದ ಶಸ್ತ್ರಚಿಕಿತ್ಸೆ ಇಂದಿಗೂ ಹಾಗೆಯೇ ನಡೆಯುತ್ತಾ ಇದೆ. ಈ ವಿಚಾರದಲ್ಲಿ ಏನೇನೂ ಮುಂದುವರಿದ ರೀತಿಯಲ್ಲಿ ಶಸ್ತ್ರಚಿಕಿತ್ಸೆ ಮಾಡುತ್ತಿಲ್ಲ. ಥೊರಾಂಜಿಕ್ ಸರ್ಜರಿ ಅಂದರೆ ಶ್ವಾಸಕೋಶದ ಒಂದು ಭಾಗಕ್ಕೆ ರೋಗ ಬಂದರೆ ಅದಕ್ಕೆ ಆಪರೇಷನ್ ಮಾಡಬಹುದು. ಮತ್ತೊಂದು ಶ್ವಾಸಕೋಶದಿಂದ ಮನುಷ್ಯ ಬದುಕುವುದಕ್ಕೆ ಅವಕಾಶವಿರುತ್ತದೆ. ನಮ್ಮ ಮೈಸೂರು ದೇಶದಲ್ಲಿ ಒಂದೇ ಕಡೆ ಸ್ಯಾನಿಟೋರಿಯಂನಲ್ಲಿ ಈ ಸೌಲಭ್ಯ ಇದೆ.

ಶ್ರೀ ಕೆ. ಕೆ. ಹೆಗ್ಗಡೆ.—ಬೆಂಗಳೂರಿನಲ್ಲಿ ಈ ಸೌಲಭ್ಯವಿದೆ.

Sri A. R. KARISIDDAPPA.—Do you know the number of thorangic surgery undertaken?

Sri K. K. HEGDE.—We have a man qualified for that also in Bangalore.

ಶ್ರೀ ಎ. ಆರ್. ಕರಿಸಿದ್ದಪ್ಪ.—ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅರಸೀಕೆರೆಯಲ್ಲಿ ಥೊರಾಂಜಿಕ್ ಸರ್ಜರಿಗೆ ಅವಕಾಶವಿರುವುದಿಲ್ಲ, ಅರಸೀಕೆರೆಯಲ್ಲಿ ಒಬ್ಬ ರೋಗಿಯನ್ನು ನಾನೇ ಪರೀಕ್ಷೆಮಾಡಿ ಥೊರಾಂಜಿಕ್ ಸರ್ಜರಿಯ ಸಲುವಾಗಿ ಹೊರಗಡೆಗೆ ಕಳಿಸಿದ್ದೆ. ಅವರು ಹೇರಳವಾಗಿ ದುಡ್ಡು ಖರ್ಚುಮಾಡಿ ಈ ಆಪರೇಷನ್ ಮಾಡಿಸಿಕೊಂಡು ರೋಗದಿಂದ ಮುಕ್ತರಾಗಿ ಈಗ ಸುಖದಿಂದ ಇದ್ದಾರೆ. ಒಬ್ಬ ಸಾಮಾನ್ಯ ಮನುಷ್ಯನಿಗೆ, ಬಡವನಿಗೆ ಇಂಥ ಕಾಯಿಲೆ ಬಂದಪಕ್ಷದಲ್ಲಿ ಇಂಥ ಶಸ್ತ್ರಚಿಕಿತ್ಸೆಯ ಸೌಲಭ್ಯ ದೊರಕುವಹಾಗೆ ಮಾಡಬೇಕಾಗಿದೆ. ಬಡವನಿಗೆ ಇಂಥ ಕಾಯಿಲೆ ಬಂದ ಪಕ್ಷದಲ್ಲಿ ಶಸ್ತ್ರಚಿಕಿತ್ಸೆಯ ಅನುಕೂಲವನ್ನು ಮಾಡಿಕೊಡದೇ ಇರುವುದರಿಂದ ಇದನ್ನು ನಾನು ಹೇಳುತ್ತಿದ್ದೇನೆ.

12 NOON

ಆಮೇಲೆ ತಾವು ಉತ್ತರ ಹೇಳುವಾಗ ಹೇಳಬಹುದು. ಏಕೆಂದರೆ ಅಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಆಪರೇಷನ್ ಆಗುತ್ತಾ ಇದೆ, ಎಂದು ಕೇಳಿದ್ದೇನೆ. ಆದ್ದರಿಂದ ಈ ಒಂದು ಥೆರೋಪೆಟಿಕ್ ಸರ್ಜರಿ ಅವಶ್ಯಕತೆ ಇದೆ. ಅದಕ್ಕೆ ಸರ್ಕಾರದವರು ಒಂದು ಯೋಜನೆಮಾಡಿ, ಇವತ್ತು ಮೇಜರ್ ಆಸ್ಪತ್ರೆಗಳು ಏನಿವೆ ಅವುಗಳಲ್ಲಿ ಜನಗಳಿಗೆ ಸುಲಭವಾಗಿ ಬಹಳ ಕಡಿಮೆ ಖರ್ಚಿನಲ್ಲಿ ಸೌಲಭ್ಯ ದೊರೆಯುವಹಾಗೆ ಮಾಡಬೇಕೆಂದು ಸರ್ಕಾರದವರಲ್ಲಿ ಸಲಹೆಮಾಡುತ್ತೇನೆ; ಮತ್ತು ಹೊಸದಾಗಿ ಈಗೇನೋ ಒಬ್ಬನೇ ಒಬ್ಬ ಆರ್ಥೋಪೆಡಿಕ್ ಸರ್ಜನ್ನು ನೇಮಕಮಾಡಿದ್ದೀರಿ. ಆರ್ಥೋಪೆಡಿಕ್ ಸರ್ಜರಿ ಬಹಳ ಮುಖ್ಯವಾದದ್ದು. ಅದಕ್ಕೆ ಇವತ್ತು ಹೊರಗಡೆ ಕಲ್ಕತ್ತಾ ಮತ್ತು ಬೊಂಬಾಯಿನಲ್ಲಿ ಉತ್ತಮ ರೀತಿಯ ಸೌಲಭ್ಯ ಒದಗಿಸಿದ್ದಾರೆ. ಈಗ ಕೆಲವು ತಿಂಗಳ ಹಿಂದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಬ್ಬರು ಸರ್ಜನ್ ಇದ್ದರು.

ಶ್ರೀ ಕೆ. ಕೆ. ಹೆಗ್ಗಡೆ.—ಮಂಗಳೂರಿನಲ್ಲೂ ಕೂಡ ಒಂದು ಸೌಕರ್ಯ ಉಂಟು.

ಶ್ರೀ ಎ. ಆರ್. ಕರಿಸಿದ್ದಪ್ಪ.—Bone surgery, ಇದಕ್ಕೂ ಸಹ ಉತ್ತಮ ಮಟ್ಟದಲ್ಲಿ ಜನಗಳಿಗೆ ಸೌಕರ್ಯ ಒದಗಿಸಿಕೊಡುವುದಕ್ಕೆ ಒಂದೂ ಯೋಜನೆಮಾಡಿಲ್ಲ ಎಂದು ಹೇಳಿ, ಇದನ್ನು ಆದಷ್ಟು ಉತ್ತಮ ಮಟ್ಟದಲ್ಲಿ ಇಟ್ಟು ಜನಗಳಿಗೆ ಸೌಕರ್ಯ ಒದಗಿಸಿಕೊಡುತ್ತೀರಿ ಎಂದು ನಂಬಿಕೊಂಡಿದ್ದೇನೆ.

ದೊಡ್ಡ ಆಸ್ಪತ್ರೆಗಳಲ್ಲಿಯೇ ಆಗಲೀ, ಸಣ್ಣ ಆಸ್ಪತ್ರೆಗಳಲ್ಲಿಯೇ ಆಗಲೀ ಏನಿವತ್ತು ಜನಗಳಿಗೆ ಸೌಲಭ್ಯ ಇದೆ, ಯಾವ ಮಟ್ಟದಲ್ಲಿ ಸೌಲಭ್ಯ ದೊರೆಯುತ್ತಾ ಇದೆ ಎನ್ನುವುದನ್ನು ತಿಳಿಸುವಾಗ ಅಲ್ಲಿರತಕ್ಕ ಒಂದೆರಡು ಲೋಪದೋಷಗಳ ವಿಚಾರ ಹೇಳುತ್ತೇನೆ. ಸರ್ಜಿಕಲ್ ಆಪರೇಷನ್ ಆಗಬೇಕಾಗುತ್ತದೆ. ಅದಕ್ಕೆ ಹಳ್ಳಿಗಾಡಿನಿಂದ ಯಾವನಾದರೂ ಒಬ್ಬ ಬಂದಪಕ್ಷದಲ್ಲಿ ಅವನಿಗೆ ಎಷ್ಟು ಮಟ್ಟಿಗೆ ಈ ದೊಡ್ಡ ಆಸ್ಪತ್ರೆಗಳಲ್ಲಿ ಸೌಲಭ್ಯ ದೊರೆಯಬಹುದು ಎಂಬುದನ್ನು ಸರ್ಕಾರದವರು ಮೊದಲನಿಂದಲೂ ಯೋಚನೆಮಾಡಿಲ್ಲ, ತಿಳಿದುಕೊಂಡಿಲ್ಲ ಎಂದು ಭಾವಿಸಿದ್ದೇನೆ. ಏಕೆಂದರೆ ಹಳ್ಳಿಯಿಂದ ಬಂದವನಿಗೆ ಈ ಆಸ್ಪತ್ರೆಯಲ್ಲಿ ಅಡ್ಮಿಷನ್ ಸಿಕ್ಕುವುದಕ್ಕೆ ಎಷ್ಟೋ ಕಷ್ಟವಿದೆ, ಅಡ್ಮಿಷನ್ ಆದರೂ ಕೂಡ ಆಪರೇಷನ್ ಮಾಡುವಾಗ ಸಂಬಂಧಪಟ್ಟ ಸರ್ಜನ್ ಯಾರು ಇರುತ್ತಾರೋ ಅವರು ನೋಡಿದ ಪಕ್ಷದಲ್ಲಿ ಮಾತ್ರ he will be posted for operation ಇಲ್ಲದೇ ಇದ್ದ ಪಕ್ಷದಲ್ಲಿ ಅವನು ತಿಂಗಳುಗಟ್ಟಲೆ ಆಸ್ಪತ್ರೆಯಲ್ಲಿ ಹಾಗೆಯೇ ಉಳಿಯಬೇಕಾಗುತ್ತದೆ.

ಶ್ರೀ ಕೆ. ಕೆ. ಹೆಗ್ಗಡೆ.—ನಿದರ್ಶನ ಕೊಡಬಹುದು.

ಶ್ರೀ ಎ. ಆರ್. ಕರಿಸಿದ್ದಪ್ಪ.—ಬೇಕಾದಷ್ಟು ನಿದರ್ಶನಗಳು ಇವೆ. ಅದು ಪ್ರತಿಯೊಬ್ಬರಿಗೂ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟ ಡಾಕ್ಟರಾಗಲಿ, ಇನ್ನಾರಾದರೂ ಆಗಲಿ ನೋಡದೆ ಹೋದ ಪಕ್ಷದಲ್ಲಿ ಅವನಿಗೆ ನಿಜವಾಗಿಯೂ ಏನು ಒಂದು ಸೌಕರ್ಯ ಒದಗಬೇಕಾಗಿತ್ತೋ ಅದು ದೊರೆಯುವುದು ಬಹಳ ಕಷ್ಟ, ಇದು ಪ್ರತಿಯೊಬ್ಬರಿಗೂ ಗೊತ್ತಿದೆ. ನಿದರ್ಶನಗಳು ಬೇಕಾದರೆ ನಾನು ಮಂತ್ರಿಗಳಿಗೆ ಹೇಳುತ್ತೇನೆ.

ಸುಮಾರು 737 ಆಸ್ಪತ್ರೆಗಳು ಹಳ್ಳಿಗಾಡಿನಲ್ಲಿ ಇವೆ. ಈ ಆಸ್ಪತ್ರೆಗಳನ್ನು ಸರ್ಕಾರದವರು ಹೆಸರಿಗೆ ಮಾತ್ರ ಇಟ್ಟಿದ್ದಾರೇನೋ ಎಂದು ಭಾವನೆಯಾಗುತ್ತದೆ. ಏಕೆಂದರೆ ಈ ಆಸ್ಪತ್ರೆಗಳಿಗೆ ಸರ್ಕಾರದವರು ಔಷಧಿಗಳನ್ನು ಒದಗಿಸುವುದಿಲ್ಲವೋ ಅಥವಾ ಡಾಕ್ಟರುಗಳೇ ಬೇರೆ ರೀತಿಯಲ್ಲಿ ಉಪಯೋಗಿಸುತ್ತಾರೆಯೋ ಯಾವುದೂ ಗೊತ್ತಾಗುವುದಿಲ್ಲ. ಈ ಆಸ್ಪತ್ರೆಗಳಿಗೆ ಔಷಧಿಗಳ ಸಪ್ಲೈ ಹೇಗಿರುತ್ತದೆ ಎಂದರೆ, ಒಂದು ಔಷಧಿ ಮಿಕ್ಸ್‌ಚರ್‌ಮಾಡಿ ಕೊಡಬೇಕಾದರೆ ಟಿಂಕ್ಚರ್ ಬೇಕಾಗುತ್ತದೆ, ಡ್ರಗ್ಸ್, ಪೌಡರ್ಸ್ ಬೇಕಾಗುತ್ತವೆ. ಅದನ್ನೂ ಯಾವುದನ್ನೂ ಕಳುಹಿಸುವುದಿಲ್ಲ. ಬಂದರೂ ಕೂಡ ಬರೀ ಟಿಂಕ್ಚರನ್ನೇ ಕಳುಹಿಸುತ್ತಾರೆ. ಡಾಕ್ಟರು ಏನು ಮಾಡಬೇಕು ? ಅವರು ಏನು ಮಾಡುತ್ತಾರೆ ? ಯಾವ ಔಷಧಿ ಇರುತ್ತದೆಯೋ ಅದನ್ನೇ

ಕೊಡುತ್ತಾರೆ, ಎಲ್ಲಾ ಖಾಯಿಲೆಗಳಿಗೂ ಒಂದೇ ತರಹದ ಔಷಧಿ ಕೊಡುತ್ತಾರೆ. ಬಹಳ ordinary ಆಗಿರತಕ್ಕ ಔಷಧಿಗಳು ಬೇಕಾಗುತ್ತವೆ. ಅವುಗಳನ್ನು ಸರ್ಕಾರದವರು ಸಪ್ಲೈಮಾಡುತ್ತಾ ಇಲ್ಲವೇನೋ ಎಂಬ ಭಾವನೆ ಇದೆ. ಅರಸೀಕೆರೆಯಲ್ಲಿ ಒಂದು ಕಂಬೈನ್ಡ್ ಡಿಸ್ಪೆನ್ಸರಿ ಇದೆ. ಕಂಬೈನ್ಡ್ ಡಿಸ್ಪೆನ್ಸರಿ ಎಂದರೆ ಹೆಂಗಸರು, ಗಂಡಸರು ಇಬ್ಬರಿಗೂ ಔಷಧಿ ಕೊಡುತ್ತಾರೆ, ಒಬ್ಬರು ಲೇಡಿ ಡಾಕ್ಟರ್ ಇದ್ದಾರೆ, ಇನ್ನೊಬ್ಬರು male ಡಾಕ್ಟರು ಇದ್ದಾರೆ. ಅಲ್ಲಿ 20 ಜನರು ಇನ್‌ಪೇಷಂಟ್ಸ್ ಆಗಿ ಇರುವುದಕ್ಕೆ ಸೌಲಭ್ಯವಿದೆ. ಮತ್ತು ಹೆರಿಗೆಗೆ ಐದು ಬೆಡ್ಸ್ ಸೌಲಭ್ಯ ಇದೆ. ಈ ಆಸ್ಪತ್ರೆಯಲ್ಲಿ ಯಾವ ಕಾಲಕ್ಕೂ ಕೂಡ ordinary ಆಗಿರತಕ್ಕ ಲಿನನ್, ಟಿಂಕ್ಚರ್ ಯಾವಾಗಲೂ ಸಪ್ಲೈ ಆಗುವುದೇ ಇಲ್ಲ. ಅವನು ದುಡ್ಡು ಇದ್ದವನಾಗಲಿ, ದುಡ್ಡು ಇಲ್ಲದವನಾಗಲಿ ಯಾವಾಗಲೂ ಔಷಧಿಗೆ ಹೊರಗಡೆಯಿಂದ ತಂದುಕೊಡಬೇಕೆಂದು ಬರೆದು ಕೊಡುತ್ತಾರೆ. ಅದೂ ಅಲ್ಲದೆ 20 ಜನ ಇನ್‌ಪೇಷಂಟ್ ಗಳಿಗೆ ಅವಕಾಶವಿದೆ, ಅದಕ್ಕೆ 20 ಮಂಚಗಳು ಮಾತ್ರ ಇವೆ. There are only cots without beds, without bedsheets and even without blankets. ಈ ತರಹದ ಆಸ್ಪತ್ರೆ ಅರಸೀಕೆರೆಯಲ್ಲಿ ಇದೆ. I can only say that it is just a cow shed. ಸರ್ಕಾರದವರು ಆಸ್ಪತ್ರೆ ಇಟ್ಟಿರುವುದು ಕಾಯಿಲೆ ಗುಣಪಡಿಸುವುದಕ್ಕೆ. ಈಗ ಅವು ಹಾಗೆ ಆಗದೇ ಜನರು ತಮ್ಮಲ್ಲಿ ಇಲ್ಲದೇ ಇರತಕ್ಕ ಕಾಯಿಲೆಯನ್ನು ಅಲ್ಲಿಂದ ತೆಗೆದುಕೊಂಡು ಹೋಗುವುದಕ್ಕೆ ಬರತಕ್ಕ ಸ್ಥಳಗಳಾಗಿವೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಹಳ್ಳಿಗಳಲ್ಲಿರತಕ್ಕ ಆಸ್ಪತ್ರೆಗಳನ್ನು ಪ್ರವಾಸಮಾಡಿ ನೋಡಿಲ್ಲ ಎಂದು ಭಾವಿಸುತ್ತೇನೆ. ಅವರು ಈ ಆಸ್ಪತ್ರೆಗಳ ಸ್ಥಿತಿಗತಿ ಹೇಗಿದೆ, ಅವನ್ನು ಹೇಗೆ ಉತ್ತಮಪಡಿಸಬೇಕೆನ್ನುವುದನ್ನು ನೋಡಿ ತಕ್ಕ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ.

